ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮೇ 28 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 42 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೇ 31ರ ಬೆಳಗ್ಗೆ 10 ಗಂಟೆಗೆ ಎಸ್‌ಐಟಿ ಮುಂದೆ ಹಾಜರಾಗ್ತೇನೆ...

ಅಂತೂ ಬಂತು ಪ್ರಜ್ವಲ್ ಸಂದೇಶದ ವಿಡಿಯೋ

● ವಿದೇಶದಿಂದಲೇ ವಿಡಿಯೋ ಮೂಲಕ ದಿಢೀರ್ ಪ್ರತ್ಯಕ್ಷನಾದ ಪ್ರಜ್ವಲ್; 2.57 ನಿಮಿಷದ ವಿಡಿಯೋದಲ್ಲಿ ಹಲವು ಸ್ಪಷ್ಟನೆ ● ಎಸ್‌ಐಟಿಗೆ ಸರಿಯಾದ ರೀತಿ ಉತ್ತರ ಕೊಡುವೆ; ನನ್ನ ವಿರುದ್ಧ ಕಾಂಗ್ರೆಸ್ ರಾಜಕೀಯ ಪಿತೂರಿ ● ಹಾಸನದ ಕೆಲವು ಶಕ್ತಿಗಳು ಒಟ್ಟಾಗಿವೆ; ಸುಳ್ಳು ಪ್ರಕರಣದಿಂದ ಆಚೆ ಬಂದೇ ಬರ್ತೇನೆ...

ಮೈಸೂರು, ಮೇ 27(ಬಿಎಲ್‌ಯು)– ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಸಂಸದ ಪ್ರಜ್ವಲ್ ರೇವಣ್ಣ ಅಂತೂ 31 ದಿನದ ನಂತರ ಪ್ರತ್ಯಕ್ಷ. ಇಂದು ತಮ್ಮ **ಹೇಳಿಕೆಯ ವಿಡಿಯೋ ಬಿಡುಗಡೆ ಮಾಡಿದ್ದು, ಸದ್ಯ ವಿದೇಶದಲ್ಲಿರುವ ಪ್ರಜ್ವಲ್ ಮೇ 31 ರಂದು ಬೆಳಗ್ಗೆ 10 ಗಂಟೆಗೆ ಎಸ್‌ಐಟಿ (ವಿಶೇಷ ತನಿಖಾ ತಂಡ) ಮುಂದೆ ಬರ್ತೇನೆ ಎಂದು ವಿಡಿಯೋದಲ್ಲಿ ತಿಳಿಸಿದ್ದಾರೆ. ಇದರಿಂದ ಪೆನ್‌ಡ್ರೈವ್ ಪ್ರಕರಣ ಕುತೂಹಲಕಾರಿ ಘಟ್ಟ ತಲುಪಿದೆ.**

ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದಲ್ಲೇ ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ ಸಂಚಲನ ಸೃಷ್ಟಿಸಿತ್ತು. ಕಳೆದ ಏಪ್ರಿಲ್ 26 ರಂದು ನಡೆದ ಲೋಕಸಭಾ ಚುನಾವಣೆ ಬಳಿಕ ದಿಢೀರ್ ನಾಪತ್ತೆಯಾಗಿದ್ದ ಪ್ರಜ್ವಲ್ ಇಂದು ವಿಡಿಯೋದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷರಾಗಿದ್ದಾರೆ. ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ ಆಡಳಿತರೂಢ ಕಾಂಗ್ರೆಸ್ ಹಾಗೂ ಮೈತ್ರಿ ಪಕ್ಷಗಳಾದ ಜೆಡಿಎಸ್, ಬಿಜೆಪಿ ನಾಯಕರ ನಡುವೆ ವಾಕ್ಸಮರಕ್ಕೆ ಕಾರಣವಾಗಿತ್ತು. ವಿದೇಶದಲ್ಲಿ ನಾಪತ್ತೆಯಾಗಿರುವ ಪ್ರಜ್ವಲ್ ಪಾಸ್‌ಪೋರ್ಟ್ ರದ್ದು ಮಾಡುವ ವಿಚಾರ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕಚೇರಿ ಅಂಗಳ ಕೂಡ ತಲುಪಿತ್ತು. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಪ್ರಜ್ವಲ್ ಬಳಿ ಇರುವ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಮಾಡುವಂತೆಯೂ ಆ ಮೂಲಕ ತನಿಖೆಗೆ ಸಹಕಾರ ನೀಡುವಂತೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಕೇಂದ್ರ ವಿದೇಶಾಂಗ ಇಲಾಖೆ ಪ್ರಜ್ವಲ್‌ಗೆ ನೋಟಿಸ್ ಜಾರಿ ಮಾಡಿ ಪಾಸ್‌ಪೋರ್ಟ್ ರದ್ದು ಮಾಡುವ ಪ್ರಕ್ರಿಯೆ ಆರಂಭಿಸಿತ್ತು. ● 6ನೇ ಪುಟಕ್ಕೆ



ಡಿಪ್ರೇಷನ್, ಐಸೋಲೇಷನ್‌ಗೆ ಹೋಗಿದ್ದೆ

ಪೆನ್‌ಡ್ರೈವ್ ಪ್ರಕರಣದಿಂದ ನಾನು ಮಾನಸಿಕ ಖಿನ್ನತೆಗೆ ಒಳಗಾಗಿದ್ದೆ ಐಸೋಲೇಷನ್ (ಒಬ್ಬಂಟಿ)ನಲ್ಲಿದ್ದೆ. ರಾಜಕೀಯವಾಗಿ ಬೆಳೆಯುತ್ತಿರುವ ನನ್ನನ್ನು ಕುಗ್ಗಿಸಲು ಏನೇನೊ ಪ್ರಕರಣದಲ್ಲಿ ಸಿಲುಕಿಸುವ ಪಿತೂರಿ ಮಾಡಿದರು. ಇದರಿಂದ ಸಾಕಷ್ಟು ಆಘಾತಕ್ಕೆ ಒಳಗಾಗಿ ನಾನೇ ಒಂದು ಚೂರು ದೂರ ಇದ್ದೆ ಎಂದು ಪ್ರಜ್ವಲ್ ವಿವರಣೆ ನೀಡಿದ್ದಾರೆ. ಸದ್ಯ ಪ್ರಜ್ವಲ್ ವಿದೇಶದಲ್ಲಿರುವುದು ಖಚಿತವಾಯ್ತು. ವಿದೇಶದಲ್ಲಿ ದೇವರ ಮೊರೆ ಹೋಗಿರುವುದು. ಅವರ ಹಣೆಯಲ್ಲಿ ಕುಂಕುಮ ಇರುವುದನ್ನು ನೋಡಿದರೆ ದಿಟವಾಗುತ್ತದೆ.

“ ಹೆಚ್.ಡಿ.ದೇವೇಗೌಡರು ನೀಡಿದ ನಿರ್ದೇಶನಕ್ಕೆ ಪ್ರಜ್ವಲ್ ರೇವಣ್ಣ ಪ್ರತಿಕ್ರಿಯಿಸಿರುವುದು ಸಮಾಧಾನ ತಂದಿದೆ. ಮೇ 31ರಂದು ತನಿಖೆಗೆ ಎಸ್‌ಐಟಿಗೆ ಹಾಜರಾಗುವುದಾಗಿ ಭರವಸೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಸತ್ಯಾಂಶ ಹೊರಬರಲಿದೆ. ಇದರಲ್ಲಿ ಯಾರ ಪಾತ್ರವಿದೆ ಎಂಬುದು ತಿಳಿಯಲಿದೆ. ಪ್ರಜ್ವಲ್ ಏನು ಮಾಡಲಿದ್ದಾರೆ ಎಂಬುದನ್ನು ಕಾದು ನೋಡೋಣ.



–ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ಪ್ರಜ್ವಲ್ ಬಂದ ನಂತರ ಸಾಕ್ಷ್ಯ ಆಧರಿಸಿ ಎಸ್‌ಐಟಿ ತನಿಖೆ ನಡೆಸುತ್ತೆ...



ತುಮಕೂರು: ವಿದೇಶದಿಂದಲೇ ವಿಡಿಯೋ ಮಾಡಿ ಕಳಿಸಿರುವ ಪ್ರಜ್ವಲ್ ಹೇಳಿಕೆಯನ್ನು ಸಂಪೂರ್ಣ ವೀಕ್ಷಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪ್ರಜ್ವಲ್ ಬಂದ ನಂತರ ತಮ್ಮ ಬಳಿ ಇರುವ ಸಾಕ್ಷ್ಯ ಆಧರಿಸಿ ಎಸ್‌ಐಟಿಯವರು ತನಿಖೆ ಮುಂದುವರೆಸುತ್ತಾರೆ ಎಂದು ತಿಳಿಸಿದರು. ತುಮಕೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡುವ ಮುನ್ನ ಡಾ.ಪರಮೇಶ್ವರ್, 2 ನಿಮಿಷ 57 ಸೆಕೆಂಡ್‌ಗಳ ಪ್ರಜ್ವಲ್ ಹೇಳಿಕೆಯ ವಿಡಿಯೋವನ್ನು ವೀಕ್ಷಿಸಿದರು.

ತರುವಾಯ ಪ್ರತಿಕ್ರಿಯೆ ನೀಡಿ, ಮೇ 31ರಂದು ಎಸ್‌ಐಟಿ ಮುಂದೆ ಹಾಜರಾಗುವುದಾಗಿ ಪ್ರಜ್ವಲ್ ಹೇಳಿದ್ದಾರೆ. ಇದನ್ನು ನಾನು ಸ್ವಾಗತಿಸುವೆ. ಆದರೆ ಕರ್ನಾಟಕದಲ್ಲಿ ಇಂತಹ ಪ್ರಕರಣ ನಡೆದಿರಲಿಲ್ಲ. ಈ ಹಿನ್ನೆಲೆಯಲ್ಲಿ ● 6ನೇ ಪುಟಕ್ಕೆ

ಪ್ರಜ್ವಲ್ ವಿಡಿಯೋದಲ್ಲಿ ಹೇಳಿರುವುದೇನು...

ಎಲ್ಲರಿಗೂ ನಮಸ್ಕಾರ, ನನ್ನ ತಂದೆ, ತಾಯಿ, ತಾತ ಹಾಗೂ ನನ್ನ ಕುಮಾರಣ್ಣ ನಾಡಿನ ಜನತೆ ಹಾಗೂ ನನ್ನ ಕಾರ್ಯಕರ್ತರಲ್ಲಿ ಕ್ಷಮಾಪಣೆ ಕೇಳುತ್ತೇನೆ. ನಾನು ವಿದೇಶದಲ್ಲಿ ಎಲ್ಲಿದ್ದೇನೆ ಎಂಬ ಬಗ್ಗೆ ಸರಿಯಾಗಿ ಮಾಹಿತಿ ಕೊಡದಿರುವುದಕ್ಕೆ ಇವತ್ತು ಮಾಹಿತಿ ಕೊಡಲು ಬಂದಿದ್ದೇನೆ. ಏಪ್ರಿಲ್ 26ರಂದು ಚುನಾವಣೆ ನಡೆಯಿತು. ಆ ಸಮಯದಲ್ಲಿ ನನ್ನ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ. ಎಸ್‌ಐಟಿ ಕೂಡ ರಚನೆ ಆಗಿರಲಿಲ್ಲ. ಏಪ್ರಿಲ್ 26ಕ್ಕೆ ಮೊದಲೇ ನಾನು ವಿದೇಶಕ್ಕೆ ಹೋಗುವುದು ಪೂರ್ವ ನಿರ್ಧರಿತವಾಗಿತ್ತು. ನಾನು ವಿದೇಶಕ್ಕೆ ಹೋದ ಮೂರ್ನಾಲ್ಕು ದಿನದ ನಂತರ ಯೂಟ್ಯೂಬ್ ಹಾಗೂ ನ್ಯೂಸ್ ಚಾನಲ್ ನೋಡಿದಾಗ ಮಾಹಿತಿ ತಿಳಿಯಿತು. ಇದಾದ ನಂತರ ಎಸ್‌ಐಟಿ ನನಗೆ ನೋಟಿಸ್ ಜಾರಿ ಮಾಡಿತು. ತರುವಾಯ ನೋಟಿಸ್‌ಗೆ ನನ್ನ ಎಕ್ಸ್ ಖಾತೆ ಹಾಗೂ ನಮ್ಮ ವಕೀಲರ ಮೂಲಕ ವಿಚಾರಣೆಗೆ ಹಾಜರಾಗಲು 7 ದಿನಗಳ ಸಮಯಾವಕಾಶ ಕೇಳಿದೆ.

ನಾನು ಸಮಯಾವಕಾಶ ಕೇಳಿದ ಮಾರನೆ ದಿನಕ್ಕೆ ಕಾಂಗ್ರೆಸ್ ಹಿರಿಯ ನಾಯಕರಾದ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್‌ನ ಇನ್ನಿತರ ನಾಯಕರು ಬಹಿರಂಗ ವೇದಿಕೆಗಳಲ್ಲಿ ಈ ವಿಚಾರ ಪ್ರಚಾರ ಮಾಡುವ ಕೆಲಸ ಆರಂಭಿಸಿದರು. ಚರ್ಚೆ ಮಾಡಲು ಶುರು ಮಾಡಿದರು. ರಾಜಕೀಯ ಪಿತೂರಿ ಮಾಡುವ ಕೆಲಸ ಮಾಡಿದರು.

ತರುವಾಯ ಹಾಸನದಲ್ಲಿ ಕೂಡ ಕೆಲವು ಶಕ್ತಿಗಳು ಎಲ್ಲಾ ಒಟ್ಟಿಗೆ ಸೇರಿಕೊಂಡು ನನ್ನ ವಿರುದ್ಧ ರಾಜಕೀಯ ಪಿತೂರಿ ಮಾಡುವ ಕೆಲಸ ಮಾಡಿದರು. ರಾಜಕೀಯವಾಗಿ ನಾನು ಬೆಳೆಯುತ್ತಿದ್ದೇನೆ, ನನ್ನನ್ನು ಕುಗ್ಗಿಸಬೇಕು ಎಂದು ಏನೇನೊ ಪ್ರಕರಣದಲ್ಲಿ ಸಿಲುಕಿಸುವ ಕೆಲಸ ಮಾಡಿದ್ದಾರೆ. ● 6ನೇ ಪುಟಕ್ಕೆ

ಕಾರ್ಯಕರ್ತರ ಸದೃಢಗೊಳಿಸಿ ಕಾಂಗ್ರೆಸ್ ಬಲವರ್ಧನೆ ವಿನೂತನ ಕಾರ್ಯಕ್ರಮ ‘ಕಾಂಗ್ರೆಸ್ ಕುಟುಂಬ’

● ಜೂನ್ ಒಂದರಿಂದ ಚಾಲನೆ; ಕಾಂಗ್ರೆಸ್ ಸಂಘಟಿಸುವ ಶಪಥ ● ಬೂತ್ ಮಟ್ಟದಲ್ಲಿ 50 ಸದಸ್ಯರ ಪಡೆ ರಚನೆ; ಅವರ ನಿರ್ಧಾರದಂತೆ ಎಲ್ಲವೂ ನಿರ್ವಹಣೆ ● ಪ್ರತಿ ತಿಂಗಳು ಒಂದು ದಿನ ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರ ಭೇಟಿಗೆ ಸಿಎಂ, ಡಿಸಿಎಂ ನಿರ್ಧಾರ



ಬೆಂಗಳೂರು, ಮೇ 27(ಕೆಎಂಶಿ)– ಕಾಂಗ್ರೆಸ್ ಅನ್ನು ಕಾರ್ಯಕರ್ತರ ಪಕ್ಷವಾಗಿ ಬಲವರ್ಧನೆಗೊಳಿಸಲು ‘ಕಾಂಗ್ರೆಸ್ ಕುಟುಂಬ’ ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷರೂ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಪಕ್ಷದ ಪ್ರಧಾನ ಕಚೇರಿಯಲ್ಲಿ ಮಾಜಿ ಪ್ರಧಾನಿ ದಿವಂಗತ ಜವಾಹರ ಲಾಲ್ ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೂನ್ 1ರಂದು ‘ಕಾಂಗ್ರೆಸ್ ಕುಟುಂಬ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಪಕ್ಷದಲ್ಲಿ ಎಷ್ಟೇ ದೊಡ್ಡ ನಾಯಕರಾಗಿದ್ದರೂ ಜವಾಬ್ದಾರಿ ತೆಗೆದುಕೊಂಡು ಕಾಂಗ್ರೆಸ್ ಕುಟುಂಬ ಬೆಳೆಸಲು ಸಿದ್ಧರಾಗಬೇಕು ಎಂದರು. ಕಾರ್ಯಕ್ರಮದಡಿ ಪ್ರತಿ ಬೂತ್ ಮಟ್ಟದಲ್ಲಿ 50 ಸದಸ್ಯರನ್ನು ಸೇರಿಸಬೇಕು, ಸದರಿ ಬೂತ್ ಹಾಗೂ ಸಂಬಂಧಪಟ್ಟ ಹಳ್ಳಿಗಳಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ, 50 ಸದಸ್ಯರೂ ಸೇರಿ ತೀರ್ಮಾನ ಕೈಗೊಳ್ಳಬೇಕು. ಪ್ರತಿ ತಿಂಗಳ ಒಂದು ದಿನ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರನ್ನು ಭೇಟಿ ಮಾಡುವ ತೀರ್ಮಾನವನ್ನು ತಾವು ಹಾಗೂ ಮುಖ್ಯಮಂತ್ರಿ ತೆಗೆದುಕೊಂಡಿದ್ದು, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪಕ್ಷದ ಕಾರ್ಯಕರ್ತರು ಹಾಗೂ ಸದಸ್ಯತ್ವ ● 9ನೇ ಪುಟಕ್ಕೆ

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಚುನಾವಣೆ: ಮೂರೂ ಪಕ್ಷಗಳ ಕಸರತ್ತು

ಬೆಂಗಳೂರು, ಮೇ 27(ಕೆಎಂಶಿ)– ವಿಧಾನಸಭೆಯಿಂದ ಪರಿಷತ್ತಿನ 11 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಂಡಿದ್ದರೂ, ಮೂರೂ ಪ್ರಮುಖ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಅಂತಿಮಗೊಳಿಸಿಲ್ಲ.

ನಾಮಪತ್ರ ಸಲ್ಲಿಕೆಗೆ ಜೂನ್ 3 ರಂದು ಕಡೆಯ ದಿನವಾಗಿದ್ದು ಅಷ್ಟರ ಒಳಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕಾಗುತ್ತದೆ. ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಆಡಳಿತಾರೂಢ ಕಾಂಗ್ರೆಸ್‌ಗೆ ಏಳು ಸ್ಥಾನಗಳು, ಪ್ರತಿಪಕ್ಷ ಬಿಜೆಪಿಗೆ ಮೂರು ಹಾಗೂ ಜೆಡಿಎಸ್‌ಗೆ ಒಂದು ಸ್ಥಾನ ಲಭ್ಯವಾಗಲಿದೆ. ಈಗಾಗಲೇ ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಒಂದೆರಡು ಸುತ್ತಿನ ಮಾತುಕತೆ ನಡೆಸಿದ್ದರೂ ಆಕಾಂಕ್ಷಿಗಳ ತೀವ್ರ ಒತ್ತಡದಿಂದ ಪಟ್ಟಿ ಅಂತಿಮಗೊಳಿಸಲು ಸಾಧ್ಯವಾಗಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಮ್ಮ ಪಕ್ಷದ ಅಭ್ಯರ್ಥಿಗಳ ಆಯ್ಕೆ ಸಂಬಂಧ ವರಿಷ್ಠರೊಂದಿಗೆ ಚರ್ಚೆ ನಡೆಸಲು ನಾಳೆ ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಯಡಿಯೂರಪ್ಪರ ವಿರುದ್ಧ ಪೋಕ್ಸೊ ದಾಖಲಿಸಿದ್ದ ಮಹಿಳೆ ಸಾವು

ಬೆಂಗಳೂರು, ಮೇ 27(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಅತ್ಯಾಚಾರ (ಪೋಕ್ಸೊ) ಮೊಕದ್ದಮೆ ದಾಖಲಿಸಿದ್ದ ಮಮತಾ ಎಂಬ ಮಹಿಳೆ ಮೃತಪಟ್ಟಿದ್ದಾಳೆ.

ಉಸಿರಾಟ ಸಮಸ್ಯೆ ಸಂಬಂಧ ಹುಳಿಮಾವು ಬಳಿಯ ನ್ಯಾನೋ ಆಸ್ಪತ್ರೆಗೆ ಮಹಿಳೆಯನ್ನು ದಾಖಲಿಸಲಾಗಿತ್ತು, ಚಿಕಿತ್ಸೆ ಫಲಕಾರಿಯಾಗದೇ ಮಹಿಳೆ ಮೃತಪಟ್ಟಿದ್ದಾರೆ. ಮಹಿಳೆ, ಅಪ್ರಾಪ್ತ ವಯಸ್ಸಿನ ಪುತ್ರಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಈ ಸಂಬಂಧ ಎಸ್‌ಐಟಿ ತನಿಖೆಗೆ ವಹಿಸಲು ಸಹಕರಿಸುವಂತೆ ಮನವಿ ಮಾಡಲು ಕಳೆದ ಫೆ.2ರಂದು ಬಿ.ಎಸ್.ಯಡಿಯೂರಪ್ಪ ಅವರ ಮನೆಗೆ ಮಗಳ ಜೊತೆ ತೆರಳಿದ್ದರು. ಈ ವೇಳೆ ಯಡಿಯೂರಪ್ಪ ಅವರು ತಾಯಿ ಮತ್ತು ಮಗಳ ಜೊತೆ 9 ನಿಮಿಷಗಳ ಕಾಲ ಮಾತನಾಡಿ, ಸಾಂತ್ವನ ಹೇಳಿದ್ದರು ಎನ್ನಲಾಗಿತ್ತು. ಆದರೆ ಬಾಲಕಿಯ ತಾಯಿ ಕೆಲವು ದಿನಗಳ ಬಳಿಕ ಯಡಿಯೂರಪ್ಪ ವಿರುದ್ಧವೇ ಆರೋಪ ಮಾಡಿದ್ದರು.

ಹಲವು ವರ್ಷದಿಂದಲೂ ಕಾವೇರಿ ಒಡಲು ಸೇರುತ್ತಿದೆ ಕಲುಷಿತ ನೀರು

● ಕೊಡಗಿನಿಂದಲೇ ಜೀವನದಿಗೆ ಕಂಟಕ ಎದುರಾಗಿದೆ ● ಸಂಬಂಧಿಸಿದ ಅಧಿಕಾರಿಗಳಿಗೆ ಇದರತ್ತ ಗಮನವೇ ಇಲ್ಲ ● ಅನಾಹುತ ಸಂಭವಿಸಿದಾಗಲೇ ಎಚ್ಚರಗೊಳ್ಳುವ ಸರ್ಕಾರ! ಚಡಪಡಿಸುವ ಅಧಿಕಾರಿಗಳು!! ಪರಿಹಾರದ ಪ್ರಹಸನ



ಶ್ರೀರಂಗಪಟ್ಟಣದಲ್ಲಿ ಕಲುಷಿತ ನೀರು ಕಾವೇರಿ ಸೇರುವುದ ತಡೆಯಲು ತಾತ್ಕಾಲಿಕ ಬಂಡ್ ನಿರ್ಮಿಸಿರುವುದು.

ವಿನಯ್ ಕಾರೇಕುರ

ಶ್ರೀರಂಗಪಟ್ಟಣ, ಮೇ 27– ಜೀವನದಿ ಕಾವೇರಿ ಸಂಪೂರ್ಣವಾಗಿ ಮಲಿನಗೊಳ್ಳುತ್ತಿದೆ. ದಶಕಗಳಿಂದಲೂ ಕಾವೇರಿ ನದಿಗೆ ಕಲುಷಿತ ನೀರು ಸೇರ್ಪಡೆಗೊಳ್ಳುತ್ತಿದ್ದರೂ ಮಲಿನವಾಗುತ್ತಿದ್ದರೂ ಯಾವುದೇ ಅಧಿಕಾರಿಗಳು ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಆದರೆ, ಈ ಬಾರಿ ಮಳೆ ಕೈಕೊಟ್ಟು ಕಾವೇರಿ ಒಡಲು ಬರಿದಾದಾಗ ಜೀವನದಿ ಸಂಪೂರ್ಣವಾಗಿ ಮಲಿನಗೊಂಡಿದೆ ಎಂಬುದು ಗೊತ್ತಾದರೂ ಕೂಡ ಅದರತ್ತ ಗಮನಹರಿಸದೇ ಇದ್ದ ಅಧಿಕಾರಿಗಳು, ಇದೀಗ ಕಾಲರಾ ಭೀತಿಯಿಂದಾಗಿ ಕಣ್ತೆರೆದಿದ್ದಾರೆ.

ಮೈಸೂರು ಜಿಲ್ಲೆಯ ತಗಡೂರು ಮತ್ತು ಕೆ.ಸಾಲುಂಡಿ ಗ್ರಾಮದಲ್ಲಿ 100ಕ್ಕೂ ಹೆಚ್ಚು ಮಂದಿಗೆ ವಾಂತಿ–ಭೇದಿ ಕಾಣಿಸಿಕೊಂಡು ಕೆ.ಸಾಲುಂಡಿಯ ಯುವಕನೋರ್ವ ಸಾವನ್ನಪ್ಪಿದ ನಂತರ ಅಧಿಕಾರಿಗಳು ಎಚ್ಚೆತ್ತುಕೊಂಡಂತಿದೆ. ಕರ್ನಾಟಕ ಭಾಗದಲ್ಲಿ ಕೊಡಗು, ಹಾಸನ, ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾವೇರಿ ನದಿ ಹರಿಯುತ್ತಿದೆ. ಆದರೆ, ಕಾವೇರಿ ಮಲಿನಗೊಂಡಿರುವ ಬಗ್ಗೆ ಎಚ್ಚೆತ್ತುಕೊಂಡಿರುವುದು ಮಾತ್ರ ಮಂಡ್ಯ ಜಿಲ್ಲಾಧಿಕಾರಿಗಳು. ಉಳಿದ ಯಾವುದೇ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಲೀ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಾಗಲೀ ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಶ್ರೀರಂಗಪಟ್ಟಣ ತಾಲೂಕಿನಲ್ಲಿ ಕಾವೇರಿ ನದಿಗೆ ● 9ನೇ ಪುಟಕ್ಕೆ


ಜೀವಜಲ ಕಾವೇರಿಯಿಂದಲೇ ಜೀವಕ್ಕೆ ಕಂಟಕ

ಕಾವೇರಿ ಕಲುಷಿತವಾಗುತ್ತಿರುವ ಬಗ್ಗೆ ಮೂರು ವರ್ಷದ ಹಿಂದೆಯೇ ‘ಮೈಸೂರು ಮಿತ್ರ’ ಪ್ರಕಟಿಸಿದ್ದ ವರದಿ.


ಕಾಲರಾ ಇನ್ನಿತರ ಸಾಂಕ್ರಾಮಿಕ ರೋಗಗಳ ಭೀತಿ ಶುದ್ಧ ಕುಡಿಯುವ ನೀರಿಗೆ ಭಾರಿ ಬೇಡಿಕೆ



“ ಪ್ರತೀ ದಿನ 20 ಲೀಟರ್ ಕ್ಯಾನ್‌ಗಳು 1500ಕ್ಕೂ ಹೆಚ್ಚು, ಅರ್ಧ ಮತ್ತು ಒಂದು ಲೀಟರ್‌ನ 25 ಬಾಟಲ್‌ಗಳಿರುವ 400ರಿಂದ 500 ಬಾಕ್ಸ್‌ಗಳು ಮಾರಾಟವಾಗುತ್ತಿವೆ. ಮದುವೆ ಮನೆಗಳಿಗೆ ಅರ್ಧ ಲೀಟರ್ ನೀರಿನ ಬಾಟಲ್‌ಗಳ ಬೇಡಿಕೆ ಹೆಚ್ಚಾಗಿದೆ. ಆರಂಭಕ್ಕೆ ಹೋಲಿಸಿದರೆ ಕಳೆದ ಎರಡು ವರ್ಷದಲ್ಲಿ ಪ್ಯಾಕೇಜ್ ಡ್ರಿಂಕಿಂಗ್ ವಾಟರ್‌ಗೆ ಬೇಡಿಕೆ ಪ್ರಮಾಣ ಹೆಚ್ಚಾಗಿದೆ.



– ಮೊಹಮ್ಮದ್ ಮಾಜ್, ಮುಖ್ಯಸ್ಥರು, ಸಮ ಆಕ್ವಾ, ಬನ್ನಿಮಂಟಪ ಕೈಗಾರಿಕಾ ಪ್ರದೇಶ, ಮೈಸೂರು



ಮೋಹನ್ ಕಾಯಕ

ಮೈಸೂರು, ಮೇ 27– ಸಾಂಕ್ರಾಮಿಕ ಕಾಯಿಲೆಗಳ ಭೀತಿ ಹಾಗೂ ಕೊರೊನಾ ಕಲಿಸಿದ ಪಾಠ; ಬಹುತೇಕ ಜನರು ಕುಡಿಯುವ ನೀರಿನತ್ತ ಹೆಚ್ಚು ಎಚ್ಚರಿಕೆ ವಹಿಸುವಂತೆ ಮಾಡಿದೆ. ಅದೇಕೋ! ಜನರಿಗೆ ಪಾಲಿಕೆ ಪೂರೈಸುವ ನೀರಿಗಿಂತ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಮೇಲೆ ಒಲವು ಹೆಚ್ಚಾಗುತ್ತಿದ್ದು, ಶುದ್ಧ ಕುಡಿಯುವ ನೀರಿನ ಬಾಟಲ್ ಮತ್ತು ಕ್ಯಾನ್‌ಗಳಿಗೆ ಭಾರಿ ಡಿಮ್ಯಾಂಡ್ ಸೃಷ್ಟಿಯಾಗಿದೆ...!

ಹೌದು! ಕಲುಷಿತ ನೀರಿನಿಂದ ಬಾಧಿಸುವ ಕಾಲರಾ, ಕರುಳು ಬೇನೆ, ಕಾಮಾಲೆ(ಹೆಪಟೈಟಿಸ್–ಏ), ಆಮಶಂಕೆ, ಟೈಫಾಯ್ಡ್ ಇತ್ಯಾದಿ ಸಾಂಕ್ರಾಮಿಕ ರೋಗಗಳು; ಒಬ್ಬರಿಂದೊಬ್ಬರಿಗೆ ಹರಡುವ ಮೂಲಕ ಪ್ರಕ್ಷುಬ್ಧ ವಾತಾವರಣ ಸೃಷ್ಟಿಸಿದ್ದ ಕೊರೊನಾ ಬಳಿಕವಂತೂ ಶುದ್ಧ ಕುಡಿಯುವ ನೀರಿನ ಬಳಕೆ ಯಥೇಚ್ಛವಾಗಿದೆ. ಹಾಗೆಯೇ ರಾಜ್ಯದೆಲ್ಲೆಡೆ ಮಳೆಯಾಗುತ್ತಿರುವುದರಿಂದ ನದಿಗಳಲ್ಲಿನ ನೀರು ಬಗಡಾಗಿ ಹಳದಿ ಬಣ್ಣದಲ್ಲಿರುವುದು ಹಾಗೂ ಬಳಕೆ ಮಾಡಲು ಯೋಗ್ಯವಾಗಿಲ್ಲದಿರುವುದರಿಂದ ಸಾಂಕ್ರಾಮಿಕ ಕಾಯಿಲೆಗೆ ತುತ್ತಾಗುವ ಭಯದಲ್ಲಿ ಪ್ಯಾಕೇಜ್ ವಾಟರ್‌ಗಳತ್ತ ಜನ ಮುಖ ಮಾಡಿದ್ದಾರೆ. ‘ಜೀವಜಲ’ ಕಲುಷಿತವಾದರೆ ಜೀವಕ್ಕೇ ಕುತ್ತು. ಆರೋಗ್ಯಭರಿತ ಜೀವನಕ್ಕೆ ಶುದ್ಧ ನೀರಿಗೆ ಮೊದಲ ಆದ್ಯತೆ ನೀಡುವುದು ಅನಿವಾರ್ಯವೆಂಬಂತೆ ಬಹುತೇಕ ನಗರವಾಸಿಗಳು ಶುದ್ಧ ಕುಡಿಯುವ ನೀರಿನತ್ತ ಮುಖ ಮಾಡಿದ್ದಾರೆ. ಅದಕ್ಕೆ ಪೂರಕವಾಗಿ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುವ ಕಂಪನಿಗಳ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ನಗರ ಮಾತ್ರವಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿಯೂ ಕೊಳಾಯಿ(ನಲ್ಲಿ), ಬೋರ್‌ವೆಲ್, ಕೆರೆ–ಬಾವಿ ನೀರನ್ನು ಕುಡಿಯಲು ಬಳಕೆ ಮಾಡುವುದನ್ನೇ ಬಿಡುವಂತಹ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಸಾಂಕ್ರಾಮಿಕ ರೋಗಗಳ ಬಾಧಿಸುವಿಕೆ ಹಲವೆಡೆ ವರದಿಯಾಗುತ್ತಿದ್ದು, ಸಾರ್ವಜನಿಕರಲ್ಲಿ ಮತ್ತಷ್ಟು ಆತಂಕ ಹೆಚ್ಚಿಸಿದೆ. ಅಲ್ಲದೆ ವಾತಾವರಣದಲ್ಲಾಗುತ್ತಿರುವ ಬದಲಾವಣೆ, ಉಷ್ಣಾಂಶ ಹೆಚ್ಚಳದಿಂದಾಗಿ ಎಲ್ಲೆಡೆ ಬಾಟಲ್‌ನಲ್ಲಿ ನೀರು ಕೊಂಡೊಯ್ಯುವ ಪದ್ಧತಿ ಪರಿಪಾಠವಾಗುತ್ತಿದೆ. ಮದುವೆ ಮನೆಗಳಲ್ಲಿ, ಹೋಟೆಲ್‌ಗಳಲ್ಲಿ, ಟೀ ಸ್ಟಾಲ್‌ಗಳಲ್ಲಿ, ಬಸ್, ರೈಲು ಮತ್ತು ವಿಮಾನ ನಿಲ್ದಾಣಗಳಲ್ಲಿಯೂ ಪ್ಯಾಕೇಜ್ ಡ್ರಿಂಕಿಂಗ್ ವಾಟರ್‌ಗೆ ದಿನದಿಂದ ದಿನಕ್ಕೆ ಡಿಮ್ಯಾಂಡ್ ಹೆಚ್ಚಾಗುತ್ತಲೇ ಇದೆ. ಮಳೆ ಬೀಳುತ್ತಿರುವುದರಿಂದ ನಗರಪಾಲಿಕೆಯ ಶುದ್ಧೀಕರಣ ಘಟಕಗಳಲ್ಲಿ ನೀರನ್ನು ಬಳಕೆಗೆ ಯೋಗ್ಯವಾಗುವಂತೆ ● 6ನೇ ಪುಟಕ್ಕೆ

ಜಾಗೃತಿ ಅವಶ್ಯ...

ಸಾರ್ವಜನಿಕರಲ್ಲಿ ಶುದ್ಧ ಕುಡಿಯುವ ನೀರಿನ ಜಾಗೃತಿ ಅವಶ್ಯವಾಗಿದೆ. ಶುದ್ಧ ಕುಡಿಯುವ ಘಟಕಗಳಲ್ಲಿ ಕುಡಿಯುವ ನೀರನ್ನು 12 ಹಂತಗಳಲ್ಲಿ ಶುದ್ಧೀಕರಿಸಲಾಗುವುದು. ಮೊದಲು ‘ವಾಟರ್ ಟ್ರೀಟ್‌ಮೆಂಟ್’ ಮಾಡಲಾಗುವುದು. ನಂತರ ನೀರನ್ನು ಶೇಖರಿಸಿ ‘ಕ್ಲೋರಿನೇಷನ್’ ಮಾಡಲಾಗುತ್ತದೆ. ಬಳಿಕ ‘ಮೈಕ್ರೋ ಟ್ರೀಟ್‌ಮೆಂಟ್’, ‘ರಿವರ್ಸ್ ಆಸ್ಮೋಸಿಸ್(ಆರ್‌ಓ)’, ‘ಮಿನರಲ್ ಅಡಿಷನ್’ ನಂತರ ‘ಓಜನೈಜೇಷನ್’, ಕಡೆಯಲ್ಲಿ ‘ಅಲ್ಟ್ರಾವೈಲೆಟ್ ಟ್ರೀಟ್‌ಮೆಂಟ್’ ಮಾಡಿ ಕ್ಯಾಪಿಂಗ್ ಹಾಗೂ ಪ್ಯಾಕೇಜಿಂಗ್ ಮಾಡಲಾಗುವುದು ಎಂದು ಬಿಸ್ಲೇರಿ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಕಂಪನಿಯ ಮ್ಯಾನೇಜರ್ ಧ್ರುವಕುಮಾರ್ ವಿವರಿಸಿದರು.

ಮರಿತಿಬ್ಬೇಗೌಡರನ್ನು ಗೆಲ್ಲಿಸಿ ಮೇಲ್ಮನೆಯಲ್ಲಿ ಪ್ರಾಬಲ್ಯ ಸಾಧಿಸಲು ಒಕ್ಕೊರಲ ನಿರ್ಣಯ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆಯಲ್ಲಿ ಸ್ಥಳೀಯ ಶಾಸಕರು, ಮುಖಂಡರ ಸಭೆ ನಡೆಯಿತು.

ಮೈಸೂರು, ಮೇ 27(ಎಂಕೆ)– ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಶತಾಯುಗತಾಯು ಗೆಲ್ಲಿಸುವ ಮೂಲಕ ಮೇಲ್ಮನೆಯಲ್ಲಿ ಪ್ರಾಬಲ್ಯ ಸಾಧಿಸಬೇಕು ಎಂದು ಒಕ್ಕೊರಲ ನಿರ್ಣಯ ಕೈಗೊಳ್ಳಲಾಯಿತು.

ನಗರದ ಖಾಸಗಿ ಹೋಟೆಲ್‌ನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸ್ಥಳೀಯ ಶಾಸಕರು, ಮುಖಂಡರ ಸಭೆಯಲ್ಲಿ ಮುಂಬರುವ ವಿಧಾನಪರಿಷತ್‌ನ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಮುಖ್ಯಮಂತ್ರಿಗಳ ಕೈ ಬಲಪಡಿಸಬೇಕು ಎಂದು ನಿರ್ಧರಿಸಲಾಯಿತು.

ರೇಷ್ಮೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಮರಿತಿಬ್ಬೇಗೌಡರು ಮೊದಲ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಇದೇ ಕ್ಷೇತ್ರದಿಂದ ಗೆದ್ದು ಪರಿಷತ್ ಸದಸ್ಯರಾಗಿದ್ದರು. ಅವರ ನಂತರ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿಲ್ಲ. ಈಗ ಮತ್ತೆ ಮರಿತಿಬ್ಬೇಗೌಡರೇ ನಮ್ಮ ಅಭ್ಯರ್ಥಿಯಾಗಿದ್ದು, ಅವರನ್ನು ಗೆಲ್ಲಿಸುವ ಮೂಲಕ ಈ ಕ್ಷೇತ್ರದಲ್ಲಿ ಮತ್ತೆ ಕಾಂಗ್ರೆಸ್ ತೆಕ್ಕೆಗೆ ಪಡೆದುಕೊಳ್ಳಬೇಕು ಎಂದರು.

ಶಿಕ್ಷಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮರಿತಿಬ್ಬೇಗೌಡರು ಸಾಕಷ್ಟು ಕೆಲಸ ಮಾಡಿದ್ದಾರೆ. ಶಿಕ್ಷಕರ ವೇತನ ಹೆಚ್ಚಳಕ್ಕೆ ಶ್ರಮಿಸಿದ್ದಾರೆ. ಮುಂದಿನ ದಿನಗಳಲ್ಲಿ ಶಿಕ್ಷಕರ ಕ್ಷೇತ್ರದಲ್ಲಿ ಒಂದಷ್ಟು ಬದಲಾವಣೆಗಳು, ಜನಪರ ಕಾರ್ಯಗಳು ನಡೆಯಬೇಕಾದರೆ ಅನುಭವಿಗಳು ಆದ ಮರಿತಿಬ್ಬೇಗೌಡರ ಗೆಲುವು ಅನಿವಾರ್ಯ. ಈ ನಿಟ್ಟಿನಲ್ಲಿ ಆಯಾ ಕ್ಷೇತ್ರದ ಶಾಸಕರು, ಮುಖಂಡರು ಮತದಾರರನ್ನು ಖುದ್ದು ಭೇಟಿಯಾಗಿ ಮನವೊಲಿಸುವಂತೆ ಸೂಚಿಸಿದರು.

ಸಭೆಯಲ್ಲಿ ಶಾಸಕರಾದ ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಡಾ.ಡಿ. ತಿಮ್ಮಯ್ಯ, ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆಪಿಸಿಸಿ ವಕ್ತಾರ ಲಕ್ಷ್ಮಣ ಮತ್ತಿತರರು ಉಪಸ್ಥಿತರಿದ್ದರು.

ಸಂಸ್ಕೃತವೇನಾದರೂ ಇಲ್ಲದೇ ಇದ್ದರೆ ಭರತ ಖಂಡದ ಭಾಷೆ, ಸಾಹಿತ್ಯ ಬೆಳೆಯುತ್ತಿರಲಿಲ್ಲ

ರಾಷ್ಟ್ರ ಮಟ್ಟದ ವಿಚಾರ ಸಂಕಿರಣದಲ್ಲಿ ಹಿರಿಯ ಸಾಹಿತಿ ಪ್ರೊ.ಪ್ರಧಾನ್ ಗುರುದತ್ ಅಭಿಪ್ರಾಯ

ಮೈಸೂರು, ಮೇ27(ಬಿಎಲ್‌ಯು)– ಸಂಸ್ಕೃತ ಇಲ್ಲದಿದ್ದರೆ ಭರತ ಖಂಡದ ಯಾವುದೇ ಭಾಷೆ ಹಾಗೂ ಸಾಹಿತ್ಯ ಬೆಳೆಯುತ್ತಿರಲಿಲ್ಲ ಎಂದು ಕುವೆಂಪು ಭಾಷಾ ಭಾರತಿ ಮತ್ತು ಅನುವಾದ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಪ್ರಧಾನ್ ಗುರುದತ್ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಇಂದು ಸಂಸ್ಕೃತ ವಿಭಾಗ ಆಯೋಜಿಸಿದ್ದ ಸಂಸ್ಕೃತ–ಕನ್ನಡ ಅನುವಾದ ಪರಂಪರೆ ಕುರಿತ ರಾಷ್ಟ್ರ ಮಟ್ಟದ ವಿಚಾರ ಸಂಕಿರಣದಲ್ಲಿ ದಿಕ್ಸೂಚಿ ಭಾಷಣದಲ್ಲಿ ಅವರು, ಕನ್ನಡ, ತಮಿಳು, ತೆಲುಗು, ಮಲೆಯಾಳಂ ಸೇರಿದಂತೆ ದೇಶದ ಎಲ್ಲಾ ಭಾಷೆಗಳಿಗೆ ಸಂಸ್ಕೃತ ಪೋಷಕ ಹಾಗೂ ಪ್ರೇರಣೆಯಾಗಿದೆ ಎಂದರು.

ಚಂದ್ರ ಸೇರಿದಂತೆ ಹಲವು ಗ್ರಹಗಳಿಗೆ ಮನುಷ್ಯ ಕಾಲಿಡುವ ಬಗ್ಗೆ ವಿಜ್ಞಾನದ ಲೆಕ್ಕಾಚಾರದ ಬಗ್ಗೆ ಸಂಸ್ಕೃತ ಭಾಷೆಯಲ್ಲಿರುವ ಜ್ಯೋತಿಷ್ಯ ಶಾಸ್ತ್ರ ಆಗಲೇ ವಿವರ ನೀಡಿದೆ. ಇದರಿಂದ ಇವತ್ತಿನ ಯಾವುದೇ ರೀತಿಯ ತಾಂತ್ರಿಕತೆಗೆ ಶಬ್ಧಗಳನ್ನು ಕೊಡಲು ಸಂಸ್ಕೃತದಿಂದ ಮಾತ್ರ ಸಾಧ್ಯ. ಕಂಪ್ಯೂಟರ್ ಸೈನ್ಸ್ ಸೇರಿದಂತೆ ಯಾವುದೇ ರೀತಿಯ ತಂತ್ರಜ್ಞಾನ ಸಂಶೋಧನೆಗೆ ಅವಶ್ಯವಿರುವ ಮಾಹಿತಿ ಸಂಸ್ಕೃತದಲ್ಲಿದೆ ಎಂದು ಹೇಳಿದರು.

ಕನ್ನಡ ಸೇರಿದಂತೆ ಹಲವು ಭಾಷೆಗಳನ್ನು ಸಂಸ್ಕೃತ ಶತ ಶತಮಾನಗಳಿಂದ ಪೋಷಿಸಿಕೊಂಡು ಬಂದಿದೆ. ಸಂಸ್ಕೃತದ ಅದಮ್ಯ ಶಕ್ತಿ ಬೇರೆ ಯಾವ ಭಾಷೆಯಲ್ಲೂ ಇಲ್ಲ. ಭಾರತದ ಸಂಸ್ಕೃತಿ, ಪರಂಪರೆ ಹಾಗೂ ರಾಜಕೀಯ ಚಿಂತನೆಗೆ ಸಂಸ್ಕೃತವೆ ಮೂಲವಾಗಿದೆ ಎಂದರು.

ತಂದೆ–ತಾಯಿ ಮಕ್ಕಳನ್ನು ಪೋಷಣೆ ಮಾಡಿದಂತೆ ಈ ತನಕ ಸಂಸ್ಕೃತ ಭಾರತದ ಎಲ್ಲಾ ಭಾಷೆಗಳನ್ನು ಪೋಷಿಸಿತು. ಆದರೆ ಈಗ ಮಕ್ಕಳು, ತಂದೆ–ತಾಯಿ ನೋಡಿಕೊಳ್ಳುವಂತೆ ಭಾರತದ ಭಾಷೆಗಳು ಸಂಸ್ಕೃತ ಭಾಷೆಯನ್ನು ನೋಡಿಕೊಂಡು ಅದನ್ನು ವಿಸ್ತರಿಸಬೇಕು ಎಂದು ಪ್ರೊ.ಪ್ರಧಾನ್ ಗುರುದತ್ ಸಲಹೆ ನೀಡಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಪೂರ್ಣಿಮಾ, ಶೈಕ್ಷಣಿಕ ಡೀನ್ ಡಾ.ರೇಚಣ್ಣ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ.ಬಿ.ಪಿ.ಷಡಕ್ಷರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸಂಸ್ಕೃತ ವಿಭಾಗ ಆಯೋಜಿಸಿದ್ದ ಸಂಸ್ಕೃತ–ಕನ್ನಡ ಅನುವಾದ ಪರಂಪರೆ ಕುರಿತ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಉದ್ಘಾಟಿಸಿದರು.

> ಸಂಸ್ಕೃತ ಭಾಷೆ ಮಹಾ ಸಾಗರವಿದ್ದಂತೆ. ಸಾಗರದಲ್ಲಿ ಸಂಶೋಧಿಸಿದಂತೆ ಹೊಸತು ಸಿಕ್ಕಿದಂತೆ ಸಂಸ್ಕೃತದ ಸಂಶೋಧನೆಯಲ್ಲಿ ಹೊಸ ವಿಚಾರಗಳು ಪತ್ತೆಯಾಗಲಿದೆ. ಜಗತ್ತಿನ ಯಾವ ಭಾಷೆಯಲ್ಲೂ ಸಂಸ್ಕೃತದಲ್ಲಿರುವಷ್ಟು ವಿಚಾರಗಳು ಇಲ್ಲ. ಸಂಸ್ಕೃತ ಭಾಷೆಯಲ್ಲಿರುವ ವೇದ, ಉಪನಿಷತ್ತು ಸಾಹಿತ್ಯದ ರತ್ನ ನಿಧಿಗಳು. ಗಂಗೆಯನ್ನು ಸಂಗ್ರಹಿಸಿ ಎಲ್ಲೆ ಕೊಂಡೊಯ್ದರು ಅದರ ಪಾವಿತ್ರ್ಯತೆ ಹಾಗೂ ಮಹತ್ವ ಜೀವಂತವಾಗಿರುವಂತೆ ಸಂಸ್ಕೃತವನ್ನು ಎಲ್ಲೆ ಅಧ್ಯಯನ ಮಾಡಿದರೂ ಅದರ ಮಹತ್ವ ಎಂದೂ ಕಡಿಮೆ ಆಗುವುದಿಲ್ಲ.
> **–ಡಾ.ಪ್ರಧಾನ್ ಗುರುದತ್, ಮಾಜಿ ಅಧ್ಯಕ್ಷ, ಕುವೆಂಪು ಭಾಷಾ ಭಾರತಿ ಮತ್ತು ಅನುವಾದ ಅಕಾಡೆಮಿ**

ಈಜು ಸ್ಪರ್ಧೆಯಲ್ಲಿ ವಿ.ಜಗದೀಶ್‌ಗೆ ಬಹುಮಾನ



ಮೈಸೂರು, ಮೇ 27 – ಇತ್ತೀಚೆಗೆ ಹೈದರಾಬಾದ್‌ನ ಸಿಕಂದರಬಾದ್‌ನಲ್ಲಿ ನಡೆದ ಫಸ್ಟ್ ಫೆಡರೇಷನ್ ಕಪ್ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್ – ರಾಷ್ಟ್ರ ಮಟ್ಟದ ಈಜು ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಈಜು ತರಬೇತುದಾರ ವಿ.ಜಗದೀಶ್ ಎರಡು ಚಿನ್ನ, ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಪಡೆದಿದ್ದಾರೆ.

400 ಮೀ. ಈಜು, 200 ಮೀ. ಬಟರ್‌ಫ್ಲೈ–ಚಿನ್ನದ ಪದಕ, 200 ಮೀ. ಬ್ರೆಸ್ಟ್ ಸ್ಟ್ರೋಕ್–ಬೆಳ್ಳಿ ಪದಕ, 100 ಮೀ. ಬಟರ್ ಫ್ಲೈ 200 ಮೀ. ಬ್ಯಾಕ್ ಸ್ಟ್ರೋಕ್–ಕಂಚಿನ ಪದಕ ಪಡೆದುಕೊಂಡಿದ್ದಾರೆ.

ಮೊದಲು ನಮ್ಮನ್ನು ನಾವು ಅರಿಯಬೇಕು

ಅಕ್ಕನ ವಚನದ ಮಹತ್ವ ಮನವರಿಕೆ ಮಾಡಿಕೊಟ್ಟ ಕನ್ನಡ ಪ್ರಾಧ್ಯಾಪಕ ಡಾ.ಸುದೀಪ್



ಮೈಸೂರು, ಮೇ 27– ಮೊದಲು ನಮ್ಮನ್ನು ನಾವು ಅರಿಯಬೇಕು. ಅರಿವು ಎಲ್ಲವನ್ನು ಒಳಗೊಂಡ ಭಗವಂತನ ಸ್ವರೂಪ ಎಂದು ಅಕ್ಕ ಮಹಾದೇವಿ ಅವರು ತಮ್ಮ ವಚನಗಳಲ್ಲಿ ಹೇಳಿದ್ದಾರೆ ಎಂದು ಜೆಎಸ್‌ಎಸ್ ಕಾಲೇಜು ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಬಿ.ಎಸ್.ಸುದೀಪ್ ಹೇಳಿದರು.

ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ನಡೆದ 313ನೆಯ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ 'ಅಕ್ಕ ಮಹಾದೇವಿಯ ವಚನಗಳಲ್ಲಿ ಅರಿವು" ಕುರಿತು ತಿಳಿಸಿದರು.

ಬಸವಾದಿ ಶರಣರು ರಚಿಸಿರುವ ವಚನಗಳು ವಿಶೇಷವಾದ ಅರ್ಥವನ್ನು ಒಳಗೊಂಡಿವೆ. ಅದರಲ್ಲಿ ಅಕ್ಕಮಹಾದೇವಿಯವರ ವಚನಗಳು ಹೆಚ್ಚು ಮೌಲ್ಯಯುತವಾದವು. ಅರಿವು ಬೇರೆಯವರಿಂದ ಪಡೆಯಲು ಸಾಧ್ಯವಿಲ್ಲ. ಅದನ್ನು ಪಡೆಯಬೇಕಾದರೆ ಮೊದಲು ಭಕ್ತನಾಗಬೇಕು. ಅರಿವುಳ್ಳಾತನೇ ಜಂಗಮ. ದೇಹವೆಂಬುದು ಚೆನ್ನಮಲ್ಲಿಕಾರ್ಜುನನ್ನು ಅರಿಯಲು ಇರುವ ಮಾಧ್ಯಮ ಎಂಬುದನ್ನು ಅಕ್ಕಮಹಾದೇವಿ ನಿರೂಪಿಸಿದರು. ನಮ್ಮನ್ನು ನಾವು ಅರಿಯದಿದ್ದರೆ ಅದು ಅಜ್ಞಾನ. ಭಕ್ತನಾಗಿ, ಸುಜ್ಞಾನಿಯಾಗಿ ನಮ್ಮನ್ನು ನಾವು ಅರಿಯಬೇಕೆಂಬುದನ್ನು ಅಕ್ಕನವರು ವಚನಗಳಲ್ಲಿ ಹೇಳಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಶಿವರಾತ್ರಿಶ್ವರ ಅಕ್ಕನ ಬಳಗದ ಅಧ್ಯಕ್ಷೆ ಶ್ರೀಮತಿ ಎಂ.ಎ. ನೀಲಾಂಬಿಕಾರವರು ಅರಿವು–ಆಚಾರದ ಬಗ್ಗೆ ಬಸವಾದಿ ಶರಣರ ವಚನಗಳಲ್ಲಿ ಸಾಕಷ್ಟು ಸಮೃದ್ಧ ಜ್ಞಾನವಿದೆ. ಅದರಲ್ಲಿಯೂ ಅಕ್ಕನವರು ವಚನಗಳಲ್ಲಿ ಅನುಭಾವ ಮತ್ತು ಅಭಿವ್ಯಕ್ತಿಯ ಬಗ್ಗೆ ಹೇಳಿದ್ದಾರೆ. ಅಕ್ಕಮಹಾದೇವಿ ಹುಂಗನ್ನು ತೊರೆದು, ಸಾವಿಲ್ಲದ, ಕೇಡಿಲ್ಲದ ಚೆನ್ನಮಲ್ಲಿಕಾರ್ಜುನನೇ ಪತಿಯೆಂದು ಮಹೋನ್ನತಿಯನ್ನು ಸಾಧಿಸಿದರು ಎಂದರು. ಕು. ಎನ್.ಚೂಡಾಮಣಿ ವಚನ ಗಾಯನ ನಡೆಸಿಕೊಟ್ಟರು. ಡಿ.ಎಂ. ಸಿದ್ಧಲಿಂಗಸ್ವಾಮಿ ಸ್ವಾಗತಿಸಿದರು. ಎಂ. ಗಂಗಾಧರ್ ವಂದಿಸಿದರು. ಮಲ್ಲಿಕಾರ್ಜುನ ನಿರೂಪಿಸಿದರು.

ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ



ಮೈಸೂರು, ಮೇ 27– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರವು ಕಲೆಮನೆ ಸಭಾಂಗಣದಲ್ಲಿ 39ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವವನ್ನು ಹಮ್ಮಿಕೊಂಡಿತ್ತು.

ಕಾರ್ಯಕ್ರಮವನ್ನು ಶ್ರೀಮತಿ ಭಾರತಿ ರಾಜೇ ಅರಸ್ ಮತ್ತು ಪ್ರಾಧ್ಯಾಪಕಿ ಶ್ರೀಮತಿ ನಿರ್ಮಲ ಉದ್ಘಾಟಿಸಿ ಮಾತನಾಡಿ, ಕುಮಾರ್ ಮತ್ತು ಅವರ ಕುಟುಂಬದವರು ನೃತ್ಯ ಕ್ಷೇತ್ರಕ್ಕೆ ನೀಡುತ್ತಿರುವ ಅಪಾರ ಸೇವೆಯನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಉತ್ಸವ ನೂರರ ಗಡಿಯನ್ನು ದಾಟಲಿ ಎಂದು ಶುಭ ಹಾರೈಸಿದರು.

ನಂತರ ಶ್ರೀ ಉಮಾಮಹೇಶ್ವರ ನೃತ್ಯ ಕಲಾ ಕ್ಷೇತ್ರದ ನಿರ್ದೇಶಕರಾದ ವಿದುಷಿ ಶ್ರೀಮತಿ ಟಿ.ಎಸ್.ಶ್ರೀಲಕ್ಷ್ಮಿ ಕುಮಾರ್ ಮತ್ತು ಅವರ ಶಿಷ್ಯರು; ಬೆಂಗಳೂರಿನ ಶ್ರೀ ಸಾಯುಜ್ಯ ನೃತ್ಯ ಶಾಲೆ ನಿರ್ದೇಶಕರಾದ ವಿದುಷಿ. ಶ್ರೀಮತಿ ಸೌಮ್ಯ ಎಸ್ ಶರ್ಮಾ ಮತ್ತು ಅವರ ಶಿಷ್ಯರು; ನಂಜನಗೂಡು ನಟರಾಜ ನೃತ್ಯ ಶಾಲೆ ನಿರ್ದೇಶಕರಾದ ವಿದುಷಿ. ಶ್ರೀಮತಿ ರಮ್ಯ ಎಸ್ ರಾಘವೇಂದ್ರ ಮತ್ತು ಅವರ ಶಿಷ್ಯರು; ಪುತ್ತೂರು ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿ ಆರ್ಟಿಸ್ಟಿಕ್ ನಿರ್ದೇಶಕರಾದ ನೃತ್ಯ ದಂಪತಿ ಗುರು ಕಲಾ ದೀಪ ವಿದ್ವಾನ್ ದೀಪಕ್‌ಕುಮಾರ್ ಮತ್ತು ವಿದುಷಿ ಪ್ರೀತಿಕಲಾ; ಮೈಸೂರಿನ ಮನು ವಿದ್ಯಾ ಸಾಂಸ್ಕೃತಿಕ ಫೌಂಡೇಶನ್ ನಿರ್ದೇಶಕರಾದ ವಿದುಷಿ. ನೇತ್ರ ಎಸ್ ಮತ್ತು ಅವರ ಶಿಷ್ಯರು, ಬೆಂಗಳೂರಿನ ಗುರು ವಿದುಷಿ ಶ್ರೀಮತಿ ಬೈಜಾ ರಾಣಿ ಲಿಜಿನ್ ಸೇರಿದಂತೆ 80ಕ್ಕೂ ಹೆಚ್ಚು ನೃತ್ಯ ಕಲಾವಿದರು ನೃತ್ಯ ಪ್ರದರ್ಶನ ನೀಡಿದರು. ಕೇಂದ್ರದ ಕುಮಾರ್, ವೆಂಕಟ್, ರಾಘವ್, ನಾರಾಯಣ ಭಟ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 27– ಸಮಾಜ ಕಲ್ಯಾಣ ಇಲಾಖೆ ವತಿಯಿಂದ ತಿ.ನರಸೀಪುರ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳಿಗೆ ಮೆಟ್ರಿಕ್ ಪೂರ್ವ 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವೆಬ್‌ಸೈಟ್ www.sw. kar.nic.inನಲ್ಲಿ ಆನ್‌ಲೈನ್ ಮೂಲಕ ಮೇ 31ರೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸಂಬಂಧಪಟ್ಟ ವಿದ್ಯಾರ್ಥಿನಿಲಯ ಮೇಲ್ವಿಚಾರಕರು ಅಥವಾ ತಿ.ನರಸೀಪುರದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಗುರುಕುಲ ಅಕಾಡೆಮಿ ಶಾಲೆಯ ಮಾನ್ಯತೆ ರದ್ದು

ಮೈಸೂರು: ತಾಲೂಕಿನ ಕೊಪ್ಪಲೂರಿನ ಗುರುಕುಲ ಅಕಾಡೆಮಿ ಶಾಲೆಯ ಮಾನ್ಯತೆಯನ್ನು ಹಿಂಪಡೆಯಲಾಗಿದ್ದು, ಶಾಲೆಗೆ ಸಾರ್ವಜನಿಕರು ಮಕ್ಕಳನ್ನು ದಾಖಲು ಮಾಡಬಾರದು ಹಾಗೂ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಹತ್ತಿರದ ಅಧಿಕೃತ ಶಾಲೆಗಳಲ್ಲಿ ದಾಖಲಾತಿ ಮಾಡಬೇಕು ಎಂದು ತಾಲೂಕು ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.2ರಿಂದ ಯಕ್ಷಗಾನ ನಾಟ್ಯ ತರಗತಿ

ಮೈಸೂರು, ಮೇ 27– ಮೈಸೂರಿನ ಕರಾವಳಿ ಯಕ್ಷಗಾನ ಕೇಂದ್ರದ ವತಿಯಿಂದ ಸರಸ್ವತಿಪುರಂನ ವಿಜಯ ವಿಠ್ಠಲ ಶಾಲೆ ಆವರಣದಲ್ಲಿ ಜೂ.2ರಿಂದ ಸಂಜೆ 4ಕ್ಕೆ ತೆಂಕು–ಬಡಗು ಯಕ್ಷಗಾನ ನಾಟ್ಯ ತರಗತಿಗಳು ಪ್ರಾರಂಭವಾಗಲಿದೆ. ಪ್ರತಿ ಭಾನುವಾರ ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಯಕ್ಷಗಾನ ಪ್ರಾಥಮಿಕ ಹಾಗೂ ಪ್ರೌಢನಾಟ್ಯಗಳ ತರಬೇತಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9844161748, 9008181172, 9449322514 ಸಂಪರ್ಕಿಸಬಹುದು.

ಕಣ್ಣಿನ ಉಚಿತ ತಪಾಸಣಾ ಶಿಬಿರ

ಮೈಸೂರು, ಮೇ 27 – ಮೈಸೂರಿನ ಅಮೃತಾಂಶು ಟ್ರಸ್ಟ್, ನಾರಾಯಣ ಹೃದಯಾಲಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಟ್ರಸ್ಟ್ ಮತ್ತು ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕದ ಸಂಯುಕ್ತ ಆಶ್ರಯದಲ್ಲಿ ಮೇ 29 ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆಯವರೆಗೆ 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ ಇಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99452 70646 ಸಂಪರ್ಕಿಸಬಹುದು.

ಉಚಿತ ಸಾಮೂಹಿಕ ಉಪನಯನ ಕಾರ್ಯಕ್ರಮ

ಮೈಸೂರು, ಮೇ 27–ಮೈಸೂರಿನ ಶ್ರೀ ಚಿತ್ಕಲ ಟ್ರಸ್ಟ್ ವತಿಯಿಂದ ಜೂ.23 ರಂದು ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ವಿಪ್ರ ವಟುಗಳಿಗೆ ಉಚಿತ ಸಾಮೂಹಿಕ ಉಪನಯನ ಕಾರ್ಯಕ್ರಮ (ಬ್ರಹ್ಮೋಪದೇಶ) ಏರ್ಪಡಿಸಲಾಗಿದೆ. ಆಸಕ್ತ ಪೋಷಕರು ಜೂ. 15ರೊಳಗೆ ಟ್ರಸ್ಟ್‌ನಲ್ಲಿ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ. ಮಾಹಿತಿಗೆ ಮೊ. 9449047608, 9481529770, 9880004652 ಸಂಪರ್ಕಿಸಿ.

ಪ್ರಧಾನಿಯವರ ರ್‍ಯಾಡಿಸನ್ ಬ್ಲೂ ಹೋಟೆಲ್ ಬಿಲ್ ವಿವಾದ ಇತ್ಯರ್ಥ

ಬೆಂಗಳೂರು, ಮೇ 27(ಎಂಟಿವೈ)– ಮೈಸೂರಲ್ಲಿ ಕಳೆದ ವರ್ಷ ನಡೆದ ಹುಲಿ ಸಂರಕ್ಷಿತ ಪ್ರದೇಶದ 50ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಲುವಾಗಿ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ವಾಸ್ತವ್ಯ ಹೂಡಿದ್ದ ಹೋಟೆಲ್‌ನ 80.60 ಲಕ್ಷರೂ. ಬಿಲ್ ಅನ್ನು ರಾಜ್ಯ ಸರ್ಕಾರವೇ ಪಾವತಿಸುತ್ತದೆ ಎಂದು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನ ವಿಕಾಸಸೌಧದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2023ರ ಏಪ್ರಿಲ್‌ನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ)ದ ವತಿಯಿಂದ ಆಯೋಜಿಸಲಾಗಿದ್ದ ಹುಲಿ ಯೋಜನೆಯ 50ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಮೈಸೂರಿಗೆ ಆಗಮಿಸಿದ್ದರು. ಆಗ ಅವರು ವಾಸ್ತವ್ಯ ಹೂಡಿದ್ದ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನ ಎನ್‌ಟಿಸಿಎ ಆತಿಥ್ಯದ ಬಿಲ್ ಬಾಕಿ ಇತ್ತು. ಸಂಪ್ರದಾಯದಂತೆ, ರಾಜ್ಯಕ್ಕೆ ಪ್ರಧಾನಿ, ರಾಷ್ಟ್ರಪತಿ ಸೇರಿದಂತೆ ಗಣ್ಯರು ಆಗಮಿಸಿದಾಗ ಆತಿಥ್ಯ ನೀಡುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಆದರೆ, ಈ ಸಮಾರಂಭ ನಡೆದಂತಹ ವೇಳೆ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿದ್ದರಿಂದ ಮಾದರಿ ನೀತಿ ಸಂಹಿತೆ ಜಾರಿಯಲ್ಲಿತ್ತು ಆ ಕಾರಣದಿಂದ ರಾಜ್ಯ ಸರ್ಕಾರ ಈ ಕಾರ್ಯಕ್ರಮದ ಆಯೋಜನೆಯಲ್ಲಿ ಯಾವುದೇ ಪಾತ್ರ ವಹಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಉಂಟಾಗಿರುವ ಗೊಂದಲ ನಿವಾರಿಸಲು ರಾಜ್ಯ ಸರ್ಕಾರವೇ ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್ ಬಿಲ್ ಬಾಕಿ ಪಾವತಿಸಲು ನಿರ್ಧರಿಸಿದೆ, ಈ ವಿಚಾರದಲ್ಲಿ ರಾಜಕೀಯ ಬೆರೆಸುವುದು ಬೇಡ ಎಂದರು.



ಈಶ್ವರ್ ಬಿ.ಖಂಡ್ರೆ

ಈ ಕಾರ್ಯಕ್ರಮವನ್ನು ವಾಸ್ತವವಾಗಿ ರಾಷ್ಟ್ರೀಯ ಹುಲಿ ಸಂರಕ್ಷಣೆ ಪ್ರಾಧಿಕಾರವೇ ಆಯೋಜಿಸಿತ್ತು.ಒಟ್ಟಾರೆ 6.33 ಕೋಟಿ ರೂ. ವೆಚ್ಚವಾಗಿದ್ದು, ಎನ್‌ಟಿಸಿಎ ರಾಜ್ಯಕ್ಕೆ 3 ಕೋಟಿ ರೂ. ಪಾವತಿಸಿದೆ. ಉಳಿದ ಹಣ ಪಾವತಿಸಿಲ್ಲ. ಈ ಮಧ್ಯೆ ಮೈಸೂರಿನ ರಾಡಿಸನ್ ಬ್ಲೂ ಹೋಟೆಲ್‌ನವರು ಬಿಲ್ ಬಾಕಿ ಸಂಬಂಧ ಕಾರ್ಯಕ್ರಮಕ್ಕೆ ಸಹಯೋಗವಿದ್ದ ರಾಜ್ಯ ಅರಣ್ಯ ಇಲಾಖೆಗೆ ಪತ್ರ ಬರೆದಿದ್ದಾರೆ ಎಂದು ತಿಳಿಸಿದರು.

ಅರ್ಜಿ ಆಹ್ವಾನ

ಮೈಸೂರು, ಮೇ 27–ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿ ವೇತನ ಯೋಜನೆ (NOS)ಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸ್ನಾತಕೋತ್ತರ ಪದವಿ, ಪಿ.ಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಅರ್ಜಿ ಸಲ್ಲಿಸಲು ಮೇ 31 ಕೊನೆಯ ದಿನ. ಆಸಕ್ತರು https://overseas.tribal.gov.in ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಮೇ 27–ಜಿಲ್ಲಾ (ಗ್ರಾಮಾಂತರ) ಕಾಂಗ್ರೆಸ್ ಸಮಿತಿಯ ಸಫಾಯಿ ಕರ್ಮಚಾರಿ ಘಟಕದ ಜಿಲ್ಲಾಧ್ಯಕ್ಷರನ್ನಾಗಿ ಮಂಡಕಳ್ಳಿಯ ಜೈಭೀಮ್ ಪೌರ ಕಾರ್ಮಿಕರ ಬಡಾವಣೆ ನಿವಾಸಿ ಎಸ್.ನಾಗರಾಜು ಅವರನ್ನು ನೇಮಕ ಮಾಡಲಾಗಿದೆ.

ಮಹಿಳೆಯರ ಸ್ವಾವಲಂಬನೆಗೆ ಬ್ಯೂಟಿಷಿಯನ್ ವೃತ್ತಿ ಸಹಕಾರಿ

ಮೈಸೂರು ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್

ಮೈಸೂರು, ಮೇ 27–ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಬ್ಯೂಟಿಷಿಯನ್ ವೃತ್ತಿ ಸಹಕಾರಿಯಾಗಲಿದೆ. ಈ ಮೂಲಕ ತಮ್ಮ ಮಕ್ಕಳಿಗೆ ಉಜ್ವಲವಾದ ಭವಿಷ್ಯ ನೀಡಲು ಸಾಧ್ಯವಾಗಲಿದೆ ಎಂದು ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್ ತಿಳಿಸಿದರು.

ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಸಿಎಫ್‌ಟಿಆರ್‌ಐ ಬಳಿ ಮಹಾತ್ಮ ಗಾಂಧಿ ಅಂಬೇಡ್ಕರ್ ಸಮುದಾಯ ಭವನದಲ್ಲಿ ಬ್ಯೂಟಿಷಿಯನ್ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕುಟುಂಬದ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಅತಿ ಮುಖ್ಯವಾಗಿರುತ್ತದೆ. ಈ ಹಿಂದೆ ಮನೆಗೆಲಸಕ್ಕಷ್ಟೇ ಸೀಮಿತವಾಗಿದ್ದ ಮಹಿಳೆ ಪ್ರಸ್ತುತ ಎಲ್ಲ ಕ್ಷೇತ್ರಗಳಲ್ಲಿಯೂ ಕೆಲಸ ನಿರ್ವಹಿಸುತ್ತಿದ್ದಾಳೆ ಎಂದರು.


ಬ್ಯೂಟಿಷಿಯನ್ ಅನುಭವಿ ತರಬೇತುದಾರರಿಂದ ತರಬೇತಿ ಪಡೆದು, ವೃತ್ತಿಯಲ್ಲಿ ಗುಣಮಟ್ಟ ಕಾಯ್ದುಕೊಂಡಾಗ ಹೆಚ್ಚು ಹೆಚ್ಚು ಗ್ರಾಹಕರನ್ನು ತಲುಪಲು ಸಾಧ್ಯವಾಗುತ್ತದೆ. ಯಾವುದೇ ವೃತ್ತಿಯಲ್ಲಿ ಮೊದಲು ನಮ್ಮಲ್ಲಿಗೆ ಬರುವ ಗ್ರಾಹಕರನ್ನು ಸೌಜನ್ಯದಿಂದ ಮಾತನಾಡಿಸಬೇಕು ಎಂದು ಸಲಹೆ ನೀಡಿದರು.

ಮೈಸೂರು ಬ್ಯೂಟಿಷಿಯನ್ ಅಸೋಸಿಯೇಷನ್ ನಿರ್ದೇಶಕಿ ಮಾಲಿನಿ ಪಾಲಾಕ್ಷ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್‌ನ ಗೌರವಾಧ್ಯಕ್ಷ ಕಾಂತಿಲಾಲ್ ಜೈನ್, ಸಲಹೆಗಾರ ವೆಂಕಟೇಶ್‌ಕುಮಾರ್, ಕಾರ್ಯದರ್ಶಿ ಜ್ಯೋತಿ, ಸಹಕಾರ್ಯದರ್ಶಿ ಚರಣ್, ಖಜಾಂಚಿ ಗಾಯಿತ್ರಿ, ನಿರ್ದೇಶಕ ರಾಜೇಶ್, ಸಂಚಾಲಕರಾದ ಎನ್.ಭರತ್, ದಾಕ್ಷಾಯಿಣಿ, ರಚನಾ, ಸುಶೀಲ, ವಿನುತ್, ತರಬೇತಿದಾರರು ಮತ್ತು ಪೋಷಕರು ಉಪಸ್ಥಿತರಿದ್ದರು.



ಬ್ಯೂಟಿಷಿಯನ್ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.05.2024 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಅನ್ನಪೂರ್ಣೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಕಾರ್ಯಕ್ರಮ, ಬೆಳಗ್ಗೆ 6ಕ್ಕೆ ಅಮ್ಮನವರಿಗೆ ಪಂಚಾಮೃತ, ಕಳಸಾಭಿಷೇಕ, ಅಲಂಕಾರ, ಬೆಳಗ್ಗೆ 9ಕ್ಕೆ ಶ್ರೀ ಸೂಕ್ತ ಹೋಮ, ದುರ್ಗಾ ಹೋಮ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ, ಸಂಜೆ 7 ಗಂಟೆಗೆ ಶ್ರೀನಿವಾಸ ಕಲ್ಯಾಣ, ಸ್ಥಳ: ದೇವಸ್ಥಾನದ ಆವರಣ, ಎನ್.ಆರ್.ಮೊಹಲ್ಲಾ.

■ **ಜೆಎಸ್‌ಎಸ್ ಆಸ್ಪತ್ರೆ, ಶಸ್ತ್ರಚಿಕಿತ್ಸಾ ವಿಭಾಗ, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ :** ಅಂತರರಾಷ್ಟ್ರೀಯ ಮಹಿಳಾ ಆರೋಗ್ಯ ದಿನದ ಪ್ರಯುಕ್ತ ಸ್ತನರೋಗ, ಗರ್ಭಕಂಠ ಕ್ಯಾನ್ಸರ್‌ಗೆ ಉಚಿತ ತಪಾಸಣೆ, ಜಾಗೃತಿ ಶಿಬಿರ, ಸ್ಥಳ: ಮೈಸೂರು ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 9.30ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್, ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: 222, ಲೀಲಾವತಿ ನಾಯ್ಡು, ಅರವಿಂದನಗರ, ಬೆಳಗ್ಗೆ 10.30ಕ್ಕೆ

■ **ಅಶೋಕಪುರಂ ಅಭಿಮಾನಿಗಳ ಬಳಗ, ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್, ವಿಶ್ವಮೈತ್ರಿ ಬುದ್ಧ ವಿಹಾರ :** 2024ರ ಚುನಾವಣೋತ್ತರ ಭಾರತ ಕುರಿತು ಮುಕ್ತ ಸಂವಾದ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ವಿಷಯ ಮಂಡನೆ: ವಿಚಾರವಾದಿ ಶಿವಸುಂದರ್, ಅಂಕಣಕಾರ ಕೆ.ಎನ್.ಲಿಂಗಪ್ಪ, ಮೆಸ್ಕೋ ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ.ಸಬೀರ್ ಮುಸ್ತಾಫ, ಪ್ರಾಸ್ತಾವಿಕ ನುಡಿಗಳು: ಅಶೋಕಪುರಂ ಅಭಿಮಾನಿಗಳ ಬಳಗದ ಮುಖ್ಯಸ್ಥ ಸಿದ್ದಸ್ವಾಮಿ, ಉಪಸ್ಥಿತರು: ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ ಗೌರವಾಧ್ಯಕ್ಷ ಪ್ರೊ.ಟಿ.ಎಂ.ಮಹೇಶ್, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಅಶೋಕ ಸರ್ಕಲ್, ಬೆಳಗ್ಗೆ 11ಕ್ಕೆ

■ **ವ್ಯವಸ್ಥಾಪಕರು:** ಕು. ಶ್ರೀ ಲಲಿತಾ ಉಳಿಯಾರು ಪ್ರಸ್ತುತಪಡಿಸುವ 501ನೇ ಶಾಸ್ತ್ರೀಯ ಹರಿಕಥೆ ಶ್ರೀ ಮೂಲರಾಮಾಯಣಗತ ಹನುಮದ್ವಿರಚಿತ ಸುಂದರಕಾಂಡ–ಹನುಮದ್ವಿಲಾಸ, ವಿದ್ವಾನ್ ಗಣೇಶ್ ಭಟ್–ಕೀಬೋರ್ಡ್, ಚಂದನ್ ಕುಮಾರ್–ವಯೋಲಿನ್, ಚಿ. ಮನ್ವಾರ್ ಮೂರ್ತಿ–ತಾಳ, ಚಿ. ಶ್ರೀಹರಿ ಆಚಾರ್ಯ ಉಳಿಯಾರು – ತಬಲಾ, ಸಭಾ ಕಾರ್ಯಕ್ರಮ, ಉದ್ಘಾಟನೆ : ರಾಷ್ಟ್ರಪತಿಗಳಿಂದ ಪುರಸ್ಕೃತರಾದ ವಿದ್ಯಾವಾಚಸ್ಪತಿ ಡಾ.ವ್ಯಾಸನಕೆರೆ ಪ್ರಭಂಜನಾಚಾರ್ಯರು, ಅಧ್ಯಕ್ಷತೆ: ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ, ಮುಖ್ಯ ಅತಿಥಿಗಳು: ವಿಜಯ ವಿಠ್ಠಲ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್, ಮಲ್ಟಿಲಿಂಕ್ ಪ್ಲಾಂಟ್ ಹೆಡ್ ಗಿರೀಶ್ ಕುಲಕರ್ಣಿ, ಸದ್ವಿದ್ಯಾ ಶಿಕ್ಷಣ ಸಂಸ್ಥೆ ನಿರ್ದೇಶಕ ಎಂ.ಡಿ. ಗೋಪಿನಾಥ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಶ್ರೀ ರಾಘವೇಂದ್ರ ಆರಾಧನಾ ಮಂದಿರ ಸಭಾಂಗಣ, ಅಭಿನವ ಮಂತ್ರಾಲಯ ರಾಘವೇಂದ್ರ ಮಠ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

■ **ಭರಣಿ ಆರ್ಟ್ ಗ್ಯಾಲರಿ :** ಖ್ಯಾತ ನಿಸರ್ಗ ಚಿತ್ರ ಕಲಾವಿದರಾದ ಹಾ.ಪು. ರಂಗಸ್ವಾಮಿ ಅವರ ಜಲವರ್ಣ ಕಲಾಕೃತಿಗಳ ಪ್ರದರ್ಶನ, ಸ್ಥಳ: ಭರಣಿ ಆರ್ಟ್ ಗ್ಯಾಲರಿ, ವಿವೇಕಾನಂದನಗರ, ಬೆಳಗ್ಗೆ 11 ರಿಂದ.

■ **ನಾದಬ್ರಹ್ಮ ಸಂಗೀತ ಸಭಾ :** ಸಂಗೀತ ಕಲಾನಿಧಿ ವಾಸುದೇವಾಚಾರ್ಯ ಸಂಸ್ಮರಣಾ ಕಾರ್ಯಕ್ರಮ, ಡಾ. ನಾಗವಲ್ಲಿ ನಾಗರಾಜ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ಡಾ. ಕೆ.ಟಿ. ಉದಯ್‌ಕಿರಣ್–ಪಿಟೀಲು, ವಿದ್ವಾನ್ ಫಣೀಂದ್ರ ಭಾಸ್ಕರ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಮೈಸೂರು ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

■ **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸ ಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 6ಕ್ಕೆ ಮುಡಿ ಉತ್ಸವ, ಗರುಡೋತ್ಸವ, ಸ್ಥಳ: ದೇವಸ್ಥಾನದ ಆವರಣ, ತಿಲಕ್‌ನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಕರುನಾಡ ಕಬ್ಬಿಗರು, ಲೇಖನ: ಡಾ. ವಿನೋದಾ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.40 ಪದ ಸಂಸ್ಕೃತಿ, ಪ್ರಸ್ತುತಿ: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಅ. ನ. ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಿ.ವಿ.ಸೀತಾ, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ–ಅಂತರಾಷ್ಟ್ರೀಯ ಹಿರಿಯ ಕ್ರೀಡಾಪಟು ವಿಜಯ ರಮೇಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಕೆ.ಬಿ.ಮೀನಾ, 12.30 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್.ಗಣೇಶ್ ಮತ್ತು ಆರ್.ಕುಮಾರೇಶ್–ವೈಯೋಲಿನ್ ವಾದನ, 4.00 ಕಥಾ ಕಾಲಕ್ಷೇಪ–ಶ್ರೀ ಸುಬ್ರಹ್ಮಣ್ಯೇಶ್ವರ, ಪ್ರಸ್ತುತಿ: ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.55 ಕೃಷಿರಂಗ, ಕಿಸಾನ್‌ವಾಣಿ–ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಹಿಪ್ಪುನೇರಳೆ ಬೇಸಾಯ ಹಾಗೂ ಹಿಪ್ಪು ನೇರಳೆಯಲ್ಲಿ ಅಂತರ ಬೆಳೆಗಳ ಬೇಸಾಯ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ.ಸಿ.ಎಂ.ಬಾಬು ಹಾಗೂ ಡಾ.ಆರ್.ಮಹೇಶ್, ಪ್ರಸ್ತುತಿ: ಎನ್.ಕೇಶವಮೂರ್ತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಶಶಾಂಕ್–ಕೊಳಲು ವಾದನ, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ: ಹೆಚ್.ಆರ್.ಕೇಶವಮೂರ್ತಿ, ವ್ಯಾಖ್ಯಾನ: ಮಾರ್ಕಂಡೇಯ ಅವಧಾನಿ, ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಅಂದದ ಮೈಸೂರಿಗೆ ಕಪ್ಪುಚುಕ್ಕೆಯಾಗಿರುವ ಹೊಂಡಗಳು; ಅರೆಬರೆ ಕಾಮಗಾರಿ; ಕಂಡ ಕಂಡಲ್ಲೆಲ್ಲಾ ಫ್ಲೆಕ್ಸ್; ಫುಟ್‌ಪಾತ್ ಅತಿಕ್ರಮಣ



ಜೆಎಸ್‌ಎಸ್ ಆಸ್ಪತ್ರೆ ಸಮೀಪ ರಾಮಾನುಜ ರಸ್ತೆ–ಎಂಜಿ ರಸ್ತೆ ಜಂಕ್ಷನ್‌ನಲ್ಲಿ ಕಾಮಗಾರಿ ಅಧ್ವಾನ.

● ಜೀವ ಕೈಯ್ಯಲ್ಲಿಡಿದು ಸಾಗುವ ವಾಹನ ಸವಾರರು ● ಪಾಲಿಕೆ ಆಡಳಿತ ವ್ಯವಸ್ಥೆಗೆ ಹಿಡಿಶಾಪ ಹಾಕುತ್ತಿರುವ ಕಳಕಳಿಯುಳ್ಳ ಜನತೆ



ಮೈಸೂರು–ಊಟಿ ರಸ್ತೆಯಲ್ಲಿ ಸಾಲು ಸಾಲು ಫ್ಲೆಕ್ಸ್‌ಗಳು.

ಎಸ್.ಬಿ. ದೇವರಾಜ

ಮೈಸೂರು, ಮೇ 27– ಮೈಸೂರಿನ ಹಿರಿಮೆಗೆ ಸ್ಥಳೀಯ ಆಡಳಿತ ವ್ಯವಸ್ಥೆ ಅಪಮಾನ ಮಾಡುತ್ತಿದೆ ಎಂದು ಸಾರ್ವಜನಿಕರು ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರು ಸಾಂಸ್ಕೃತಿಕ, ಪಾರಂಪರಿಕ, ಐತಿಹಾಸಿಕ, ಸ್ವಚ್ಛ–ಸುಂದರ ನಗರಿ ಎಂಬ ಹಿರಿಮೆಯ ಗರಿ ಕಳಚುವ ದುಸ್ಥಿತಿ ನಿರ್ಮಾಣವಾಗುತ್ತಿದ್ದರೂ ಇಲ್ಲಿನ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಅಧ್ವಾನವಾಗಿರುವ ರಸ್ತೆಗಳು, ರಾರಾಜಿಸುತ್ತಿರುವ ಫ್ಲೆಕ್ಸ್‌ಗಳು, ಅರೆಬರೆ ಕಾಮಗಾರಿಗಳು, ಹೀಗೆ ಅಯೋಮಯವಾಗುತ್ತಿದ್ದರೂ ತಲೆಕೆಡಿಸಿಕೊಂಡಿಲ್ಲ. ಮಹಾರಾಜರು ಆಳಿದ ಮೈಸೂರಿನಲ್ಲಿ ಏನಾಗುತ್ತಿದೆ ಎಂಬ ಆತಂಕ ಕಾಡುತ್ತಿದೆ. ಇದಕ್ಕೆ ಆಡಳಿತ ವ್ಯವಸ್ಥೆ ಮಾತ್ರವಲ್ಲ ಮೌನವಾಗಿರುವ ಪ್ರತಿಯೊಬ್ಬ ನಾಗರಿಕರು ಕಾರಣರಾಗುತ್ತೇವೆ ಎಂದು ಪ್ರಜ್ಞಾವಂತರು ಬೇಸರ ವ್ಯಕ್ತಪಡಿಸಿದ್ದಾರೆ.

ಆಸ್ಪತ್ರೆಗಳ ಬಳಿ ಅಧ್ವಾನ

ಅಗ್ರಹಾರದ ರಾಮಾನುಜ ರಸ್ತೆ–ಎಂ.ಜಿ.ರಸ್ತೆ ಜಂಕ್ಷನ್‌ನಲ್ಲಿ ಹೊಂಡ ಬಿದ್ದು ತಿಂಗಳುಗಳೇ ಉರುಳಿವೆ. ಪೈಪ್‌ಲೈನ್ ಕಾಮಗಾರಿಗೆ ರಸ್ತೆ ಅಗೆದು, ಆಮೆಗತಿಯಲ್ಲಿ ಕೆಲಸ ಮುಗಿಸಿದ ಗುತ್ತಿಗೆದಾರರು ಗುಂಡಿಯನ್ನೂ ಸರಿಯಾಗಿ ಮುಚ್ಚಿಲ್ಲ. ಕಾಮಗಾರಿ ಪೂರ್ಣಗೊಂಡ ನಂತರ ತ್ವರಿತವಾಗಿ ರಸ್ತೆ ಮರುಸ್ಥಾಪಿಸಬೇಕೆಂಬ ನಿಯಮವನ್ನೂ ಈ ಗುಂಡಿಯಲ್ಲೇ ಮುಚ್ಚಿದ್ದಾರೆ. ಸಮೀಪದಲ್ಲೇ ಇರುವ ಜೆಎಸ್‌ಎಸ್ ಆಸ್ಪತ್ರೆಗೆ ನಿತ್ಯ ಹತ್ತಾರು ಆಂಬುಲೆನ್ಸ್‌ಗಳು ಸಂಚರಿಸುತ್ತವೆ. ಇತರೆ ವಾಹನಗಳಲ್ಲೂ ರೋಗಿಗಳು ಸಂಚರಿಸುತ್ತಾರೆ. ಈ ಜಂಕ್ಷನ್‌ನಲ್ಲಿ ರೋಗಿಗಳಿಗೆ ಮಾತ್ರವಲ್ಲ ಆರೋಗ್ಯವಂತರಿಗೂ ನರಕಯಾತನೆ.

ಹೆಂಗಸರು, ಮಕ್ಕಳು, ವೃದ್ಧರ ಗತಿಯೇನು?

ನಜರ್‌ಬಾದ್‌ನಲ್ಲಿರುವ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಮುಖ್ಯ ಗೇಟ್ ಬಳಿಯೇ ಭಾರಿ ಹೊಂಡ ಬಿದ್ದಿದೆ. ಸ್ವಲ್ಪ ಎಚ್ಚರ ತಪ್ಪಿದರೂ ಸರ್ಕಲ್ ಕಡೆಯಿಂದ ಬರುವ ವಾಹನಗಳು ಗುಂಡಿಗಿಳಿದು ಅವಘಡ ಸಂಭವಿಸಲಿದೆ. ಇದೇ ಜಾಗದಲ್ಲಿ ಪ್ರಯಾಣಿಕರು ಬಸ್‌ಗೆ ಕಾದು ನಿಲ್ಲುವುದರಿಂದ ಸಾವು–ನೋವಾಗುವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಮಳೆ ಬಂದಾಗ ಹೊಂಡದಲ್ಲಿ ಬರೋಬ್ಬರಿ ನೀರು ತುಂಬಿ, ಕೆರೆ ನಿರ್ಮಾಣವಾಗುತ್ತದೆ. ಹೊಂಡ ಎಷ್ಟು ಆಳವಿದೆ ಎನ್ನುವುದೂ ಗೊತ್ತಾಗುವುದಿಲ್ಲ. ರೋಗಿಗಳು, ಅವರ ಸಹಾಯಕರು ಆಸ್ಪತ್ರೆ ಆವರಣ ಪ್ರವೇಶಿಸಲು ಹರಸಾಹಸ ಮಾಡಬೇಕು. ಮಹಿಳೆಯರು, ಮಕ್ಕಳು, ವೃದ್ಧರ ಪಾಡಂತೂ ಹೇಳತೀರದು.

> **“ ಮುಖ್ಯಮಂತ್ರಿ ಸಿದ್ದರಾಮಯ್ಯರ ತವರು ಇದು. ಅವರು ಆಗಾಗ ಎರಡ್ಮೂರು ದಿನ ಮೈಸೂರಲ್ಲಿ ತಂಗುತ್ತಾರೆ. ಇತ್ತೀಚೆಗೆ ತಮ್ಮ ಸಚಿವ ಸಹೋದ್ಯೋಗಿಗಳೊಂದಿಗೆ ಒಂದೊಂದು ದಿನ ಒಂದೊಂದು ಕಡೆ ಬೆಳಗಿನ ಉಪಹಾರ ಸವಿಯಲು ಹೋಗಿದ್ದರು. ಅವರ ಕಣ್ಣಿಗೆ ಈ ಅವ್ಯವಸ್ಥೆ ಬೀಳದೇ ಇರುವುದು ಅಚ್ಚರಿ. ಇಲ್ಲ ಅಧಿಕಾರಿಗಳು ಅವರ ಕಣ್ಣಿಗೆ ಇಂತಹದ್ದೆಲ್ಲಾ ಬೀಳಬಾರದೆಂದು ಮರೆಮಾಚಿ ಬೇರೆಡೆಯಿಂದ ಕರೆದುಕೊಂಡು ಹೋಗುತ್ತಾರೆ ಅನ್ಸುತ್ತೆ!. –ನಾಗರಾಜ**

ಅರೆಬರೆ ಕಾಮಗಾರಿ

ಅರೆಬರೆ ಕಾಮಗಾರಿ ಮೈಸೂರಿಗೆ ಅಂಟಿರುವ ಶಾಪ. ಯಾವ ಅಧಿಕಾರಿಗಳು ಬಂದರೂ ಇದಕ್ಕೆ ಮುಕ್ತಿ ನೀಡಲು ಸಾಧ್ಯವಾಗಿಲ್ಲ. ಎಲ್ಲಿ ಹೋದರೂ ಒಂದಿಲ್ಲೊಂದು ಅಪರಿಪೂರ್ಣ ಕೆಲಸಗಳ ದರ್ಶನವಾಗುತ್ತದೆ. ಮೈಸೂರು–ಊಟಿ ರಸ್ತೆಯೂ ಇದಕ್ಕೆ ಹೊರತಾಗಿಲ್ಲ. ರಸ್ತೆ ಅಭಿವೃದ್ಧಿ ನೆಪದಲ್ಲಿ ಅಧ್ವಾನ ಮಾಡಿದ್ದಾರೆ. ಒಂದು ಭಾಗದಲ್ಲಿ ಡಾಂಬರೀಕರಣ ಮಾಡದೆ ಹಾಗೆಯೇ ಬಿಟ್ಟಿದ್ದಾರೆ. ಇದರಿಂದ ದ್ವಿಚಕ್ರ ವಾಹನಗಳ ಟೈರ್ ಸ್ಕಿಡ್ ಆಗುವ ಆತಂಕ ನಿರ್ಮಾಣವಾಗಿದೆ. ಕಾರು ಇನ್ನಿತರ ವಾಹನಗಳು ಚಾಲಕನ ನಿಯಂತ್ರಣ ತಪ್ಪುವ ಸಾಧ್ಯತೆಯೂ ಇದೆ. ಅಲ್ಲದೆ ಗುಂಡಿಯಲ್ಲಿ ಮಳೆ ನೀರು ನಿಂತು ರಾಡಿಯಾಗುತ್ತಿದೆ. ಈ ಅರೆಬರೆ ಕಾಮಗಾರಿಯಿಂದ ಅಪಘಾತ ಸಂಭವಿಸಿದರೆ ಯಾರು ಹೊಣೆ?.



ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಗೇಟ್ ಬಳಿ ರಸ್ತೆ ಬದಿ ಭಾರಿ ಹೊಂಡ ಬಿದ್ದಿರುವುದು.

ಫುಟ್‌ಪಾತ್ ಅತಿಕ್ರಮಣ

ಮೈಸೂರು ನಗರದ ಮತ್ತೊಂದು ಗಂಭೀರ ಸಮಸ್ಯೆ ಎಂದರೆ ಫುಟ್‌ಪಾತ್ ಅತಿಕ್ರಮಣ. ಪಾದಚಾರಿಗಳು ಜೀವ ಪಣಕ್ಕಿಟ್ಟು ರಸ್ತೆಯಲ್ಲೇ ಓಡಾಡುತ್ತಿದ್ದರೂ ಅಧಿಕಾರಿಗಳಿಗೆ ಇದು ಗಂಭೀರವೆನಿಸಿಲ್ಲ. ನಜರ್‌ಬಾದ್ ಮಹದೇಶ್ವರ ರಸ್ತೆ, ಏರ್ ಫೋರ್ಸ್ ಸೆಲೆಕ್ಷನ್ ಬೋರ್ಡ್, ಸಂಗೊಳ್ಳಿ ರಾಯಣ್ಣ ಸರ್ಕಲ್ ಬಳಿ ವ್ಯಾಪಾರ ಕೇಂದ್ರವೇ ನಿರ್ಮಾಣವಾಗಿದೆ. ಜ್ಯೋತಿನಗರ ಪೊಲೀಸ್ ಕ್ವಾಟ್ರರ್ಸ್‌ಗೆ ಸಂಪರ್ಕಿಸುವ ರಸ್ತೆ ಬಳಿ ಉದ್ದಕ್ಕೂ ಆಟೋಗಳನ್ನು ನಿಲ್ಲಿಸಿಕೊಂಡು ಹಣ್ಣು–ತರಕಾರಿ, ಸೊಪ್ಪು, ಆಟಿಕೆ ಇನ್ನಿತರ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಗ್ರಾಹಕರು ರಸ್ತೆ ಬದಿಯೇ ವಾಹನ ನಿಲ್ಲಿಸಿ, ಖರೀದಿ ಮಾಡುತ್ತಾರೆ. ಪರಿಣಾಮ ಸದಾ ವಾಹನ ದಟ್ಟಣೆ ಇರುವ ಈ ರಸ್ತೆಯಲ್ಲಿ ಸುಗಮ ಸಂಚಾರ ಮರೀಚಿಕೆಯಾಗಿದೆ. ಆತುರಾತುರವಾಗಿ ವಾಹನ ಓಡಿಸುವವರ ಮಧ್ಯೆ ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ಸಿಲುಕಿ ತೊಂದರೆ ಅನುಭವಿಸುವ ದುಸ್ಥಿತಿ ನಿರ್ಮಾಣವಾಗಿದೆ. ಒಂದೆರಡು ನಿಮಿಷ ನಿಂತುಕೊಂಡರೆ ಇದು ಅಪಘಾತ ವಲಯವಾಗಿ ಬದಲಾಗಿರುವುದು ಅರಿವಿಗೆ ಬರುತ್ತದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಂಡಲ್ಲೆಲ್ಲಾ ಫ್ಲೆಕ್ಸ್

ಮೈಸೂರು ಫ್ಲೆಕ್ಸ್ ಮುಕ್ತ ನಗರ ಎನ್ನುವುದು ಕೇವಲ ಘೋಷಣೆಗಷ್ಟೇ ಸೀಮಿತವಾಗಿದೆ. ಹೆದ್ದಾರಿಗಳು, ಪ್ರಮುಖ ರಸ್ತೆಗಳು, ವೃತ್ತಗಳಲ್ಲೂ ಫೆಕ್ಸ್ ರಾರಾಜಿಸುತ್ತಿವೆ. ಹುಟ್ಟುಹಬ್ಬದ ಶುಭಾಶಯ, ಶ್ರದ್ಧಾಂಜಲಿ ಹಾಗೂ ನಾನಾ ಜಾಹೀರಾತು ಫ್ಲೆಕ್ಸ್ ಹಾಗೂ ಕಟೌಟ್‌ಗಳು ರಾರಾಜಿಸುತ್ತಿವೆ. ಮರಗಳಿಗೆ ಕಟ್ಟಿರುವ ಫ್ಲೆಕ್ಸ್, ಬ್ಯಾನರ್‌ಗಳ ಲೆಕ್ಕವಿಲ್ಲ. ಇತ್ತೀಚೆಗೆ ಅಭಯ ತಂಡದ ಕಾರ್ಯಾಚರಣೆಯೂ ಸ್ಥಗಿತವಾಗಿದೆ. ಹೇಳೋರು–ಕೇಳೋರು ಯಾರೂ ಇಲ್ಲದಂತಾಗಿ ಎಲ್ಲೆಂದರಲ್ಲಿ ಫ್ಲೆಕ್ಸ್, ಕಟೌಟ್ ಹಾಕುತ್ತಿದ್ದಾರೆ. ನಗರಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಕೈಗೊಂಡ ಖಡಕ್ ನಿರ್ಣಯಗಳು ಕಡತಗಳಲ್ಲಿ ಮಾತ್ರ ಭದ್ರವಾಗಿವೆ. ಅವು ಅಧಿಕಾರಿಗಳಿಗೂ ನೆನಪಿಲ್ಲ, ಜನರೂ ಮರೆತುಬಿಟ್ಟಿದ್ದಾರೆ. ಫ್ಲೆಕ್ಸ್‌ಗಳು, ಕಟೌಟ್‌ಗಳಿಂದ ನಗರದ ಅಂದಗೆಡುವುದು ಮಾತ್ರವಲ್ಲ ಅಪಘಾತಗಳೂ ಸಂಭವಿಸುವ ಸಾಧ್ಯತೆ ಇದೆ ಎಂಬ ಕನಿಷ್ಠ ಕಾಳಜಿ ಯಾರಿಗೂ ಇಲ್ಲವಾಗಿದೆ. ಕಾನೂನು–ನಿಯಮವನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗದಿದ್ದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಣೆ ಮಾಡುವ ಜವಾಬ್ದಾರಿಯೂ ಅಧಿಕಾರಿಗಳಲ್ಲಿ ಇಲ್ಲ ಎಂದಾದರೆ ಏನು ಗತಿ?. ಹೀಗೆ ಮುಂದುವರೆದರೆ ಮೈಸೂರಿನ ಪರಿಸ್ಥಿತಿ ಏನಾಗಬಹುದು?. ಸಂಪೂರ್ಣ ಅಧ್ವಾನವಾದರೆ ಪರಿಣಾಮ ಏನಾಗುತ್ತದೆ?. ಸ್ಥಳೀಯ ಆಡಳಿತ ಶಕ್ತಿ ಹೀನವಾದರೆ ನಗರ ಉಳಿಯುವುದು ಹೇಗೆ? ಎಂದು ಸಾರ್ವಜನಿಕರು ಅತೀವ ಆತಂಕ ವ್ಯಕ್ತಪಡಿಸಿದ್ದಾರೆ.



ನಜರ್‌ಬಾದ್ ಏರ್‌ಫೋರ್ಸ್ ಸೆಲೆಕ್ಷನ್ ಬೋರ್ಡ್ ಬಳಿ ರಸ್ತೆ ಬದಿಯೇ ಮಾರುಕಟ್ಟೆಯಾಗಿರುವುದು.



ಮೈಸೂರು–ಊಟಿ ರಸ್ತೆಯಲ್ಲಿ ಅರೆಬರೆ ಡಾಂಬರೀಕರಣ ಹೀಗಿದೆ ನೋಡಿ.

ಕೇವಲ 24 ಗಂಟೆ ರಾಜ್ಯಾದ್ಯಂತ ಅಪಘಾತದಲ್ಲಿ 51 ಸಾವು

ಮಾಜಿ ಸಿಎಂ ಕುಮಾರಸ್ವಾಮಿ ದಿಗ್ಭ್ರಮೆ

ಬೆಂಗಳೂರು, ಮೇ 27(ಕೆಎಂಶಿ)– 24 ಗಂಟೆ ಅವಧಿಯಲ್ಲಿ ರಾಜ್ಯದ ವಿವಿಧೆಡೆ ಸಂಭವಿಸಿರುವ ರಸ್ತೆ ಅಪಘಾತಗಳಲ್ಲಿ 51 ಜನ ಪ್ರಾಣ ಕಳೆದುಕೊಂಡಿರುವ ಸುದ್ದಿ ಓದಿ ಬಹಳ ಆಘಾತವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.



ಈ ಸಂಬಂಧ ಟ್ವೀಟ್ ಮಾಡಿರುವ ಅವರು, ರಸ್ತೆ ಸುರಕ್ಷತೆ ಜೊತೆಗೆ ನಾಗರಿಕರ ರಕ್ಷಣೆ ಹೊಣೆಗಾರಿಕೆಯೂ ಪೊಲೀಸರ ಜವಾಬ್ದಾರಿಯಾಗಿರುತ್ತದೆ ಎಂಬುದನ್ನು ಮರೆಯಬಾರದು, ಅತೀ ವೇಗದ ವಾಹನ ಚಾಲನೆಯಿಂದ ಒಂದು ಜೀವ ಹೋದರೆ ಅವರ ಆಸರೆಯಲ್ಲಿನ ಒಂದು ಕುಟುಂಬವೇ ಅನಾಥವಾಗುತ್ತದೆ ಎಂದಿದ್ದಾರೆ.

ಅತೀ ವೇಗ ಹಾಗೂ ಅಜಾಗರೂಕತೆಯ ವಾಹನ ಚಾಲನೆಯಿಂದಲೇ ಹೆಚ್ಚು ಅಪಘಾತಗಳು ಸಂಭವಿಸಿವೆ ಎನ್ನುವ ಅಂಶ ಆಘಾತಕಾರಿ, ಚಾಲಕರು ಎಚ್ಚರಿಕೆಯಿಂದ ವಾಹನ ಚಲಾಯಿಸಬೇಕು ಹಾಗೂ ರಸ್ತೆ ಸುರಕ್ಷತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಪೊಲೀಸ್ ವ್ಯವಸ್ಥೆ ವಾಹನ ಚಾಲನಾ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಬೇಕು. ವಾಹನಗಳ ದುರಂತಗಳಲ್ಲಿ ಜೀವ ಕಳೆದುಕೊಂಡ ಎಲ್ಲರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬಗಳಿಗೆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುವುದಾಗಿ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಆಟೋ ಪ್ರಯಾಣಕ್ಕೆ ಶೇ.5ರಷ್ಟು ಜಿಎಸ್‌ಟಿ

ಸರ್ಕಾರದ ಆದೇಶ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಆಟೋರಿಕ್ಷಾ ಪ್ರಯಾಣ ದರಗಳ ಮೇಲೆ ಶೇ.5 ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸೇರಿಸುವಂತೆ ಆದೇಶಿಸಿದ್ದ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಆಟೋ ಪ್ರಯಾಣಕ್ಕೆ ಶೇ.5ರಷ್ಟು ಮಾತ್ರ ಜಿಎಸ್‌ಟಿ ವಿಧಿಸಿ ರಾಜ್ಯ ಸರ್ಕಾರವು 2022ರ ನವೆಂಬರ್ 25ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಪ್ರಶ್ನಿಸಿ ಓಲಾ ಮತ್ತು ಉಬರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ, ಸರ್ಕಾರದ ಆದೇಶವನ್ನು ಎತ್ತಿಹಿಡಿದಿದೆ.

ಆಟೋರಿಕ್ಷಾ ಅಗ್ರಿಗೇಟರ್ ಸೇವೆ ಒದಗಿಸಲು ಚಾಲ್ತಿಯಲ್ಲಿರುವ ಪರವಾನಗಿ ಹೊಂದಿರುವ ಸಂಸ್ಥೆಗಳಿಗೆ ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಕಾಲಕಾಲಕ್ಕೆ ನಿಗದಿಪಡಿಸಿರುವ ಆಟೋರಿಕ್ಷಾ ಪ್ರಯಾಣ ದರಗಳ ಮೇಲೆ ಶೇ.5ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ಜಿಎಸ್‌ಟಿ ತೆರಿಗೆಯನ್ನು ಸೇರಿಸಿ ಅಂತಿಮ ಪ್ರಯಾಣ ದರ ನಿಗದಿಪಡಿಸಲು ರಾಜ್ಯದ ಎಲ್ಲಾ ಸಾರಿಗೆ ಪ್ರಾಧಿಕಾರಿಗಳಿಗೆ ರಾಜ್ಯ ಸರ್ಕಾರವು 2022ರ ನವೆಂಬರ್ 25ರಂದು ಅಧಿಸೂಚನೆ ಹೊರಡಿಸಿತ್ತು.

ಕಿಡ್ನ್ಯಾಪ್ ಕೇಸ್‌ನಲ್ಲಿ ರೇವಣ್ಣ ಬೆನ್ನಲ್ಲೇ ಭವಾನಿಗೂ ಬಂಧನ ಭೀತಿ; ಕೋರ್ಟ್ ಮೊರೆ

ಬೆಂಗಳೂರು, ಮೇ 27: ಕೆ.ಆರ್.ನಗರ ಮಹಿಳೆಯ ಅಪಹರಣ ಪ್ರಕರಣದಲ್ಲಿ ಈಗಾಗಲೇ ಜಾಮೀನಿನ ಮೇಲೆ ಶಾಸಕ ಎಚ್.ಡಿ. ರೇವಣ್ಣ ಅವರು ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಇದರ ಬೆನ್ನಲ್ಲೇ ಇದೀಗ ಪತ್ನಿ ಭವಾನಿ ರೇವಣ್ಣ ಅವರಿಗೂ ಬಂಧನ ಭೀತಿ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ನಿರೀಕ್ಷಣಾ ಜಾಮೀನು ಕೋರಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಕೋರ್ಟ್ ಜಾಮೀನು ಅರ್ಜಿ ವಿಚಾರಣೆಯನ್ನು ನಾಳೆಗೆ (ಮೇ 28) ಮುಂದೂಡಿದೆ.



ವಿಚಾರಣೆಗೆ ಹಾಜರಾಗುವಂತೆ ಭವಾನಿಗೆ ನೋಟಿಸ್ ನೀಡಲಾಗಿದೆ. ಯಾವ ನಿಯಮ ದಡಿ ನೋಟಿಸ್ ನೀಡಿದ್ದಾರೆಂದು ಎಸ್‌ಐಟಿ ತಿಳಿಸಿಲ್ಲ ಹೀಗಾಗಿ ಭವಾನಿ ರೇವಣ್ಣಗೂ ಬಂಧನದ ಭೀತಿ ಇದೆ. ಈ ಹಿನ್ನೆಲೆಯಲ್ಲಿ ಮಧ್ಯಂತರ ಜಾಮೀನು ನೀಡುವಂತೆ ವಕೀಲರು ಮನವಿ ಮಾಡಿದ್ದಾರೆ. ಆದರೆ ಕೋರ್ಟ್, ಇದಕ್ಕೆ ಆಕ್ಷೇಪಣೆ ಸಲ್ಲಿಸುವಂತೆ SIT ಪೊಲೀಸರಿಗೆ ನೋಟಿಸ್ ನೀಡಿ ವಿಚಾರಣೆಯನ್ನು ನಾಳೆಗೆ ಮುಂದೂಡಿದೆ.

ರೇವಣ್ಣ ಮೇಲೆ ಕೇಳಿ ಬಂದಿರುವ ಅಪಹರಣ ಪ್ರಕರಣದಲ್ಲಿ ಕುಮ್ಮಕ್ಕು ಕೊಟ್ಟ ಆರೋಪ ಭವಾನಿ ರೇವಣ್ಣ ಮೇಲೆ ಇದೆ. ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಭವಾನಿ ರೇವಣ್ಣ ಅವರ ಸಂಬಂಧಿ ಸತೀಶ್ ಬಾಬು ಹೇಳಿಕೆ ದಾಖಲಿಸಿಕೊಂಡಿದ್ದ ಎಸ್‌ಐಟಿ, ಆತನ ಮೊಬೈಲ್ ವಶಕ್ಕೆ ಪಡೆದು ಕಾಲ್ ಡೀಟೆಲ್ಸ್ ಸಹ ಪರಿಶೀಲನೆ ಮಾಡಿತ್ತು ಈ ವೇಳೆ ಭವಾನಿ ರೇವಣ್ಣ ಮತ್ತು ಸತೀಶ್ ಬಾಬು ಕುರಿತು ಬಗ್ಗೆ ಮಾಹಿತಿ ಸಿಕ್ಕಿತ್ತು ಈ ಆಧಾರದ ಮೇಲೆ ಎಸ್‌ಐಟಿ ಭವಾನಿ ಅವರನ್ನು ವಿಚಾರಣೆ ನಡೆಸಲು ನೋಟಿಸ್ ಜಾರಿ ಮಾಡಿತ್ತು

ಪ್ರಕರಣಕ್ಕೆ ಸಂಬಂಧಿಸಿದಂತೆ ಭವಾನಿ ರೇವಣ್ಣ ಅವರಿಗೂ ಸಹ ಎಸ್‌ಐಟಿ ಈಗಾಗಲೇ ನೋಟಿಸ್ ಜಾರಿ ಮಾಡಿತ್ತು. ಹಾಜರಾಗುವಂತೆ ಎಸ್‌ಐಟಿ ನೋಟಿಸ್ ಜಾರಿ ಮಾಡಿತ್ತು ಆದರೆ, ಮೊದಲ ನೋಟಿಸ್‌ಗೆ ಭವಾನಿ ಕ್ಯಾರೇ ಎಂದಿಲ್ಲ.

ಮಹಾಕಾವ್ಯಗಳ ಕೆಲ ಸನ್ನಿವೇಶಗಳಿಗೆ ಇನ್ನು ಉತ್ತರ ಸಿಕ್ಕಿಲ್ಲ; ಆ ಕೌತುಕತೆ ಓದುಗರ ಹಿಡಿದಿಟ್ಟಿದೆ

● ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಮತ ● ಪ್ರೊ.ದೇವಣ್ಣ ಹೊಸಕೋಟೆಯವರ 'ಹರಿಶ್ಚಂದ್ರ ಕಥಾಮೃತ', 'ಅಲ್ಲಮ ಚರಿತ್ರಾಮೃತ' ಕೃತಿ ಬಿಡುಗಡೆ

ಮೈಸೂರು, ಮೇ 27(ಎಸ್‌ಪಿಎನ್)– ರಾಮಾಯಣ, ಮಹಾಭಾರತ ಹಾಗೂ ಸತ್ಯಹರಿಶ್ಚಂದ್ರ ಸೇರಿದಂತೆ ಇತರೆ ಪ್ರಾಚೀನ ಮಹಾಕಾವ್ಯಗಳ ಕೆಲ ಸನ್ನಿವೇಶಗಳಿಗೆ ಇಂದಿಗೂ ಉತ್ತರ ದೊರೆಯದ ಕಾರಣ ಅವು ಓದುಗನಿಗೆ ಇನ್ನು ಹತ್ತಿರವಾಗುತ್ತಿವೆ ಎಂದು ಹಿರಿಯ ಸಾಹಿತಿ ಪ್ರೊ.ಎಂ. ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಆವರಣದಲ್ಲಿ ಸಂವಹನ ಪ್ರಕಾಶನದ ವತಿಯಿಂದ ಏರ್ಪಡಿಸಿದ್ದ ಕವಿ ಪ್ರೊ.ದೇವಣ್ಣ ಹೊಸಕೋಟೆ ರಚಿತ 'ಹರಿಶ್ಚಂದ್ರ ಕಥಾಮೃತ' ಹಾಗೂ 'ಅಲ್ಲಮ ಚರಿತ್ರಾಮೃತ' ಕೃತಿಗಳನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಿದ ನಂತರ 'ಹರಿಶ್ಚಂದ್ರ ಕಥಾಮೃತ' ಕೃತಿ ಕುರಿತು ಮಾತನಾಡಿದರು.

ಕವಿ ಪ್ರೊ.ದೇವಣ್ಣ ಹೊಸಕೋಟೆ ನನಗೆ ಆಪ್ತರು. ನನಗೆ ಉತ್ತರ ಪತ್ರಿಕೆ ಮೌಲ್ಯಮಾಪನ ಸಂದರ್ಭದಲ್ಲಿ ಪರಿಚಿತರಾದವರು. ದೇವಣ್ಣ ನೇರ ನಡೆ–ನುಡಿ ಹೊಂದಿರುವ ವ್ಯಕ್ತಿತ್ವ ಈ ಕಾರಣಕ್ಕೆ ನನಗೆ ಅತ್ಯಾಪ್ತರು.



ಕವಿ ಪ್ರೊ.ದೇವಣ್ಣ ಹೊಸಕೋಟೆ ರಚಿತ 'ಹರಿಶ್ಚಂದ್ರ ಕಥಾಮೃತ' ಹಾಗೂ 'ಅಲ್ಲಮ ಚರಿತ್ರಾಮೃತ' ಕೃತಿಗಳನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು.

ಒಮ್ಮೆ ಮೌಲ್ಯಮಾಪನಕ್ಕೆ ಬರುವಾಗ ಜೇನುಹುಳುಗಳು ಕಚ್ಚಿ, ಅವರ ಮುಖ ಸಂಪೂರ್ಣ ಊದಿಕೊಂಡಿತ್ತು. ಚಿಕಿತ್ಸೆ ಪಡೆದು ಮೌಲ್ಯಮಾಪನಕ್ಕೆ ಹಾಜರಾಗಿದ್ದರು. ಮೌಲ್ಯಮಾಪನದಲ್ಲಿದ್ದವರೆಲ್ಲಾ ದೇವಣ್ಣ ಅವರನ್ನು ಏಕೆ ರಜೆ ಪಡೆಯಬಾರದಿತ್ತೆ ಎಂದು ಕೇಳಿದಾಗ, ಬೇಡ ಈ ರೀತಿ ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ ಎಂದಿದ್ದರು. ಹಾಗಾಗಿ ಅವರು ಅತ್ಯಾಪ್ತರು ಎಂದು ಲೇಖಕರ ವ್ಯಕ್ತಿತ್ವವನ್ನು ಪರಿಚಯಿಸಿದರು.

'ಹರಿಶ್ಚಂದ್ರ ಕಥಾಮೃತ' ಕಾವ್ಯವನ್ನು ಬಹಳ ಅಚ್ಚುಕಟ್ಟಾಗಿ ರಚಿಸಿದ್ದಾರೆ. ರಾಘವಾಂಕನ ವಾರ್ಧಿಕ ಷಟ್ಪದಿಯಲ್ಲಿ ರಚಿತವಾಗಿರುವ ಹರಿಶ್ಚಂದ್ರ ಕಾವ್ಯದಂತೆ ದೇವಣ್ಣ ರಚಿತ ಕಾವ್ಯವು ಸಾಗುತ್ತದೆ. ಮೊದಮೊದಲು ಓದುಗರಿಗೆ ಲಯ ಸಿಗದಿದ್ದರೂ 18 ಪುಟಗಳು ಓದಿದ ನಂತರ ಓದುಗನನ್ನು ಮನಸ್ಸಿಗೆ ತಟ್ಟುತ್ತವೆ ಎಂದರು.

ದೇವಣ್ಣ, ಸತ್ಯಹರಿಶ್ಚಂದ್ರ ಕಥಾವಸ್ತುವನ್ನು ಮಹಾಕಾವ್ಯವಾಗಿ ರಚಿಸಲು ಏಕೆ ಆಯ್ಕೆ ಮಾಡಿಕೊಂಡರೋ ಗೊತ್ತಿಲ್ಲ ಆದರೆ, ಇದನ್ನು ರಚಿಸುವುದು ಅಷ್ಟು ಸುಲಭವಲ್ಲ. ಅಲ್ಲದೆ, ರಾಘವಾಂಕನಿಗೆ ಎದುರಾಗುವ ಟೀಕೆಗಳಿಗೆ ಪ್ರಸ್ತುತ ದೇವಣ್ಣ ರಚಿಸಿರುವ ಕಾವ್ಯದಲ್ಲೂ ಉತ್ತರಿಸುವ ಗೋಜಿಗೆ ಹೋಗಿಲ್ಲ. ಇದು ಓದುಗನ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು.

ಈ ಕಾವ್ಯದಲ್ಲಿ 'ವಿಶ್ವಾಮಿತ್ರ'ನ ಪಾತ್ರ ವಿಲನ್ ಆಗಿ ಬಿಂಬಿತವಾಗಿದೆ. ಆ ಪಾತ್ರವನ್ನು ಕಥೆಗೆ ಮಾತ್ರ ಸೀಮಿತವಾಗಿ ಓದುಗರು ಪರಿಗಣಿಸಬೇಕು. ಲೇಖಕರು 'ವಿಶ್ವಾಮಿತ್ರ'ನನ್ನು ಮುನಿರಾಕ್ಷಸ ಎಂತಲೂ ಒಮ್ಮೆ ಸಂಬೋಧಿಸಿದ್ದಾರೆ. ಅಲ್ಲದೆ, ಸತ್ಯ ಹರಿಶ್ಚಂದ್ರ ಮೊದಲು ಸಾಮಾನ್ಯ ಮನುಷ್ಯನಂತೆ ವರ್ತಿಸುತ್ತಾನೆ. ಆದರೆ, ಈತನ ಹೆಂಡತಿ ಚಂದ್ರಮತಿ ಪಾತ್ರ ಬಹಳ ಎತ್ತರ ಸ್ಥಾನದಲ್ಲಿದೆ. ಅಂತೆಯೇ ಹರಿಶ್ಚಂದ್ರ ಹಠಕ್ಕೆ ಬಿದ್ದು ಸತ್ಯದ ಹಾದಿಯಲ್ಲಿ ನಡೆಯಲು ಮುಂದಾಗುತ್ತಾನೆ. ಸತ್ಯಹರಿಶ್ಚಂದ್ರ, ಪುತ್ರ ಲೋಹಿತಾಶ್ವ, ಮಡದಿ ಚಂದ್ರಮತಿ ಹಾಗೂ ವಿಶ್ವಾಮಿತ್ರನ ಶಿಷ್ಯ ನಕ್ಷತ್ರ ಸೇರಿದಂತೆ ಇತರರ ನಡುವಿನ ಕಥಾವಸ್ತು, ಸತ್ಯ ಹರಿಶ್ಚಂದ್ರ ಪಾತ್ರದ ಬದುಕಿನ ಚಿತ್ರವನ್ನೇ ಬದಲಿಸುತ್ತದೆ ಎಂದರು.

ಒಮ್ಮೆ ಮಾಸ್ತಿ ರಚಿತ ಕಾಕನಕೋಟೆ ಕಥೆಗೆ ಪ್ರಶಸ್ತಿ ಬಂದಿರುತ್ತದೆ. ಈ ಪ್ರಶಸ್ತಿಯನ್ನು ಸ್ವೀಕರಿಸುವಂತೆ ಮಾಸ್ತಿ ಅವರಲ್ಲಿ ಸಂಬಂಧಪಟ್ಟವರು ತಿಳಿಸಿದಾಗ, ಆ ಪ್ರಶಸ್ತಿಯನ್ನು ಮಾಸ್ತಿ ಸ್ವೀಕರಿಸಲು ನಿರಾಕರಿಸುತ್ತಾರೆ. ಏಕೆಂದರೆ, ನಾನು ಬರೆದಿರುವ ಕಾಕನಕೋಟೆ ಕಥಾವಸ್ತು ನಾಟಕದ ಕಥಾವಸ್ತು. ನೀವು ಹೇಳುತ್ತಿರುವುದು ಕಾಕನ ಕೋಟೆ ಸಿನಿಮಾ ಕಥೆಗೆ ಪ್ರಶಸ್ತಿ ಬಂದಿದೆ ಎನ್ನುತ್ತೀರಿ. ಹಾಗಾಗಿ ಈ ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲ ಎಂದು ಮಾಸ್ತಿ ಹೇಳಿದ ಪ್ರಸಂಗವನ್ನು ವಿವರಿಸಿದರು. ನಂತರ ಕುಂದೂರು ಮಠದ ಡಾ.ಶರತ್ಚಂದ್ರ ಸ್ವಾಮೀಜಿ ಅವರು 'ಅಲ್ಲಮ ಕಥಾ ಮೃತ' ಪುಸ್ತಕ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಸಂವಹನ ಸಂಸ್ಥೆಯ ಪ್ರಕಾಶಕ ಡಿ.ಎನ್.ಲೋಕಪ್ಪ, ಲೇಖಕ ಪ್ರೊ.ದೇವಣ್ಣ ಹೊಸಕೋಟೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಮಗ : (ಮನೆಗೆಲಸದಲ್ಲಿ ತಂದೆ ನಿರತನಾಗಿದ್ದಾಗ) "ಅಪ್ಪಾ ಸ್ವಲ್ಪ ಹೋಂ ವರ್ಕ್ ಮಾಡ್ಕೊಡಪ್ಪಾ"

ತಂದೆ : "ನಿಮ್ಮ ಅಮ್ಮನ ಹೋಂ ವರ್ಕ್ ಮಾಡೋದ್ರಲ್ಲೇ ಏದುಸಿರು ಬಿಡ್ತಾ ಇದ್ದೀನಿ. ಇನ್ನು ನಿನ್ನ ಶಾಲಾ ಹೋಂ ವರ್ಕ್ ಅನ್ನೂ ನೀನು ಮಾಡಿಕೊಡು ಅಂತಿದ್ದೀಯಲ್ಲಾ!"

ಮೈಸೂರು ಮಿತ್ರ

ಮಂಗಳವಾರ, 28 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದ್ವೇಷಿಸುವವನ ದೊಡ್ಡ ಶತ್ರುವೆಂದರೆ ಸ್ವತಃ ಅವನ ದ್ವೇಷ. ಅದು ಅವನಿಗೆ ಹಾನಿ ಮಾಡದೆ ಇರದು. – ತಿರುವಳ್ಳವರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಂಡರೆ ಸೇರದವನಿಗೆ ಉಂಡರೆ ಸೇರೀತೆ?

ನಿಮ್ಮ ಪತ್ರಗಳು

■ ಸೆಲ್ಫಿ ಗೀಳಿಗೆ ಬೀಳಲಿ ಕಡಿವಾಣ!

ಮಾನ್ಯರೆ,



ರಾಜ್ಯದಲ್ಲಿ ಮಳೆಯ ಆರ್ಭಟ ದಿನೇ ದಿನೆ ಜೋರಾಗುತ್ತಿದೆ. ಪರಿಣಾಮವಾಗಿ ಕೆರೆ, ಕಟ್ಟೆ, ನದಿ–ಕಾಲುವೆ, ಪ್ರಪಾತ ಹಾಗೂ ಜಲಪಾತದಂತಹ ಪ್ರದೇಶಗಳು ನೀರಿನಿಂದ ಮೈದುಂಬಿ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ರಜಾ ದಿನಗಳು ಹಾಗೂ ವಾರಾಂತ್ಯದ ಅವಧಿಯಲ್ಲಿ ರಜೆಯ ಮೋಜಿಗೆ ಬರುವ ಪ್ರವಾಸಿಗರು ಸೆಲ್ಫಿ ಗೀಳಿಗೆ ಬಿದ್ದು ಅಪಾಯಕಾರಿ ಸ್ಥಳಗಳಲ್ಲಿ ನೀರಿಗಿಳಿದು ಅನಾಹುತ ಹಾಗೂ ಪ್ರಾಣಹಾನಿ ಮಾಡಿಕೊಳ್ಳುತ್ತಿರುವುದು ಪತ್ರಿಕೆಗಳಲ್ಲಿ ಆಗಾಗ ಸುದ್ದಿಯಾಗುತ್ತಲೇ ಇರುತ್ತದೆ. ಈ ರೀತಿಯ ಘಟನೆಗಳು ರಾಜ್ಯದ ಹಲವೆಡೆ ಪದೇ ಪದೆ ನಡೆಯುತ್ತಿರುವುದು ತುಂಬಾ ಆತಂಕಕಾರಿ ಬೆಳವಣಿಗೆಯಾಗಿದೆ. ಈಗಿನ ಯುವ ಪೀಳಿಗೆ ಮೊಬೈಲ್‌ನ ಸೆಲ್ಫಿ ಗೀಳಿಗೆ ದಾಸರಾಗಿದ್ದು, ಇದರಿಂದಾನೇ ಈ ರೀತಿಯ ಸಾವು–ನೋವುಗಳು ಅಲ್ಲಲ್ಲಿ ಕಂಡು ಬರುತ್ತಿವೆ.

ಇಂದು ಸೆಲ್ಫಿ ಸಂಸ್ಕೃತಿ ಅತೀ ಹೆಚ್ಚಾಗಿ ದಾಂಗುಡಿ ಇಟ್ಟಿರುವುದು ಯುವ ಪೀಳಿಗೆಯ ಮೇಲೆ. ಅತ್ಯಾಧುನಿಕ ಕ್ಯಾಮರಾ ತಂತ್ರಜ್ಞಾನಗಳಿರುವ ಮೊಬೈಲ್ ಫೋನ್‌ಗಳು ಇಂದು ಹೆಚ್ಚಿನವರ ಕೈಗಳಲ್ಲಿ ರಾರಾಜಿಸುತ್ತಿದ್ದು, ಪ್ರತಿಯೊಬ್ಬರು ಫೋಟೋಗ್ರಾಫರ್‌ಗಳಾಗುತ್ತಿದ್ದಾರೆ. ನಿಂತಲ್ಲಿ–ಕುಳಿತಲ್ಲಿ ಫೋಟೋ ಕ್ಲಿಕ್ಕಿಸುತ್ತಾರೆ. ಈ ರೀತಿಯ ಸೆಲ್ಫಿ ಕ್ಲಿಕ್ಕಿಸುವ ಹುಚ್ಚಾಟದಲ್ಲಿ ಈಗಾಗಲೇ ಹಲವಾರು ಜನರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ ಹಾಗೂ ಈಗಲೂ ಕಳೆದುಕೊಳ್ಳುತ್ತಿದ್ದಾರೆ. ಜನರಿಂದು ಸೆಲ್ಫಿಗಳನ್ನು ಕ್ಲಿಕ್ಕಿಸಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡುವುದರಲ್ಲಿ ಮಹದಾನಂದವನ್ನು ಕಾಣುತ್ತಿದ್ದಾರೆ. ಫೇಸ್‌ಬುಕ್, ವಾಟ್ಸಾಪ್ ಹಾಗೂ ಇನ್ಸ್ಟಾಗ್ರಾಮ್‌ನಂತಹ ಹಲವಾರು ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ಫೋಟೋಗಳನ್ನು ಹರಿಯಬಿಟ್ಟು ಲೈಕ್–ಕಾಮೆಂಟ್‌ಗಳ ನಿರೀಕ್ಷೆಯಲ್ಲಿ ಕಾಲಹರಣ ಮಾಡುವುದು ಅರ್ಥಹೀನ ಅನ್ನಿಸುತ್ತದೆ.

ಸೆಲ್ಫಿ ಇಂದು ಕೇವಲ ಸಮಸ್ಯೆಯಾಗಿ ಉಳಿದಿಲ್ಲ. ಅದು ಗೀಳಿನ ಅಪಾಯವನ್ನು ಹೆಚ್ಚಿಸುತ್ತದೆ ಮತ್ತು ಯಾವುದೇ ಆದರೂ ಅದು ಚಟವಾದರೆ ಹಾನಿಕರವಾಗುತ್ತದೆ. ಅಲ್ಲದೆ ಮುಂದೊಂದು ದಿನ ವ್ಯಕ್ತಿಯ ಖಾಸಗೀತನಕ್ಕೆ ಅಪಾಯವನ್ನುಂಟು ಮಾಡಬಲ್ಲದು. ಈ ನಿಟ್ಟಿನಲ್ಲಿ ನಮ್ಮ ಯುವಜನತೆ ಯೋಚಿಸಿ ಸೆಲ್ಫಿಯ ಹುಚ್ಚುತನಕ್ಕೆ ಶರಣಾಗದೆ, ಮರುಳಾಗದೆ ಇರುವುದು ಒಳಿತು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಬಲಿಗಾಗಿ ಕಾಯುತ್ತಿರುವ ರಸ್ತೆ ಹಳ್ಳ

ಮಾನ್ಯರೆ,

ಮೈಸೂರು ಬನ್ನಿಮಂಟಪದಿಂದ ಹೈವೇ ವೃತ್ತದ ಮೂಲಕ ಯಾದವಗಿರಿ ಹಾಗೂ ಬೃಂದಾವನ ಬಡಾವಣೆಗೆ ಹೋಗುವ ರಸ್ತೆಯ (ಗ್ರ್ಯಾಂಡ್ ಮರ್ಕ್ಯುರ್–



ಅಂಡರ್‌ಬ್ರಿಡ್ಜ್) ಬಳಿ ಅವೈಜ್ಞಾನಿಕವಾಗಿ ಆಳವಾದ ಹಳ್ಳ ತೋಡಿ, ಅದನ್ನು ಸರಿಯಾಗಿ ಮುಚ್ಚದೆ ಬೇಜವಾಬ್ದಾರಿ ಮೆರೆಯಲಾಗಿದೆ. ವಾಹನ ಸವಾರರು ಮುಖ್ಯವಾಗಿ ದ್ವಿಚಕ್ರವಾಹನ ಸವಾರರು ಸಂಚರಿಸಲು ಕಷ್ಟಪಡುತ್ತಿದ್ದಾರೆ. ಈ ಹಳ್ಳವು ರಸ್ತೆ ಮಟ್ಟಕ್ಕಿಂತ ಪ್ರಾಯಶಃ ಮೂರ್‍ನಾಲ್ಕು ಅಡಿ ಆಳವಿದ್ದು, ವಾಹನ ಸವಾರರ ಬಲಿಗಾಗಿ ಕಾದು ಕುಳಿತಿರುವಂತೆ ಕಾಣುತ್ತಿದೆ. ಈ ಕೆಲಸವು ಬಹುಶಃ ಯಾರೋ ಸುತ್ತಮುತ್ತಲಿನ ಅಂಗಡಿ ಮಾಲೀಕರು ತಮ್ಮ ನೀರಿನ ಪೈಪ್‌ಲೈನ್ ದುರಸ್ತಿಪಡಿಸಿಕೊಳ್ಳಲು ಇಲ್ಲವೆ ಕೇಬಲ್ ಹಾಕುವವರು ಗುಂಡಿ ತೆಗೆದು ಸರಿಯಾಗಿ ಮುಚ್ಚಿ ಮಟ್ಟ ಮಾಡದಿರುವುದು ಕಂಡುಬರುತ್ತಿದೆ. ಈ ರಸ್ತೆಯು ಒಂಟಿಕೊಪ್ಪಲಿನಿಂದ ಬನ್ನಿಮಂಟಪಕ್ಕೆ ಸಂಪರ್ಕಿಸುವ ಪ್ರಮುಖ ರಸ್ತೆಯಾಗಿರುವುದರಿಂದ ಸದಾ ವಾಹನಗಳ ಸಂಚಾರ ದಟ್ಟಣೆ ಜಾಸ್ತಿ ಇರುತ್ತದೆ. ಮಳೆ ಬಿದ್ದಾಗ ಈ ಗುಂಡಿಯು ಸಂಪೂರ್ಣವಾಗಿ ನೀರಿನಿಂದ ತುಂಬಿಕೊಳ್ಳುವುದರಿಂದ ರಾತ್ರಿ ಸಮಯದಲ್ಲಿ ಈ ಗುಂಡಿ ಸರಿಯಾಗಿ ಕಾಣಿಸದೆ ಸಣ್ಣಪುಟ್ಟ ಅಪಘಾತಗಳು ಈಗಾಗಲೇ ಸಂಭವಿಸಿವೆ. ಆದ್ದರಿಂದ ಪಾಲಿಕೆ ಅಧಿಕಾರಿಗಳು ಪರಿಶೀಲಿಸಿ ಕೂಡಲೇ ಕ್ರಮ ಕೈಗೊಳ್ಳಬೇಕಾಗಿ ಮನವಿ.

–ಯಶಸ್. ಆರ್, ಯುವ ಪತ್ರಕರ್ತ, ಮೈಸೂರು.

■ ವಿದ್ಯುತ್ ಇಲಾಖೆಗೆ ಆಧುನಿಕ ಟಚ್ ಬೇಕು

ಮಾನ್ಯರೆ,

ನಮ್ಮದು ಈಗ ಡಿಜಿಟಲ್ ಯುಗ. ಭಾರತ ಹಲವಾರು ತಾಂತ್ರಿಕ ಸೇವೆಯಲ್ಲಿ ಕ್ರಾಂತಿಯನ್ನೇ ಮಾಡಿ ಜಗತ್ತಿನಲ್ಲಿ ಅಗ್ರಸ್ಥಾನದಲ್ಲಿದೆ. ಎಲ್ಲಾ ಉದ್ಯಮಗಳಲ್ಲಿ ಹಲವಾರು ಹೊಸ ನವೀಕೃತ ತಾಂತ್ರಿಕ ಸೇವೆಯನ್ನು ಜನ ಪಡೆಯುತ್ತಿದ್ದಾರೆ. ಆದರೆ ಇನ್ನೂ ನವೀಕೃತಗೊಳ್ಳದ ಸೇವೆಗಳಲ್ಲೊಂದು ಎಂದರೆ ಅದು ನಮ್ಮ ವಿದ್ಯುತ್ ಉದ್ಯಮ. ದೇಶ ಎಷ್ಟೇ ಪ್ರಗತಿ ಹೊಂದಿದರು ನಮ್ಮ ವಿದ್ಯುತ್ ಕಂಬಗಳು ಮಾತ್ರ ಅನಾದಿಕಾಲದಿಂದಲೂ ಹಾಗೆಯೇ ಉಳಿದುಕೊಂಡು ನಮ್ಮ ನಗರದ ಸೌಂದರ್ಯ ಹಾಳು ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದೆ! ಎಲ್ಲೆಂದರಲ್ಲಿ ಕಂಬಗಳ ಮೇಲೆ ಸುತ್ತಿಟ್ಟಿರುವ ಕೇಬಲ್ ಗೊಂಚಲುಗಳು, ಸ್ವಲ್ಪ ಮಳೆ ಬಂದರೆ ಪದೇ ಪದೆ ಕಡಿತವಾಗುವ ವಿದ್ಯುತ್ ಸೇವೆ, ಇದರಿಂದ ಹಲವು ಉದ್ಯಮಗಳು, ವಾಸದ ಮನೆಗಳಿಗೆ ತೊಂದರೆ ಆಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಹಲವಾರು ದೇಶಗಳಲ್ಲಿ ವಿದ್ಯುತ್ ಕಂಬಗಳಿದ್ದು, ನೆಲದಿಂದ ಕೇಬಲ್‌ಗಳನ್ನು ತೆಗೆದುಕೊಂಡು ಯಾವುದೇ ಕೇಬಲ್‌ಗಳನ್ನು ನೇತಾಡದಂತೆ ನೋಡಿಕೊಂಡು ಉತ್ತಮ ಸೇವೆಯನ್ನು ಸಲ್ಲಿಸಿರುವುದನ್ನು ನಾವು ನೋಡಿದ್ದೇವೆ. ಆದರೆ ನಮ್ಮಲ್ಲಿನ ವಿದ್ಯುತ್ ಸೇವೆಯಲ್ಲಿ ಇಂತಹ ಯಾವುದೇ ಹೊಸ ತಂತ್ರಜ್ಞಾನವನ್ನು ಪರಿಚಯಿಸದೆ ಈ ಕ್ಷೇತ್ರವನ್ನು ನವೀಕೃತಗೊಳಿಸದೆ ಇನ್ನೂ ಸ್ವಾತಂತ್ರ್ಯ ಪೂರ್ವ ಕಾಲದ ರೀತಿಯ ತಂತ್ರಜ್ಞಾನವನ್ನು ಮುಂದುವರಿಸಿಕೊಂಡು ಬಂದಿರುವುದು ಎಷ್ಟು ಸರಿ. ಇದರಿಂದ ಎಷ್ಟು ಅನಾಹುತ ಹಾಗೂ ಸಾವು ನೋವುಗಳಾಗಿವೆ ಎಂದು ಸತತವಾಗಿ ಮಾಧ್ಯಮಗಳು ಪ್ರಸಾರ ಮಾಡುತ್ತಲೇ ಇರುತ್ತವೆ. ಈ ವಿಷಯದಲ್ಲಿ ಸರ್ಕಾರ ಕ್ರಾಂತಿಕಾರಿ ಹೆಜ್ಜೆಯಿಟ್ಟು ಈ ಹಳೇ ವ್ಯವಸ್ಥೆಯನ್ನು ಆದಷ್ಟು ಬೇಗ ಬದಲಾಯಿಸಬೇಕೆಂದು ಕೇಳಿಕೊಳ್ಳುತ್ತೇನೆ.

–ರಾಘವೇಂದ್ರ ಎಂ.ಎಸ್, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಕರ್ನಾಟಕದ ಮೊದಲ ಮಹಿಳಾ ಮಂತ್ರಿ ಯಶೋಧರಾ ದಾಸಪ್ಪ



ಯಶೋಧರಾ ದಾಸಪ್ಪ

ಇಂದು ಯಶೋಧರ ದಾಸಪ್ಪ ಜನ್ಮ ದಿನಾಚರಣೆ

ಕೆ.ಹೆಚ್.ರಾಮಯ್ಯ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿ ಸಂಘದ ಸರ್ವ ಸದಸ್ಯರ ಸಭೆ ಹಾಗೂ ಶ್ರೀಮತಿ ಯಶೋಧರ ದಾಸಪ್ಪ ಅವರ ಜನ್ಮದಿನ ಆಚರಣೆಯನ್ನು ಮೇ 28ರಂದು ಬೆಳಗ್ಗೆ 10.30ಕ್ಕೆ ವಿದ್ಯಾವರ್ಧಕ ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಕಾರ್ಯದರ್ಶಿ ಸರೋಜ ತುಳಸಿದಾಸ್, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಪಿ.ವಿಶ್ವನಾಥ್, ಸಂಘದ ಗೌರವಾಧ್ಯಕ್ಷ ಎಂ.ಕೆ. ಶಂಕರಲಿಂಗೇಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಂಘದ ಅಧ್ಯಕ್ಷ ಡಾ.ಪಿ.ಬೋರೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಯಶೋಧರ ದಾಸಪ್ಪ ಅವರ ಕುರಿತು ವಿಜೇಂದ್ರ ಬೂಕನಕೆರೆ ಮಾತನಾಡಲಿದ್ದಾರೆ. ಸಮಾರಂಭದಲ್ಲಿ 75 ವರ್ಷದ ಸದಸ್ಯರಿಗೆ ಅಭಿನಂದಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೇ 28, ಯಶೋಧರಾ ದಾಸಪ್ಪ ಅವರ ಜನ್ಮ ದಿನೋತ್ಸವ. ತನ್ನಿಮಿತ್ತ ಈ ಲೇಖನ

ನಮ್ಮ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪಾತ್ರ ಅತ್ಯಂತ ಪ್ರಮುಖವಾದದ್ದು. ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯ, ಅಧಿಕಾರ ಶಾಹಿಯ ವಿರುದ್ಧ ಸತ್ಯ, ಅಹಿಂಸೆ, ಅಸಹಕಾರದ ಮೂಲ ಮಂತ್ರಗಳನ್ನು ಉಸಿರಾಗಿಸಿಕೊಂಡು ಅನೇಕ ರೀತಿಯ ವಿಶಿಷ್ಟವಾದ ಜನಾಕರ್ಷಣೀಯ ಚಳವಳಿಗಳನ್ನು ರೂಪಿಸಿ ಹಿರಿಯರು–ಕಿರಿಯರು, ಬಡವರು–ಬಲ್ಲಿದರು, ಹೆಣ್ಣು–ಗಂಡುಗಳೆಂಬ ಭೇದ–ಭಾವವಿಲ್ಲದೆ ಅಬಾಲವೃದ್ಧರಾಧಿಯಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ಈ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿ ಸಮಸ್ತ ಭಾರತೀಯರನ್ನೂ ಜೊತೆ ಜೊತೆಯಲಿ ಕಿಂದರಿ ಜೋಗಿಯಂತೆ ಕರೆದೊಯ್ದವರು ಮಹಾತ್ಮ ಗಾಂಧೀಜಿ.

ಹಾಗಾಗಿ ಭಾರತದ ಚರಿತ್ರೆಯಲ್ಲಿ 1919ರಿಂದ 1947ರ ಕಾಲಘಟ್ಟವನ್ನು 'ಗಾಂಧಿಯುಗ' ಎಂದೇ ಕರೆಯಲಾಗುತ್ತದೆ. ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಮಹಾ ಸಂಗ್ರಾಮದ ಹಾದಿಯಲ್ಲಿ ಒಟ್ಟಾಗಿ ಹೆಜ್ಜೆ ಹಾಕಿದವರು ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯ್ ಪಟೇಲ್, ಸುಭಾಷ್ ಚಂದ್ರಬೋಸ್, ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ ಸೇರಿದಂತೆ ಸಹಸ್ರ ಸಹಸ್ರ ಮಂದಿ ನೇತಾರರು. ಇವರೆಲ್ಲರ ಜೊತೆಗೆ ಮಹಾತ್ಮ ಗಾಂಧೀಜಿಯ ವೈಯಕ್ತಿಕ ಜೀವನದಲ್ಲಿ ಜೀವದಾತೆಯಂತೆ ಹೆಚ್ಚಿನ ಪ್ರಭಾವ ಬೀರಿದವರು ಅವರ ಮಡದಿ ಕಸ್ತೂರಬಾ ಗಾಂಧಿ. ಇವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ ಮಡದಿಯಷ್ಟೇ ಆಗಿರಲಿಲ್ಲ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿದ್ದ ವೀರ ಸೇನಾನಿಯೂ ಹೌದು. ಗಾಂಧಿ ಸೇವಾಗ್ರಾಮದ ಆಶ್ರಮದಲ್ಲಿದ್ದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯಾಗಿ ನಿಂತು ದೇಶಕ್ಕಾಗಿ ಪತಿಯೊಡನೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಕರ್ಮಯೋಗಿ ಎಂದೇ ಹೆಸರಾಗಿದ್ದವರು.

ಇಂತಹ ಮಹಾ ಚೇತನ ಗಾಂಧಿ ಪತ್ನಿ ಕಸ್ತೂರಬಾ ಗಾಂಧಿಯ ನಿಕಟವರ್ತಿಯಾಗಿ ಅವರ ಪ್ರಭಾವಲಯದಲ್ಲಿದ್ದ ಅಪ್ಪಟ ಗಾಂಧಿವಾದಿ ಯಶೋಧರಾ ದಾಸಪ್ಪ ನವರು ಕರ್ನಾಟಕ ನಾಡಿನ ಉದ್ದಗಲಕ್ಕೂ ಪ್ರಸಿದ್ಧರು.

ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಕರ್ನಾಟಕ ಏಕೀಕರಣ ಹೋರಾಟಗಾರ್ತಿಯಾಗಿ, ಗಾಂಧೀ ಮಾರ್ಗದಲ್ಲಿ ನಡೆದು ಸಮಾಜ ಸೇವಕಿಯಾಗಿ ಮತ್ತು ಕರ್ನಾಟಕ ರಾಜ್ಯದ ಮೊದಲ ಮಹಿಳಾ ಮಂತ್ರಿಯಾಗಿ ಸೇವೆ ಸಲ್ಲಿಸಿದವರು ಯಶೋಧರಾ ದಾಸಪ್ಪ. ಅವರು 1905ರ ಮೇ 28ರಂದು ಬೆಂಗಳೂರಿನಲ್ಲಿ ಜನಿಸಿದರು. ಜನಸೇವೆಯೇ ಜನಾರ್ದನನ ಸೇವೆಯೆಂದು ನಂಬಿದ್ದ ಹಾಗೆಯೇ ನಡೆದು ಕೊಳ್ಳುತ್ತಿದ್ದ ಎಲ್ಲರ ಪಾಲಿನ ಆಪದ್ಬಾಂದವ ಕುಟುಂಬವಾಗಿ ಖ್ಯಾತಿಗಳಿಸಿದ್ದ ದೊಡ್ಡಬಳ್ಳಾಪುರ ತಾಲೂಕಿನ ಕಲ್ಲುದೇವನಹಳ್ಳಿಯ ಚಿಕ್ಕಣ್ಣೇಗೌಡರ ವಂಶದ ಕುಡಿ ಇವರು. ತಂದೆ, ಮೈಸೂರು ಮಹಾರಾಜರ ಒಡನಾಡಿಯಾಗಿ ರಾಜರಂತೆಯೇ ಇದ್ದು ಜನಸೇವಕರಾಗಿದ್ದ ಸುಪ್ರಸಿದ್ಧ ಸಮಾಜ ಸೇವಕ ಕೆ.ಎಚ್. ರಾಮಯ್ಯ ಹಾಗೂ ತಾಯಿ ಸುಸಂಸ್ಕೃತ ಮನೆತನದ ರೇವಮ್ಮ. ಇವರ ಸುಪುತ್ರಿಯೇ ಯಶೋಧರಾ ದಾಸಪ್ಪ.

ಬುದ್ದನ ಮಾನವೀಯ ಚಿಂತನೆಗಳ ಮೇರು ವ್ಯಕ್ತಿತ್ವದ ಕೆ.ಹೆಚ್.ರಾಮಯ್ಯ ದಂಪತಿ ತಮ್ಮ ಸುಪುತ್ರಿಗೆ ಪ್ರೀತಿಯಿಂದ ಇಟ್ಟ ಹೆಸರು ಯಶೋಧರೆ. ಇದು ಭಗವಾನ್ ಬುದ್ಧ ದೇವನ ಆದರ್ಶ ಪತ್ನಿಯ ಹೆಸರು. ಬಹುಶಃ ಆ ದಿನಗಳಲ್ಲಿ ಇಂಥ ಹೆಸರನ್ನು ಅಷ್ಟಾಗಿ ಯಾರೂ ಇಡುತ್ತಿರಲಿಲ್ಲ. ಈಗಲೂ ಅಷ್ಟೆ ಇದೊಂದು ಅಪರೂಪದ ನಾಮಾಂಕಿತ. ಬುದ್ಧನ ಮಾನವೀಯ ತತ್ವಾನುಸಾರಿ ಕೆ.ಹೆಚ್.ರಾಮಯ್ಯ ದಂಪತಿ ಬುದ್ಧ ಮತ್ತು ಯಶೋಧರೆಯ ತತ್ವಾದರ್ಶಗಳ ಸಂಕೇತ. ಯಶೋಧರಾ ದಾಸಪ್ಪ ಅವರು ಚಿನ್ನದ ಚಮಚವನ್ನು ಬಾಯಲ್ಲಿಟ್ಟು ಕೊಂಡು ಬಂದವರೆನ್ನುತ್ತಾರಲ್ಲ ಹಾಗೆ ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ, ಓರ್ವ ಸಾಮಾನ್ಯ ಸಾಮಾಜಿಕ ಕಾರ್ಯಕರ್ತೆಯಾಗಿ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸೇರಲು ನಿರ್ಧರಿಸಿದರು. ಸೇರಿದವರೇ ಹೋರಾಟದ ಕಿಚ್ಚನ್ನು ಇನ್ನಷ್ಟು ಹೆಚ್ಚಿಸಿ ಮಹಾತ್ಮ ಗಾಂಧಿಯವರ ಮಡದಿ ಕಸ್ತೂರು ಬಾ ಅವರಂತೆಯೇ ಸ್ವಾತಂತ್ರ ಚಳವಳಿಗೆ ಶಕ್ತಿ ತುಂಬಿದರು.

ಯಶೋಧರ ದಾಸಪ್ಪ ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ದಿನದಿಂದ ದಿನಕ್ಕೆ ಸಕ್ರಿಯರಾಗುತ್ತಾ ಹೋದರು. ಇವರು ಪಾಲ್ಗೊಂಡಿದ್ದ 1930ರ ಅರಣ್ಯ ಸತ್ಯಾಗ್ರಹ ಚಳವಳಿಯಲ್ಲಿ 1200ಕ್ಕೂ ಹೆಚ್ಚು ಜನ ಸೆರೆವಾಸ ಅನುಭವಿಸಿದರು. 1938ರ ವಿದುರಾಶ್ವತ್ಥ ಚಳವಳಿಯಲ್ಲಿ 35 ಮಂದಿ ಪೊಲೀಸ್ ಗುಂಡಿನ ದಾಳಿಯಲ್ಲಿ ಸಾವನ್ನಪ್ಪಿದರು. ಈ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಇವರೂ ಸೆರೆವಾಸ ಅನುಭವಿಸಿದ್ದರು.

ಯಶೋಧರಾ ಅವರ ಮನೆಯು ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದ ಭೂಗತ ಸತ್ಯಾಗ್ರಹಿಗಳ ಚಟುವಟಿಕೆಯ ಕೇಂದ್ರವಾಗಿತ್ತು. ಸ್ವಾತಂತ್ರ್ಯ ಆಂದೋಲನ 'ಕಾರರ ಮೇಲೆ ಕ್ರೂರ ಕಾರ್ಯಾಚರಣೆಗಳಿಗೆ ಕುಖ್ಯಾತನಾಗಿದ್ದ ಹ್ಯಾಮಿಲ್ಟನ್ ಹೆಸರನ್ನು ಕಟ್ಟಡವೊಂದಕ್ಕೆ ಇಡಲು ಸರ್ಕಾರ ನಿರ್ಧರಿಸಿದಾಗ ಯಶೋಧರಾ ಅವರು ಸರ್ಕಾರದ ವಿರುದ್ಧ ಅನೇಕ ಆಕ್ರಮಣಕಾರಿ ಭಾಷಣಗಳನ್ನು ಮಾಡಿ ಪ್ರತಿಭಟಿಸಿದ್ದರು.

ಯಶೋಧರಾ ದಾಸಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಎಸ್.ಆರ್.ಕಂಠಿ ಮತ್ತು ಎಸ್.ನಿಜಲಿಂಗಪ್ಪ ಅವರ ಸಂಪುಟಗಳಲ್ಲಿ ಸಚಿವೆಯಾಗಿ ದಕ್ಷತೆ ಮೆರೆದಿದ್ದರು. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಹಿರಿಯ ಸಚಿವೆಯಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಪಾನನಿರೋಧ ಕುರಿತಾಗಿದ್ದ ಆಜ್ಞೆಯನ್ನು ತೆರವುಗೊಳಿಸಿದ್ದನ್ನು ವಿರೋಧಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಆ ಕಾಲದಲ್ಲಿ ಬಹು ದೊಡ್ಡ ಸುದ್ದಿಯಾಗಿ ನಾಡಿನಾದ್ಯಂತ ಮಾರ್ದನಿಸಿತ್ತು. ಯಶೋಧರಾ ಅವರು ಖ್ಯಾತ ವಕೀಲರೂ ಹಾಗೂ ಜವಾಹರಲಾಲ್ ನೆಹರು ನೇತೃತ್ವದ ಕೇಂದ್ರ ಸಂಪುಟದಲ್ಲಿ ಸಚಿವರಾಗಿದ್ದ ಎಚ್.ಸಿ.ದಾಸಪ್ಪ ಅವರನ್ನು 1926ರಲ್ಲಿ ವಿವಾಹವಾಗಿದ್ದರು. ಈ ದಂಪತಿಗಳ ಕಿರಿಯ ಪುತ್ರ ತುಳಸಿದಾಸ್ ದಾಸಪ್ಪ ಅವರು ಚರಣ್ ಸಿಂಗ್ ಅವರ ಕೇಂದ್ರ ಸಂಪುಟದಲ್ಲಿ ರಾಜ್ಯ ಸಚಿವರಾಗಿದ್ದರು. ಇವರು ಮೂರು ಬಾರಿ ಸಂಸದರಾಗಿ ಆಯ್ಕೆಯಾಗಿ ಹ್ಯಾಟ್ರಿಕ್ ದಾಖಲೆ ಬರೆದಿದ್ದಾರೆ. ಇವತ್ತಿಗೂ ಈ ದಾಖಲೆ ಅವರ ಹೆಸರಿನಲ್ಲೇ ಇದೆ!

ಇಂತಹ ಧೀರೋದ್ದಾತ ಸ್ವಾತಂತ್ರ್ಯಜ್ಯೋತಿ ಯಶೋಧರ ದಾಸಪ್ಪ 1980ರ ಜೂನ್ 20ರಂದು ಉಸಿರು ಚೆಲ್ಲಿದರು. ಇವರ ಸೇವೆ ಮತ್ತು ಸಾಧನೆಗಾಗಿ 1972ರಲ್ಲಿ, ಅವರಿಗೆ ಭಾರತ ಸರ್ಕಾರವು ತನ್ನ ಅತ್ಯುನ್ನತ ನಾಗರಿಕ ಪ್ರಶಸ್ತಿಯ ಗೌರವವಾದ 'ಪದ್ಮಭೂಷಣ' ವನ್ನು ನೀಡಿತು. ಅವರು ಕರ್ನಾಟಕದಲ್ಲಿ ಕ್ಯಾಬಿನೆಟ್ ಸಚಿವರಾದ ಮೊದಲ ಮಹಿಳೆಯಾಗಿ ಜನಪರ ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ವಿಶೇಷವಾಗಿ ಸ್ತ್ರೀಪರ ಕಾಳಜಿಯಿಂದ ಯೋಜನಾಬದ್ಧವಾಗಿ ಬದ್ಧತೆಯಿಂದ ಕೆಲಸ ಮಾಡಿದವರು. ಒಟ್ಟಾರೆ ಜನಪರ ಕಾಳಜಿಯದಿಟ್ಟ ಮಹಿಳೆ ಎಂಬ ಹೆಗ್ಗಳಿಕೆಗೂ ಪಾತ್ರರಾದವರು. ವಿಪರ್ಯಾಸವೆಂದರೆ ಗಾಂಧಿ ತತ್ವಕ್ಕೆ ಮಾರು ಹೋಗಿದ್ದ ಯಶೋದರ ದಾಸಪ್ಪ ದಂಪತಿಗಳು ಸ್ವಾತಂತ್ರ್ಯ ಹಾಗೂ ದೇಶ ಸೇವೆಯ ಬಗ್ಗೆ ಜನ ಜಾಗೃತಿ ಮೂಡಿಸುತ್ತಿದ್ದ ಇವರ ಪ್ರಾಮಾಣಿಕ ಸಮಾಜ ಸೇವೆ ಹಾಗು ದೇಶ ಸೇವೆಯ ಕೆಲಸಕ್ಕೆ ಬ್ರಿಟಿಷ್ ಸರ್ಕಾರ ರಾಜದ್ರೋಹದ ಪಟ್ಟವನ್ನೂ ಕಟ್ಟಿದ್ದರು.

ಒಮ್ಮೆ ಯಶೋಧರ ದಾಸಪ್ಪ ದಂಪತಿಗಳು ಗಾಂಧಿ ಸೇವಾ ಗ್ರಾಮಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರು ದಲಿತ ಸಮುದಾಯದ ಅನಾಥ ಮಗುವೊಂದನ್ನು ಪೋಷಣೆಗೆ ಇವರಿಗೆ ನೀಡುತ್ತಾರೆ. ಅದನ್ನು ಪ್ರಸಾದವೆಂಬಂತೆ ಸ್ವೀಕರಿಸುವ ದಂಪತಿ ತಮ್ಮ ಎರಡು ಮಕ್ಕಳ ಜತೆ ಮೂರನೆಯವರಾಗಿ ಮಗುವನ್ನು ಸಾಕಿ–ಸಲಹಿ ಪ್ರಾಯಕ್ಕೆ ಬಂದಾಗ ಮದುವೆ ಮಾಡುತ್ತಾರೆ. ನಂತರ ತಮ್ಮ ಆಸ್ತಿಯನ್ನು ಸಹ ಕೊಟ್ಟ ಧೀಮಂತ ವ್ಯಕ್ತಿತ್ವ ದಾಸಪ್ಪ ದಂಪತಿಗಳದು. 1964 ರಲ್ಲಿ ದಾಸಪ್ಪನವರು ಹೃದಯಾಘಾತದಿಂದ ನಿಧನ ಹೊಂದುತ್ತಾರೆ. ನಂತರದ ದಿನಗಳಲ್ಲಿ ಪತಿಯ ಆಶಯದಂತೆ ನಾಡಿಗಾಗಿ ಸಂಪೂರ್ಣ ತಮ್ಮನ್ನು ತೊಡಗಿಸಿಕೊಂಡು ಸೇವಾ ಪಥದಲ್ಲಿ ಮುಂದುವರಿದು ನೊಂದವರ ಕಂಬನಿವರೆಸುವ ಕೈಗಳಾಗುತ್ತಾರೆ.

ಮಂತ್ರಿಯಾಗಿ ಯಶೋಧರಾ ದಾಸಪ್ಪ: 1962 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಗಂಡಸಿ ವಿಧಾನಸಭಾ ಕ್ಷೇತ್ರದಿಂದ ಮೈಸೂರು ರಾಜ್ಯದ ವಿಧಾನಸಭೆಗೆ ಸರಿ ಸುಮಾರು 11,498 ಮತಗಳ ಅಂತರದಿಂದ ಆಯ್ಕೆಗೊಂಡು ಪ್ರಥಮವಾಗಿ ಪಾದಾರ್ಪಣೆ ಮಾಡುತ್ತಾರೆ. ಯಶೋದರಾ ದಾಸಪ್ಪನವರು ಎಸ್. ನಿಜಲಿಂಗಪ್ಪ ಅವರ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿರುತ್ತಾರೆ. ಮುಖ್ಯಮಂತ್ರಿ ಎಸ್ ನಿಜಲಿಂಗಪ್ಪ ಅವರು ಪಾನನಿರೋಧ ಕಾಯ್ದೆ ವಾಪಸ್ ಪಡೆಯುವ ವಿಷಯದಲ್ಲಿ ಅನುಮೋದನೆ ಪಡೆಯಲು 1969 ರಲ್ಲಿ ಮಂತ್ರಿಮಂಡಲದ ಸಭೆ ಕರೆದಿದ್ದರು. ಈ ಸಂದರ್ಭದಲ್ಲಿ ಕಳ್ಳ ಬಟ್ಟಿಯಿಂದ ನೊಂದವರ ಕಣ್ಣು ಮತ್ತು ಕಿವಿಗಳೆರಡೂ ಆಗಿದ್ದ ಯಶೋಧರ ದಾಸಪ್ಪ ಅವರು ಇದನ್ನು ಪ್ರಬಲವಾಗಿ ವಿರೋಧಿಸಿದ್ದರು. ಚುನಾವಣೆಗೂ ಮುನ್ನ ಗಾಂಧಿ ಕರೆಗೆ ಹೋಗೊಟ್ಟು ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಈಚಲು ಮರ ಕಡಿಯುವ ಚಳವಳಿಯಲ್ಲಿ ಭಾಗವಹಿಸಿದ್ದ ನಿಜಲಿಂಗಪ್ಪನವರು ಅಧಿಕಾರ ಬಂದಾಗ ಅವರು ಬದಲಾದ ಪರಿ ಕಂಡು ಯಶೋಧರಾ ದಾಸಪ್ಪನವರು ಅಕ್ಷರಶಃ ಕೆಂಡಾಮಂಡಲರಾಗುತ್ತಾರೆ. ಬದ್ಧತೆಗೆ ಹೆಸರಾದ ಮಹಾ ಸ್ವಾಭಿಮಾನಿಯಾದ ಅವರು ಒಂದು ಕ್ಷಣವೂ ಅಲ್ಲಿರದೆ ತಾನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಹೇಳಿ ಸ್ವಂತ ಕಾರಿನಲ್ಲಿ ಮಂತ್ರಿ ಮಂಡಲ ಸಭೆಗೆ ಹೋಗಿ ರಾಜೀನಾಮೆ ನೀಡಿ, ಬರುತ್ತಾರೆ.

ನೊಂದು ಬೆಂದವರಿಗಾಗಿ, ಸಾಮಾಜಿಕ ಸುಧಾರಣೆಗಾಗಿ ದೇಶಾದ್ಯಂತ ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನಿರ್ಮಾಣ ಮಾಡಿ ಉಳಿದ ಜೀವಿತಾವಧಿಯನ್ನು ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ನಿಮ್ಮ ಬ್ಯಾಂಕ್ ಈಗ 'ನಿಮ್ಮ ಮೊಬೈಲಿನಲ್ಲಿದೆ'...!

ಸುಮಾರು ಇಪ್ಪತ್ತು– ಇಪ್ಪತ್ತೈದು ವರ್ಷಗಳ ಹಿಂದೆ ಹೋದರೆ ನಮ್ಮ ದೇಶದಲ್ಲಿ ಬ್ಯಾಂಕಿನ ಬಹುತೇಕ ಕೆಲಸಗಳಿಗೆ ಗ್ರಾಹಕರು ಬ್ಯಾಂಕಿಗೇ ಹೋಗಬೇಕಿತ್ತು. ಸುಮಾರು 1990 ರಿಂದ ಬ್ಯಾಂಕಿನ ವಲಯದಲ್ಲಿ ಗಣಕೀಕರಣ (computrization) ಪ್ರಾರಂಭವಾಯಿತು. 2000ನೇ ಇಸವಿಯ ಹೊಸ್ತಿಲಲ್ಲಿ ಬಹುತೇಕ ಬ್ಯಾಂಕುಗಳಲ್ಲಿ ಸಾಕಷ್ಟು ವ್ಯವಹಾರವನ್ನು ಗಣಕೀಕರಣ ಮಾಡಲಾಯಿತು. ಆ ನಂತರ ಎಲ್ಲಾ ಬ್ಯಾಂಕುಗಳಲ್ಲೂ ಮಾಹಿತಿ ತಂತ್ರಜ್ಞಾನ ಬಳಕೆ ತ್ವರಿತಗತಿಯಲ್ಲಿ ಸಾಗಿತು. ಎಲ್ಲಾ ಸೇವೆಗಳನ್ನು ಗಣಕೀಕರಣಗೊಳಿಸಲಾಯಿತು.

ಈಗಂತೂ ಗ್ರಾಹಕರು ಒಮ್ಮೆಯೂ ಬ್ಯಾಂಕಿಗೆ ಭೇಟಿ ನೀಡದೆಯೂ ತಮ್ಮ ಬಹುತೇಕ ಬ್ಯಾಂಕಿನ ವ್ಯವಹಾರಗಳನ್ನು ಎಲ್ಲಿದ್ದರೂ, ತಾವಿದ್ದಲ್ಲಿಂದಲೇ ಇಂಟರ್‌ನೆಟ್ ಬ್ಯಾಂಕಿಂಗ್ ಅಥವಾ ಮೊಬೈಲ್ ಬ್ಯಾಂಕಿಂಗ್ ಮೂಲಕ ಮಾಡಬಹುದಾಗಿದೆ. ಬ್ಯಾಂಕಿನಲ್ಲಿ ಹೊಸ ಖಾತೆಯನ್ನೂ ಬ್ಯಾಂಕಿಗೆ ಹೋಗದೆ V-CIP(Video based customer identification process) ಮೂಲಕ ತಾವಿದ್ದ ಜಾಗದಿಂದಲೇ ತೆರೆಯಬಹುದಾಗಿದೆ.

ಎಲ್ಲಾ ಬ್ಯಾಂಕುಗಳಲ್ಲೂ ಈ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯವಿದೆ. ಈ ಸೌಲಭ್ಯವನ್ನು ಪಡೆದುಕೊಂಡರೆ, ಕೈಯಲ್ಲಿ ಒಂದು ಮೊಬೈಲ್ ಮತ್ತು ಡಾಟಾ ಇದ್ದರೆ ಇಡೀ ಬ್ಯಾಂಕೇ ನಮ್ಮ ಕೈಲಿದೆ ಎಂಬಂತೆ ಭಾಸವಾಗುತ್ತದೆ. ಏಕೆಂದರೆ ಬಹುತೇಕ ಬ್ಯಾಂಕಿನ ವ್ಯವಹಾರ ಬ್ಯಾಂಕಿಗೆ ಹೋಗದೇ ನಾವಿದ್ದಲ್ಲಿಂದಲೇ ಮಾಡಬಹುದು.ಹಾಗೂ 24x7 ಕೂಡ ಬ್ಯಾಂಕಿನ ವ್ಯವಹಾರ ಮಾಡಬಹುದು. ಹಾಗಾದರೆ ಒಂದು ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಪಡೆದು ಸ್ವಲ್ಪ ಅದನ್ನು ಉಪಯೋಗಿಸೋದು ಕಲಿತರೆ ಅದರ ಮೂಲಕ ಏನೆಲ್ಲಾ ನಾವು ಮಾಡಬಹುದು;



- ನಮಗೆ ಬೇಕಾದ ಅವಧಿಗೆ ನಿರಖು ಠೇವಣಿ ಖಾತೆ ತೆರೆಯಬಹುದು, ರಿನೀವಲ್ ಮಾಡಬಹುದು ಮತ್ತು ಬೇಕಾದಾಗ ಹಿಂಪಡೆಯಬಹುದು. ಅದರ ಮೇಲೆ ಸಾಲವನ್ನೂ ಪಡೆಯಬಹುದು.
- ಇನ್ನೊಬ್ಬರ ಖಾತೆಗೆ ಹಣ ವರ್ಗಾಯಿಸಬಹುದು, ಕ್ರೆಡಿಟ್ ಕಾರ್ಡ್ ಬಾಕಿ ಪಾವತಿಸಬಹುದು.
- ನೀರಿನ ಬಿಲ್, ಕರೆಂಟ್ ಬಿಲ್, ಇನ್ನಿತರ ಬಿಲ್‌ಗಳ ಪಾವತಿಸಬಹುದು.
- ಬಸ್ಸು, ರೈಲು, ವಿಮಾನ ಟಿಕೆಟ್ ಖರೀದಿಸಬಹುದು
- ಮೊಬೈಲ್ ರೀಚಾರ್ಜ್ ಮಾಡಬಹುದು.
- ಠೇವಣಿ ಮೇಲಿನ ಬಡ್ಡಿಗೆ ತೆರಿಗೆ ಕಡಿತವಾಗದ ಹಾಗೆ 15G/15H ಫಾರಂ ಆಯ್ಕೆ ಮಾಡಿ ಕೊಡಬಹುದು.
- ನಮ್ಮ ಖಾತೆಯ ಸ್ಟೇಟ್‌ಮೆಂಟ್, ಠೇವಣಿ ಮೇಲಿನ ಬಡ್ಡಿಯ ಸರ್ಟಿಫಿಕೇಟ್ ಪಡೆಯಬಹುದಾಗಿದೆ.
- ಕೇಂದ್ರ ಸರ್ಕಾರದ ಕೆಲವು ಸಾಮಾಜಿಕ ಸುರಕ್ಷತೆಯ ದೃಷ್ಟಿಯಿಂದ ಮಾಡಿದ ವಿಮೆಗಳನ್ನು, ಆರೋಗ್ಯ ವಿಮೆಯನ್ನೂ ಆಯ್ಕೆ ಮಾಡಿ ಪಡೆದುಕೊಳ್ಳಬಹುದಾಗಿದೆ.
- ಫಾಸ್ಟ್ ಟ್ಯಾಗ್ ಸೌಲಭ್ಯಗಳು ಲಭ್ಯ
- ಕೇಂದ್ರ ಸರಕಾರದ ಸಾವರಿನ್ ಗೋಲ್ಡ್ ಬಾಂಡ್ ಯೋಜನೆಯಲ್ಲೂ ಹಣ ತೊಡಗಿಸಬಹುದು.
- ಪ್ರಮುಖ ಕಂಪನಿಗಳ IPO ಇದ್ದಲ್ಲಿ ASBA ಮೂಲಕ ಹಣವನ್ನು ಬ್ಲಾಕ್ ಮಾಡಿ ಇಡಬಹುದು.
- ನಾಮಿನೇಶನ್ ಬದಲಾವಣೆ ಕೂಡ ಮಾಡಬಹುದಾಗಿದೆ.
- ಬಯೋಮೆಟ್ರಿಕ್ ಲಾಕ್ ಮತ್ತು ಅನ್‌ಲಾಕ್ ಮಾಡಬಹುದು.

ನಿಮಗೆ ಗೊತ್ತಿರಲಿ: ಕೆಲವು ಸೌಲಭ್ಯಗಳು ಮತ್ತು ಷರತ್ತುಗಳು ಬ್ಯಾಂಕಿನಿಂದ ಬ್ಯಾಂಕಿಗೆ ಸ್ವಲ್ಪ ವ್ಯತ್ಯಾಸ ಇರಬಹುದು. ಆದರೆ ಬಹುತೇಕ ಸೌಲಭ್ಯಗಳು ಬ್ಯಾಂಕುಗಳ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯದಲ್ಲಿ ಇದ್ದೇ ಇರುತ್ತದೆ.

ಈ ಸೌಲಭ್ಯದಿಂದ ಗ್ರಾಹಕರ ಅತ್ಯಮೂಲ್ಯವಾದ ಸಮಯ ಉಳಿತಾಯ ಆಗುತ್ತದೆ. ತ್ವರಿತವಾಗಿ 24x7 ಅನುಕೂಲಕ್ಕೆ ತಕ್ಕಂತೆ ವ್ಯವಹಾರ ಮಾಡಿಕೊಳ್ಳಬಹುದು. ಇಷ್ಟೆಲ್ಲಾ ಅನುಕೂಲತೆ ಮೊಬೈಲ್ ಬ್ಯಾಂಕಿಂಗ್‌ನಲ್ಲಿ ಇರುವುದು ನಿಜ.

ಆದರೆ ಅನಕ್ಷರಸ್ಥರು, ತಂತ್ರಜ್ಞಾನದ ಬಳಕೆ ಸರಿಯಾಗಿ ಬಳಕೆ ಮಾಡಲು ಬರದಿರುವವರು ಅಥವಾ ಬಳಸಲು ಹೆದರುವವರು ಈ ಸೌಲಭ್ಯ ಪಡೆಯಬಾರದು. ಏಕೆಂದರೆ ಸ್ವಲ್ಪ ಯಾಮಾರಿದರೂ ಹಣ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ.

ಮೊಬೈಲ್ ಬ್ಯಾಂಕಿಂಗ್‌ನಲ್ಲಿ ವ್ಯವಹಾರ ಮಾಡುವವರು ಜಾಗೃತರಾಗಿ ವ್ಯವಹಾರ ಮಾಡಬೇಕು. ಪಾಸ್‌ವರ್ಡ್ ಯಾರಿಗೂ ಶೇರ್ ಮಾಡಬಾರದು. ಆಗಿಂದಾಗ್ಗೆ ಖಾತೆ ಪರಿಶೀಲಿಸುತ್ತಾ ಇರಬೇಕು. ಮೊಬೈಲ್ ಕಳೆದರೆ ಕೂಡಲೇ ಬ್ಯಾಂಕಿಗೆ ತಿಳಿಸಿ ಖಾತೆ ಫ್ರೀಜ್ ಮಾಡಿಸಬೇಕು.

ಎಲ್ಲಾ ಖಾತೆದಾರರೂ ಬಯೋಮೆಟ್ರಿಕ್ ಅನ್ನು ಲಾಕ್ ಮಾಡಿಟ್ಟುಕೊಂಡಿರುವುದು ಸೂಕ್ತ. ಬೇಕಾದಾಗ ಅನ್‌ಲಾಕ್ ಮಾಡಬಹುದು. ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಹೊಂದಿರುವವರು ಅದರಲ್ಲೇ ತಾವೇ ಲಾಕ್ ಮತ್ತು ಅನ್‌ಲಾಕ್ ಮಾಡಿಕೊಳ್ಳಬಹುದು. ಉಳಿದವರು ಬ್ಯಾಂಕಿನಲ್ಲಿ ಹೋಗಿ ಮಾಡಿಸಿಕೊಳ್ಳಬಹುದು. ಆಗ ಆಧಾರ್ ಮತ್ತು ಬಯೋಮೆಟ್ರಿಕ್‌ನಿಂದ ನಮಗೇ ತಿಳಿಯದೆ, OTP ಬಾರದೇ ಹಣ ನಮ್ಮ ಖಾತೆಯಿಂದ ಹಣ ದೋಚುವವರಿಂದ ಬಚಾವಾಗಬಹುದು.

ಸ್ವಲ್ಪ ಎಚ್ಚರಿಕೆಯಿಂದ ವ್ಯವಹಾರ ಮಾಡಿದರೆ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಹೆಚ್ಚಿನ ಗ್ರಾಹಕರಿಗೆ ಅನುಕೂಲವಾಗೇ ಇದೆ. ಹೆಮ್ಮೆಯಿಂದ ಅವರು ಹೇಳಬಹುದು 'ನನ್ನ ಬ್ಯಾಂಕು ನನ್ನ ಮೊಬೈಲಿನಲ್ಲಿದೆ'.

• ರಾಘವೇಂದ್ರ ಜೋಯಿಸ್, ಮೈಸೂರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ನಾಳೆ ಪುಸ್ತಕ ಬಿಡುಗಡೆ; ವಸುಮತಿ ಉಡುಪ ಅವರೊಂದಿಗೆ ಸಂವಾದ


ವಸುಮತಿ ಉಡುಪ

ಮೈಸೂರು, ಮೇ 27– ಬೆಂಗಳೂರಿನ ಲೇಖಿಕಾ ಸಾಹಿತ್ಯ ವೇದಿಕೆಯು ಪುಸ್ತಕ ಬಿಡುಗಡೆ, ವಾಣಿ ಕಥಾ ಸ್ಪರ್ಧೆಯ ಬಹುಮಾನ ವಿತರಣೆ ಹಾಗೂ ವಸುಮತಿ ಉಡುಪ ಅವರೊಂದಿಗೆ ಸಂವಾದ ಮತ್ತು ಗೌರವಾರ್ಪಣೆ ಕಾರ್ಯಕ್ರಮವನ್ನು ಮೇ 29ರಂದು ಬೆಳಗ್ಗೆ 10.30ಕ್ಕೆ ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಏರ್ಪಡಿಸಿದೆ.

ಕಾರ್ಯಕ್ರಮವನ್ನು ವೈದ್ಯೆ, ಲೇಖಕಿ ಡಾ.ವೀಣಾ ಭಾರತಿ ಉದ್ಘಾಟಿಸುವರು. ತ್ರಿಶಲಾ ಬ್ರಹ್ಮಯ್ಯ ಅವರ ಸಮ್ಯಕ್ ದೀಪ್ತಿ ಕೃತಿಯನ್ನು ಡಾ.ಎಚ್.ಎ.ಪಾರ್ಶ್ವನಾಥ್ ಬಿಡುಗಡೆಗೊಳಿಸುವರು. ಡಾ.ಎಂ.ಆರ್. ಮಂದಾರವಲ್ಲಿ ಅವರ ದಿವ್ಯ ಚಿಕಿತ್ಸೆ ಕೃತಿಯನ್ನು ಲೇಖಕಿ ಸುಧಾ ಶರ್ಮಾ ಚವತ್ತಿ ಬಿಡುಗಡೆಗೊಳಿಸುವರು. ಟಿ.ಆರ್.ಉಷಾ ರಾಣಿ ಅವರ ಸಕ್ಕರೆ ಮಿಠಾಯಿ ಕೃತಿಯನ್ನು ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಬಿಡುಗಡೆಗೊಳಿಸುವರು.

2023ನೇ ಸಾಲಿನ ಲೇಖಿಕಾ ಪುಸ್ತಕ ಪ್ರಶಸ್ತಿಗಳನ್ನು ಗಣೇಶ ಅಮೀನಗಡ ಹಾಗೂ ಡಾ.ಗೀತಾ ಸೀತಾರಾಂ ಅವರಿಗೆ ಪ್ರದಾನ ಮಾಡಲಾಗುವುದು. ನಂತರ ವಾಣಿ ಕೌಟುಂಬಿಕ ಕಥಾಸ್ಪರ್ಧೆ ಬಹುಮಾನ ಪಡೆದ ರಾಧಿಕಾ ಗುಜ್ಜಾರ್, ಸುಚಿತ್ರಾ ಹೆಗಡೆ ಹಾಗೂ ಲತಾ ಹೆಗಡೆ ಅವರಿಗೆ ಅಲ್ಲದೆ ಮೆಚ್ಚುಗೆ ಬಹುಮಾನ ಪಡೆದ ಜ್ಯೋತಿ ರಾಜೇಶ್, ನೀತಾ ರಾವ್, ಎನ್.ಶಂಕರ ರಾವ್, ನಾಗವೇಣಿ ಶೇಖರ್ ಅವರಿಗೆ ವಿತರಿಸಲಾಗುವುದು. ಬಳಿಕ ಹಿರಿಯ ಲೇಖಕಿ ವಸುಮತಿ ಉಡುಪ ಅವರೊಂದಿಗೆ ಡಾ.ಎಸ್.ಸುನಂದಾ, ತ್ರಿವೇಣಿ ಮಿಟ್ಟಿ, ಉಷಾ ನರಸಿಂಹನ್, ಸಹನಾ ಕಾಂತಬೈಲು, ಎ.ಎಸ್.ವಾಣಿ, ಬಿ.ಕೆ.ಮೀನಾಕ್ಷಿ, ಕೆ.ಎಂ.ಲೋಲಾಕ್ಷಿ, ಸುಚಿತ್ರಾ ಹೆಗಡೆ, ಸುಜಾತಾ ರವೀಶ್, ವಿದ್ಯಾ ಶಿರಹಟ್ಟಿ ಹಾಗೂ ಸವಿತಾ ನಾಗೇಶ್ ಸಂವಾದ ನಡೆಸುವರು. ಸಾಹಿತ್ಯ ಸಖಿ ಪತ್ರಿಕೆಯ ಸಂಪಾದಕಿ ಶೈಲಜಾ ಸುರೇಶ್ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಅಭಿನಂದನೆ



ಭಾನುವಾರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಸ್ವಾಮೀಜಿ ಅವರನ್ನು ಮುಖಂಡ ವಿಕ್ರಾಂತ್ ಪಿ.ದೇವೇಗೌಡ ಅಭಿನಂದಿಸಿ, ಶುಭ ಕೋರಿದರು.

ಪ್ರಧಾನಿ ಮೋದಿ ಪರ ಎಸ್.ಎ.ರಾಮದಾಸ್ ಪ್ರಚಾರ



ಸತತ ಮೂರನೇ ಬಾರಿ ವಾರಣಾಸಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ಪರ ಮಾಜಿ ಸಚಿವ ಎಸ್.ಎ. ರಾಮದಾಸ್ ನೇತೃತ್ವದಲ್ಲಿ ಕೆ.ಆರ್.ಕ್ಷೇತ್ರದ ಕಾರ್ಯಕರ್ತರು ಪ್ರಚಾರ ಕೈಗೊಂಡಿದ್ದಾರೆ. ಚಿತ್ರದಲ್ಲಿ ಪ್ರಸಾದ್ ಬಾಬು, ಗ್ರಿಲ್ ಸಂತೋಷ್, ಸತೀಶ್, ಅನಿರುದ್ಧ್, ಆದರ್ಶ್, ಗೋಪಾಲ, ಅವಿನಾಶ್, ರಮೇಶ್ ಇತರರನ್ನು ಕಾಣಬಹುದು.

ನಿವೇದಿತಾನಗರ ಪಾರ್ಕ್‌ನಲ್ಲಿ ಬಿಪಿ ಬಗ್ಗೆ ಜಾಗೃತಿ



ಮೈಸೂರು, ಮೇ 27–ವಿಶ್ವ ರಕ್ತದೊತ್ತಡ ದಿನಾಚರಣೆ ಅಂಗವಾಗಿ ಗ್ಲೆನ್ ಮಾರ್ಕ್ ಫಾರ್ಮ ಕಂಪೆನಿಯು ಈ ವರ್ಷವೂ ಜನರಲ್ಲಿ ಬಿಪಿ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸುವಂಥ ಬೃಹತ್ ರ‍್ಯಾಲಿಯನ್ನು ಮೈಸೂರಿನ ನಿವೇದಿತಾ ನಗರ ಪಾರ್ಕ್‌ನಲ್ಲಿ ಹಮ್ಮಿಕೊಂಡಿತ್ತು.

ಕಾರ್ಯಕ್ರಮದಲ್ಲಿ ಹೃದಯತಜ್ಞ ಡಾ.ಕೆ. ಸಂತೋಷ್ ಪಾಲ್ಗೊಂಡು ರಕ್ತದೊತ್ತಡ ಕಾಯಿಲೆ ಕುರಿತಾದ ಸಾಕಷ್ಟು ಉಪಯುಕ್ತ ಮಾಹಿತಿ ನೀಡಿದರು. ಸಾರ್ವಜನಿಕರು ವೈದ್ಯರಲ್ಲಿ ಬಿಪಿ ಕಾಯಿಲೆ ಕುರಿತಾದ ಸಾಕಷ್ಟು ಗೊಂದಲಗಳಿಗೆ ಸೂಕ್ತ ಪರಿಹಾರ ಪಡೆದುಕೊಂಡರು. ಗ್ಲೆನ್ ಮಾರ್ಕ್ ಫಾರ್ಮ ಕಂಪೆನಿಯ ಅನಿಲ್ ಬೇಗೂರು ನಿರೂಪಿಸಿದರು. ಸಂಸ್ಥೆಯ ಸಿಬ್ಬಂದಿಗಳಾದ ವಿಕಾಸ್, ಚಂದನ್, ಮೋಹನ್ ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ



ಮೈಸೂರು,ಮೇ 27– ಕೆವಿ ಎಫ್‌ಟಿಎಸ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಮೇ 29ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ರವರೆಗೆ ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ತಿಲಕ್‌ನಗರ, ಮಿಷನ್ ಆಸ್ಪತ್ರೆ, ಗಾಂಧಿ ವೃತ್ತ, ಓಲ್ಡ್ ಬ್ಯಾಂಕ್ ರಸ್ತೆ, ಕೆ.ಟಿ.ಸ್ಟ್ರೀಟ್, ದೊಡ್ಡ ಒಕ್ಕಲಿಗರ ಬೀದಿ, ಇರ್ವಿನ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಒಲಂಪಿಯಾ ಟಾಕೀಸ್, ಪುಲಕೇಶಿ ರಸ್ತೆ, ಕೈಲಾಸಪುರಂ, ಮಂಡಿಮೊಹಲ್ಲಾ, ರಾಜ್ ಕಮಲ್ ಟಾಕೀಸ್ ಸುತ್ತ–ಮುತ್ತ, ಶಿವರಾಂಪೇಟೆ, ಕೆ.ಆರ್.ಆಸ್ಪತ್ರೆ, ಬೋಟಿ ಬಜಾರ್, ಮಾರುಕಟ್ಟೆ, ಧನ್ವಂತರಿ ರಸ್ತೆ, ವೀರನಗೆರೆ, ಶಿವಾಜಿ ರಸ್ತೆ, ಸೇಂಟ್ ಮೇರಿಸ್ ರಸ್ತೆ, ಗಾಂಧಿನಗರ, ಎ.ಜೆ. ಬ್ಲಾಕ್, ಗಣೇಶ್‌ನಗರ, ರಾಜೇಂದ್ರನಗರ, ಕೆಸರೆ 1, 2 ಮತ್ತು 3ನೇ ಹಂತ, ಸುಭಾಷ್ ನಗರ, ನರಸಿಂಹರಾಜ ಮೊಹಲ್ಲಾ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು, ಮೇ 27–ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ 2024–25ನೇ ಸಾಲಿನ ಡಿಪ್ಲೊಮಾ ಪ್ರವೇಶಕ್ಕೆ ಎಸ್‌ಎಸ್‌ಎಲ್‌ಸಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಪ್ರಿಶಿಷನ್ ಮ್ಯಾನುಫ್ಯಾಕ್ಚರಿಂಗ್, ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಕೋರ್ಸ್‌ಗಳಿಗೆ ಅರ್ಜಿ ಅಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕವೇ ಅರ್ಜಿಯನ್ನು ಜೂ.3ರೊಳಗೆ ಸಲ್ಲಿಸಬಹುದು. ಮಾಹಿತಿಗೆ ಸಹಾಯವಾಣಿ ಸಂ: 155267, ವೆಬ್‌ಸೈಟ್: https://gttc.karnataka.gov.in, http://cetonline.karnataka.gov.in ಅನ್ನು ಸಂಪರ್ಕಿಸಬಹುದು.

ಅಪರಿಚಿತ ವ್ಯಕ್ತಿಯ ಶವ ಪತ್ತೆ



ಮೈಸೂರು, ಮೇ 27–ಮೇ 25ರಂದು ಆದಿಶಕ್ತಿ ವೈನ್ ಶಾಪ್‌ನ ಮುಂಭಾಗದ ಸರ್ವಿಸ್ ರಸ್ತೆಯಲ್ಲಿ ಸುಮಾರು 40ರಿಂದ 50 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯು ಸುಮಾರು 40ರಿಂದ 50 ವರ್ಷ ವಯಸ್ಸಿನವರಾಗಿದ್ದು, ಕೋಲು ಮುಖ, ಸಾಧಾರಣ ಶರೀರ, ಬಿಳಿ ಮತ್ತು ಕೆಂಪು ಮೈಬಣ್ಣ ಹೊಂದಿದ್ದು, ಗಡ್ಡಮೀಸೆ ಬಿಟ್ಟಿರುತ್ತಾರೆ. ತಲೆಯಲ್ಲಿ ಸುಮಾರು 5 ಇಂಚು ಉದ್ದದ ಕಪ್ಪು ಮತ್ತು ಬಿಳಿ ಮಿಶ್ರಿತ ಕೂದಲಿದ್ದು, ಸುಮಾರು 5.3 ಅಡಿ ಎತ್ತರವಿರುತ್ತಾರೆ. ಕೊಳಕಾದ ಕೆಂಪು ಮತ್ತು ಕಪ್ಪು ಬಣ್ಣದ ಅರ್ಧ ತೋಳಿನ ಟೀ–ಶರ್ಟ್ ಹಾಗೂ ಮಾಸಲು ಬೂದು ಬಣ್ಣದ ಪ್ಯಾಂಟ್ ಧರಿಸುತ್ತಾರೆ. ಮೃತನ ಬಲಗೈನಲ್ಲಿ ಗಣೇಶನ ತಲೆ ಇರುವ ಹಾಗೂ ಆಂಜನೇಯನ ಚಿತ್ರವಿರುವ ಟ್ಯಾಟು ಇರುತ್ತದೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಹೆಬ್ಬಾಳ್ ಠಾಣೆ ದೂಸಂ–2418318 ಅಥವಾ ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ ದೂಸಂ 2418339 ಠಾಣೆ ಅಥವಾ ಹೆಬ್ಬಾಳ್ ಪೊಲೀಸ್ ಠಾಣೆಯ ಇಮೇಲ್ ಐಡಿ: hebbalmyc@ksp.gov.in ಅನ್ನು ಸಂಪರ್ಕಿಸಬಹುದು ಎಂದು ಹೆಬ್ಬಾಳ್ ಠಾಣೆ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಂಡ ಬಿದ್ದರೂ, ನಿತ್ಯವೂ ಸಣ್ಣಪುಟ್ಟ ಅಪಘಾತಗಳಾಗುತ್ತಿದ್ದರೂ ಇತ್ತ ಗಮನಹರಿಸದ ನಗರಪಾಲಿಕೆ ಅಧಿಕಾರಿಗಳು...!



ಮೈಸೂರು, ಮೇ27(ಬಿಎಲ್‌ಯು)– ಮೈಸೂರಿನ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ರಸ್ತೆಯಲ್ಲಿ ಹೊಂಡ ಬಿದ್ದಿದ್ದು, ಸ್ಥಳದಲ್ಲಿ ಸರಣಿ ಅಪಘಾತಗಳಾಗುತ್ತಿದ್ದರೂ ನಗರಪಾಲಿಕೆ ಅಧಿಕಾರಿಗಳು ಗಮನಹರಿಸದೆ ಬೇಜವಾಬ್ದಾರಿ ತೋರಿದ್ದಾರೆ.

ಕೆ.ಜಿ.ಕೊಪ್ಪಲಿನಿಂದ ಕಾಮಾಕ್ಷಿ ಆಸ್ಪತ್ರೆಗೆ ಹೋಗುವ ರಸ್ತೆಯಲ್ಲಿ ಹೊಂಡ ಬಿದ್ದಿವೆ. ಕಳೆದ ಮೂರು ದಿನದಿಂದ ಹಳ್ಳದಲ್ಲಿ ವಾಹನಗಳ ಚಕ್ರ ಸಿಲುಕಿ ಅಪಘಾತಗಳು ಸಂಭವಿಸಿವೆ. ಈ ಹಿನ್ನೆಲೆಯಲ್ಲಿ ಸ್ಥಳೀಯರು ಹಳ್ಳಕ್ಕೆ ಮಣ್ಣಿನ ಚೀಲ ಇಟ್ಟು ಅಪಘಾತಗಳಾಗದಂತೆ ಮುನ್ನೆಚ್ಚರಿಕೆ ವಹಿಸಿದ್ದಾರೆ. ಈ ಬಗ್ಗೆ ನಗರಪಾಲಿಕೆ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಳ್ಳ ಬಿದ್ದಿರುವ ಸ್ಥಳದಲ್ಲಿ ಒಳಚರಂಡಿ ಮಾರ್ಗ ಹಾದು ಹೋಗಿಲ್ಲ. ಆದರೂ ಯಾವ ಕಾರಣಕ್ಕೆ ಹಳ್ಳ ಬಿದ್ದಿದೆ ಎಂಬುದು ತಿಳಿದಿಲ್ಲ. ಹಳ್ಳಕ್ಕೆ ಮಣ್ಣಿನ ಚೀಲ ಇಡಲಾಗಿದ್ದು, ಅದನ್ನು ತಿಳಿಯದ ಬಹಳಷ್ಟು ಸವಾರರು ಅದರ ಮೇಲೆಯೇ ವಾಹನ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾರೆ.

ವಾಹನಗಳು ಹಾದು ಹೋದ ಸಂದರ್ಭದಲ್ಲಿ ಅದರ ಭಾರಕ್ಕೆ ಭೂಮಿ ಮತ್ತಷ್ಟು ಕುಸಿದು ಅವಘಡ ಸಂಭವಿಸುವ ಸಾಧ್ಯತೆ ಇದೆ. ಇಷ್ಟೆಲ್ಲಾ ಅವಾಂತರವಾದರೂ ನಗರಪಾಲಿಕೆ ಅಧಿಕಾರಿಗಳು ಇತ್ತ ಗಮನ ಹರಿಸದೆ ನಿರ್ಲಕ್ಷ್ಯ ತೋರಿದ್ದಾರೆ.

ಚರಂಡಿ ಕುಸಿದ ಸ್ಥಳ ಪರಿಶೀಲಿಸಿದ ಶಾಸಕ ಕೆ.ಹರೀಶ್‌ಗೌಡ



ಮೈಸೂರಿನ ಹೆಬ್ಬಾಳು ಸಿಐಟಿಬಿ ಛತ್ರದ ಮುಂಭಾಗ ಚರಂಡಿ ಕುಸಿದಿರುವ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು, ಕಾಂಕ್ರೀಟ್ ತಡೆಗೋಡೆ ನಿರ್ಮಾಣಕ್ಕೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಪಾಲಿಕೆ ಉಪಆಯುಕ್ತ ಹಾಗೂ ವಲಯ ಅಭಿವೃದ್ಧಿ ಅಧಿಕಾರಿ ಮನುಗೌಡ, ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್‌ನ ಮುಖಂಡರಾದ ಜಗದೀಶ್, ರಾಮಚಂದ್ರ, ರಮೇಶ್, ಮೂರ್ತಿ ಇನ್ನಿತರರಿದ್ದರು.

ಭ್ರಷ್ಟಾಚಾರ ಆರೋಪ; ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಆತ್ಮಹತ್ಯೆ



ಶಿವಮೊಗ್ಗ: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಯೊಬ್ಬರು ಮನೆಯಲ್ಲೇ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶಿವಮೊಗ್ಗದ ವಿನೋಬನಗರದಲ್ಲಿ ನಡೆದಿದೆ.

ಚಂದ್ರಶೇಖರನ್ (45) ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ. ಇವರು ಬೆಂಗಳೂರಿನ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಆತ್ಮಹತ್ಯೆಗೂ ಮುನ್ನಾ ಡೆತ್‌ನೋಟ್ ಬರೆದಿಟ್ಟಿದ್ದು, ಅದರಲ್ಲಿ ಮೂವರು ಅಧಿಕಾರಿಗಳ ಹೆಸರನ್ನು ಉಲ್ಲೇಖಿಸಿದ್ದು, ಬಹುಕೋಟಿ ಭ್ರಷ್ಟಾಚಾರ ರಹಸ್ಯವನ್ನೂ ಬಹಿರಂಗಪಡಿಸಿದ್ದಾರೆ.

ಅವಮಾನ ಸಹಿಸದೇ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಅವರು ಡೆತ್ ನೋಟ್‌ನಲ್ಲಿ ಹೇಳಿದ್ದಾರೆ. ಈ ಸಂಬಂಧ ವಿನೋಬನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನನ್ನ ಸಾವಿಗೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಜೆ.ಪದ್ಮನಾಭ, ಅಕೌಂಟ್ ವ್ಯವಸ್ಥಾಪಕ ಪರಶುರಾಮ್ ದುರ್ಗಣ್ಣನವರ್, ಯೂನಿಯನ್ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕರಾದ ಶುಚಿಸ್ಮಿತ ಕಾರಣ. ವಾಲ್ಮೀಕಿ ನಿಗಮದ ಅನುದಾನದಲ್ಲಿ 80ರಿಂದ 85 ಕೋಟಿ ರೂ.ಗಳನ್ನು ನಿಯಮಬಾಹಿರವಾಗಿ ಲೂಟಿ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಅವ್ಯವಹಾರದಲ್ಲಿ ನನ್ನ ಪಾತ್ರವಿಲ್ಲ. ಆದರೆ ಕೆಲಸದ ಒತ್ತಡದಲ್ಲಿ ಸದರಿ ಖಾತೆಯ ಚೆಕ್ ಪುಸ್ತಕ ಪಡೆಯದಿರುವುದು ಮತ್ತು ಕ್ಯಾಶ್ ಪುಸ್ತಕ ಮುಕ್ತಾಯ ಗೊಳಿಸದಿರುವುದು ನನ್ನ ತಪ್ಪಾಗಿದೆ. ಈ ಹಗರಣದಲ್ಲಿ ನಾನು ಕಾರಣನಲ್ಲ. ಆದ್ದರಿಂದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕೂಡಲೇ ಪರಿಶಿಷ್ಟ ಪಂಗಡದ ಸಚಿವರನ್ನು ವಜಾಗೊಳಿಸಬೇಕೆಂದು ಆಗ್ರಹಿಸಿದ್ದಾರೆ.

ಅಧಿಕಾರಿಯದ್ದು ಆತ್ಮಹತ್ಯೆ ಅಲ್ಲ, ಕೊಲೆ



ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಆತ್ಮಹತ್ಯೆ ಪ್ರಕರಣ ಹಿನ್ನೆಲೆ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ನಾಯಕರು ಕಿಡಿ ಕಾರಿದ್ದಾರೆ. ಅಧಿಕಾರಿಯದ್ದು ಆತ್ಮಹತ್ಯೆಯಲ್ಲ, ಕೊಲೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ನಾಗೇಂದ್ರರನ್ನು ಸಂಪುಟದಿಂದ ವಜಾ ಮಾಡಬೇಕೆಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಸರ್ಕಾರದ ವಿರುದ್ಧ ಕಿಡಿ ಕಾರಿರುವ ಅಶೋಕ್, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ 187 ಕೋಟಿ ರೂ. ಮೌಲ್ಯದ ಬೃಹತ್ ಭ್ರಷ್ಟಾಚಾರವನ್ನ ಅಧಿಕಾರಿಯ ತಲೆಗೆ ಕಟ್ಟಲು ಹೋಗಿ ಕಿರುಕುಳ ನೀಡಿ ಆತ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿದೆ ಈ ಕೊಲೆಗಡುಕ ಕಾಂಗ್ರೆಸ್ ಸರ್ಕಾರ ಸಿಎಂ ಅವರೇ ಇದು ಆತ್ಮಹತ್ಯೆ ಅಲ್ಲ, ಕೊಲೆ. ಈ ಕೊಲೆಗೆ ಹೊಣೆ ಯಾರು. ನಿಮ್ಮ ಸರ್ಕಾರದ ಕಮಿಷನ್ ದಾಹಕ್ಕೆ ಇನ್ನೆಷ್ಟು ಜೀವಗಳು ಬಲಿಯಾಗಬೇಕು ಎಂದು ಪ್ರಶ್ನಿಸಿದ್ದಾರೆ.

ಇನ್ನೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಬೇಕಾದ 11,000 ಕೋಟಿ ರೂ. ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನ ಗ್ಯಾರಂಟಿ ಹೆಸರಿನಲ್ಲಿ ಲಪಟಾಯಿಸಿ ಈಗಾಗಲೇ ದಲಿತರ ಹೊಟ್ಟೆಗೆ ಹೊಡೆಯುವ ಪಾಪದ ಕೆಲಸ ಮಾಡಿದ್ದೀರಿ. ಈಗ ಅಭಿವೃದ್ಧಿ ನಿಗಮದಲ್ಲಿ 85 ಕೋಟಿ ರೂ. ಭ್ರಷ್ಟಾಚಾರ ನಡೆಸಿ ಒಬ್ಬ ಅಧಿಕಾರಿಯ ಸಾವಿಗೆ ಕಾರಣರಾಗಿದ್ದೀರಿ. ಈ ಕೂಡಲೇ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವರನ್ನ ಸಂಪುಟದಿಂದ ವಜಾ ಮಾಡಬೇಕು. ಈ ಪ್ರಕರಣದ ತನಿಖೆಗೆ ಆದೇಶ ಮಾಡಿ. ತಪ್ಪಿತ ಸ್ಥರಿಗೆ ಶಿಕ್ಷೆ ನೀಡಿ ಆತ್ಮಹತ್ಯೆಗೆ ಶರಣಾದ ಅಧಿಕಾರಿಯ ಕುಟುಂಬಕ್ಕೆ ನ್ಯಾಯ ಒದಗಿಸುವ ಕೆಲಸ ಮಾಡಿ ಎಂದು ಒತ್ತಾಯಿಸಿದ್ದಾರೆ.

ಎಸ್‌ಐಟಿ ರಚಿಸಿ ಕೈತೊಳೆದುಕೊಳ್ಳಬೇಡಿ: ಬಿಜೆಪಿ ಶಾಸಕ ಸುನೀಲ್ ಕುಮಾರ್ ಅವರೂ ಸಹ ಅಧಿಕಾರಿ ಆತ್ಮಹತ್ಯೆ ಬಗ್ಗೆ ಎಕ್ಸ್ ನಲ್ಲಿ ಶಂಕೆ ವ್ಯಕ್ತಪಡಿಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಯೊಬ್ಬರು ಶಿವಮೊಗ್ಗದಲ್ಲಿ ಶಂಕಾಸ್ಪದ ರೀತಿಯಲ್ಲಿ ಸಾವಿಗೆ ಶರಣಾಗಿದ್ದಾರೆ. ಈ ಸಾವಿನ ಸುತ್ತ ಭ್ರಷ್ಟಾಚಾರದ ಹುತ್ತ ಕಟ್ಟಿದ ಅನುಮಾನ ಬರುತ್ತಿದೆ. ಇಲಾಖೆಯಲ್ಲಿನ ಕಾಣದ ಕೈಗಳ ಕರಾಮತ್ತು ಯಾವುದೆಂಬುದು ಮಹದೇವನೇ ಬಲ್ಲ. ಈ ಬಗ್ಗೆ ಸಮಗ್ರ ತನಿಖೆ ನಡೆಯಲಿ. ಸಾಕ್ಷ್ಯ ನಾಶ ಮಾಡಿ ಎಸ್‌ಐಟಿ ತನಿಖೆ ಎಂಬ ರಾಗವನ್ನು ಸರ್ಕಾರ ಹಾಡದಿರಲಿ ಎಂದು ಸುನೀಲ್ ಕುಮಾರ್ ಎಂದು ಸಲಹೆ ನೀಡಿದ್ದಾರೆ.

ಸೇಲಂನಲ್ಲಿ ಫ್ರೈಡ್ ರೈಸ್ ತಿಂದ ಏಳು ವರ್ಷದ ಬಾಲಕಿ ಹಠಾತ್ ಸಾವು

ಸೇಲಂ: ಸೇಲಂನ ಫೇರ್‌ಲ್ಯಾಂಡ್ಸ್‌ನಲ್ಲಿ ರಾತ್ರಿ ಊಟ ಮಾಡಿದ ನಂತರ ಏಳು ವರ್ಷದ ಬಾಲಕಿಯೊಬ್ಬಳಿಗೆ ಮೂಗಿನಿಂದ ರಕ್ತಸ್ರಾವವಾಗಿದ್ದು, ಹಠಾತ್ ಸಾವಿಗೀಡಾಗಿರುವ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತೆಯನ್ನು ಎಸ್ ಲಕ್ಷ್ಮಿ ಕುಮಾರಿ ಎಂದು ಗುರುತಿಸಲಾಗಿದ್ದು, ಆಕೆ ಫ್ರೈಡ್ ರೈಸ್ ಅನ್ನು ಇಷ್ಟಪಡುತ್ತಿದ್ದಳು. ಆಕೆ ಅದನ್ನು ನಿಯಮಿತವಾಗಿ ತಿನ್ನುತ್ತಿದ್ದಳು. ಶುಕ್ರವಾರ ರಾತ್ರಿ ಫ್ರೈಡ್ ರೈಸ್, ಚಪಾತಿ ಮತ್ತು ಬದನೆಕಾಯಿ ಕರಿಯನ್ನು ತಿಂದ ಬಳಿಕ ರಾತ್ರಿ 10 ಗಂಟೆಯ ಸುಮಾರಿಗೆ ಮೂಗಿನಲ್ಲಿ ರಕ್ತಸ್ರಾವ ಆರಂಭವಾಯಿತು ಎಂದು ಆಕೆಯ ತಾಯಿ ಎಸ್.ಪೂಜಾ ಕುಮಾರಿ ತಿಳಿಸಿದ್ದಾರೆ. ಪೋಷಕರು ಆಕೆಯನ್ನು ಕೂಡಲೇ ಸೇಲಂ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರೂ, ಆದರೆ ಆ ವೇಳೆಗಾಗಲೇ ಆಕೆ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಈ ಸಂಬಂಧ ಫೇರ್‌ಲ್ಯಾಂಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಪ್ರಾಥಮಿಕ ಶವಪರೀಕ್ಷೆಯಲ್ಲಿ ಆಕೆಯ ದೇಹದಲ್ಲಿ ದ್ರವಗಳ ಉಪಸ್ಥಿತಿಯನ್ನು ಸೂಚಿಸಿದ್ದು, ಸಾವಿಗೆ ನಿಖರವಾದ ಕಾರಣವನ್ನು ನಿರ್ಧರಿಸಲು ವಿವರವಾದ ವಿಶ್ಲೇಷಣೆಗಾಗಿ ಈ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಫ್ರೈಡ್ ರೈಸ್ ಅನ್ನು ನಿಯಮಿತವಾಗಿ ಸೇವಿಸುವುದರಿಂದ ಆಕೆಯ ಜೀರ್ಣಾಂಗ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿರಬಹುದು, ಇದು ಮಾರಣಾಂತಿಕ ಮೂಗಿನ ರಕ್ತಸ್ರಾವಕ್ಕೆ ಕಾರಣವಾಗಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

ನಾವು ಸಂಪೂರ್ಣ ತನಿಖೆ ನಡೆಸುತ್ತಿದ್ದೇವೆ ಮತ್ತು ಮಾದರಿಗಳ ಫಲಿತಾಂಶಗಳಿಗಾಗಿ ಕಾಯುತ್ತಿದ್ದೇವೆ ಎಂದು ಫೇರ್ ಲ್ಯಾಂಡ್ಸ್ ಪೊಲೀಸ್ ಇನ್‌ಸ್ಪೆಕ್ಟರ್ ತಿಳಿಸಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಅವರ ಪರ ವಿವಿಧೆಡೆ ಮತಯಾಚನೆ





ವಿಧಾನಪರಿಷತ್ ಚುನಾವಣೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಕೆ.ವಿವೇಕಾನಂದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಮತಯಾಚಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ಮೈಸೂರು ನಗರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಆರ್.ಮುದ್ದುರಾಜ್, ಎಸ್‌ಬಿಎಂ ಮಂಜು ಅಭಿಮಾನಿಗಳ ಬಳಗ ಅಧ್ಯಕ್ಷ ಮಹದೇವ್, ಚಾಮರಾಜ ಕ್ಷೇತ್ರದ ಮುಖಂಡ ಹೆಬ್ಬಾಳ್ ಪುಟ್ಟರಾಜು, ಕಾರ್ಮಿಕ ಅಧ್ಯಕ್ಷ ಸಿದ್ದೇಶ್, ಚಂದ್ರಹಾಸ್, ರಾಮಕೃಷ್ಣ, ಸೋಲಾರ್ ಸತೀಶ್, ಜೆಡಿಎಸ್ ವಾರ್ಡ್ ಅಧ್ಯಕ್ಷ ಹನುಮಂತು ಇನ್ನಿತರರಿದ್ದರು. ಬಲಚಿತ್ರದಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಕುವೆಂಪುನಗರದಲ್ಲಿರುವ ಕಾಳಿದಾಸ ವಿದ್ಯಾಸಂಸ್ಥೆಯಲ್ಲಿ ವಿವೇಕಾನಂದರ ಪರ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಬಿಜೆಪಿ ಪ್ರಭಾರಿ ಮೈ.ವಿ.ರವಿಶಂಕರ್, ಮುಖಂಡರಾದ ವಾಣೀಶ್, ಆರ್‌ಟಿಒ ಶಂಕರ್, ಜಯರಾಮ್, ಪ್ರದೀಪ್‌ಕುಮಾರ್, ವಸಂತ ಕುಮಾರ್, ಜಗದೀಶ್, ದೇವರಾಜ್ ಇನ್ನಿತರರು ಉಪಸ್ಥಿತರಿದ್ದರು.

ಪಪುವಾ ನ್ಯೂ ಗಿನಿಯಾದಲ್ಲಿ ಭೂಕುಸಿತ: 2 ಸಾವಿರಕ್ಕೂ ಹೆಚ್ಚು ಮಂದಿ ಜೀವಂತ ಸಮಾಧಿ!



ಪೋರ್ಟ್ ಮೋರೆಸ್ಬಿ: ಪಪುವಾ ನ್ಯೂಗಿನಿಯಲ್ಲಿ ಭಾರಿ ಪ್ರಮಾಣದ ಭೂಕುಸಿತ ಸಂಭವಿಸಿ, ಎರಡು ಸಾವಿರಕ್ಕೂ ಅಧಿಕ ಮಂದಿ ಭೂ ಸಮಾಧಿಯಾಗಿದ್ದಾರೆ ಎಂದು ಪಪುವಾ ನ್ಯೂಗಿನಿಯಾ ರಾಷ್ಟ್ರೀಯ ವಿಪತ್ತು ಕೇಂದ್ರ ವಿಶ್ವಸಂಸ್ಥೆಗೆ ಮಾಹಿತಿ ನೀಡಿದೆ.

ದ್ವೀಪರಾಷ್ಟ್ರದ ಉತ್ತರದಲ್ಲಿರುವ ಎಂಗಾ ಪ್ರಾಂತದ ಯಂಬಾಲಿ ಹಳ್ಳಿಯ ಬೆಟ್ಟ ಪ್ರದೇಶಗಳಲ್ಲಿ ಶುಕ್ರವಾರ ಸ್ಥಳೀಯ ಕಾಲಮಾನ ಬೆಳಗ್ಗೆ 3 ಗಂಟೆಗೆ ಭೂಕುಸಿತ ಸಂಭವಿಸಿದ್ದು ಸುತ್ತಮುತ್ತಲಿನ ಹಲವು ಹಳ್ಳಿಗಳಲ್ಲೂ ಅಪಾರ ಸಾವು–ನೋವು, ನಾಶ ನಷ್ಟ ಸಂಭವಿಸಿದೆ.

ಶೋಧ ಮತ್ತು ರಕ್ಷಣಾ ತಂಡದ ಕಾರ್ಯಾಚರಣೆಯಲ್ಲಿ ಮಣ್ಣಿನಡಿ ಸಮಾಧಿಯಾಗಿದ್ದ ಹಲವು ದೇಹಗಳನ್ನು ಮೇಲೆತ್ತಲಾಗಿದೆ. ಸುಮಾರು 150 ಮನೆಗಳು ಮಣ್ಣಿನಡಿ ಹೂತುಹೋಗಿರುವುದಾಗಿ ಅಂದಾಜಿಸಲಾಗಿದೆ. ಹಲವೆಡೆ ಇನ್ನೂ ಕುಸಿತ ಮುಂದುವರಿದಿರುವುದರಿಂದ ರಕ್ಷಣಾ ಕಾರ್ಯಾಚರಣೆಗೆ ತೊಡಕಾಗಿದ್ದು, ಸಾವು–ನೋವಿನ ಪ್ರಮಾಣ ಹೆಚ್ಚುವ ಸಾಧ್ಯತೆಯಿದೆ ಎಂದು ವಿಶ್ವಸಂಸ್ಥೆ ವಲಸೆ ಏಜೆನ್ಸಿ ಅಧಿಕಾರಿ ಸೆರ್ಹಾನ್ ಅಕ್ಟೋಪ್ರಾಕ್ ಮಾಹಿತಿ ನೀಡಿದ್ದಾರೆ.

ಇದೊಂದು ಅಸಾಮಾನ್ಯ ಪ್ರಾಕೃತಿಕ ದುರಂತವಾಗಿದ್ದು ಒಂದು ಸಾವಿರಕ್ಕೂ ಅಧಿಕ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಹಲವೆಡೆ ಕೃಷಿ ತೋಟಗಳು ರಾತ್ರಿ ಬೆಳಗಾಗುವುದರಲ್ಲಿ ಭೂಮಿಯ ಒಡಲನ್ನು ಸೇರಿದ್ದು ಅಪಾರ ನಷ್ಟ ಸಂಭವಿಸಿದೆ. ನೀರು ಪೂರೈಕೆ ವ್ಯವಸ್ಥೆಗೆ ಹಾನಿಯಾಗಿದ್ದು, ಹಲವೆಡೆ ಕುಡಿಯುವ ನೀರಿನ ಕೊರತೆ ಎದುರಾಗಿದೆ.

ಮೇಲುಕೋಟೆಯಲ್ಲಿ ತುಳಸಿ, ಹೂತೋಟ ನಿರ್ಮಾಣಕ್ಕೆ ತೆಲಂಗಾಣ ರಾಜ್ಯಪಾಲ ಪೊನ್ ರಾಧಾಕೃಷ್ಣನ್ ಚಾಲನೆ

ಮೇಲುಕೋಟೆ, ಮೇ 27– ಅದಿದೈವ ಚೆಲುವನಾರಾಯಣಸ್ವಾಮಿಗೆ ಅರ್ಪಿಸಲು ನಿರ್ಮಿಸುತ್ತಿರುವ ತುಳಸಿ–ಹೂವಿನ ತೋಟಗಳು ಮೇಲುಕೋಟೆಯಲ್ಲಿ ಹೆಚ್ಚಾಗಲಿ ಎಂದು ತೆಲಂಗಾಣ, ಪಾಂಡಿಚೇರಿ ಮತ್ತು ಜಾರ್ಖಂಡ್ ರಾಜ್ಯಗಳ ರಾಜ್ಯಪಾಲರಾದ ಪೊನ್ ರಾಧಾಕೃಷ್ಣನ್ ಆಶಿಸಿದರು. ಅವರು ಕಲ್ಯಾಣಿಯ ಸಾಲುಮಂಟಪದ ಹಿಂಭಾಗ ತುಳಸಿ ಗಿಡನೆಟ್ಟು ತುಳಸಿ ತೋಟದ ನಿರ್ಮಾಣಕ್ಕೆ ಶುಭ ಹಾರೈಸಿದರು.




ಮೇಲುಕೋಟೆ ಕಲ್ಯಾಣಿಯ ಸಾಲುಮಂಟಪದ ಹಿಂಭಾಗ ತುಳಸಿ ಗಿಡ ನೆಟ್ಟು ತುಳಸಿ, ಹೂ ತೋಟ ನಿರ್ಮಿಸಲು ತೆಲಂಗಾಣ ರಾಜ್ಯಪಾಲ ಸಿ.ಪಿ ರಾಧಾಕೃಷ್ಣನ್ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಕಚ್ಚೆ ಪಂಚೆ ಧರಿಸಿ ರಾಜ್ಯಪಾಲರು ದೇವಸ್ಥಾನಕ್ಕೆ ಆಗಮಿಸುತ್ತಿರುವುದನ್ನು ಕಾಣಬಹುದು.

ರಾಮಾನುಜಾಚಾರ್ಯರ ಕರ್ಮಭೂಮಿಯಾದ ಮೇಲುಕೋಟೆಯಲ್ಲಿ ಅದಿದೈವ ಚೆಲುವನಾರಾಯಣಸ್ವಾಮಿ ಮತ್ತು ಯೋಗ ನರಸಿಂಹಸ್ವಾಮಿ ನೆಲೆಸಿದ್ದಾರೆ. ಸ್ವಾಮಿಗೆ ಸಮರ್ಪಿಸಲು ಕಲ್ಯಾಣಿಯ ಬಳಿ ತುಳಸಿ ಮತ್ತು ಹೂವಿನ ತೋಟ ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಇಂತಹ ಉತ್ತಮ ಕಾರ್ಯಗಳು ನಿರಂತರವಾಗಿ ನಡೆಯಲಿ ಎಂದರು.

ದೇವಾಲಯಗಳಿಗೆ ತುಳಸಿ ಮತ್ತು ಹೂವುಗಳನ್ನು ನೀಡಲು ಎಲ್ಲಾ ಕಡೆ ಪ್ರತ್ಯೇಕವಾದ ತೋಟಗಳಿವೆ. ಅದರಂತೆ ಮೇಲುಕೋಟೆಯಲ್ಲೂ ಹಲವು ತೋಟಗಳಿವೆ ಎಂಬ ಮಾಹಿತಿ ಇದೀಗ ತಿಳಿಯಿತು. ಅವುಗಳಿಗೆ ಜೀವ ತುಂಬುವ ಕಾರ್ಯ ಆಗಬೇಕು. ಇದು ಪರಿಸರ ಸಂರಕ್ಷಣೆಯ ಕೆಲಸವೂ ಆಗುತ್ತದೆ ಮೇಲುಕೋಟೆಯ ಕಲ್ಯಾಣಿ ಬಳಿಯ ತುಳಸಿ ತೋಟ ಉತ್ತಮವಾಗಿ ನಿರ್ವಹಣೆಯಾಗಿ ಚೆಲುವನಾರಾಯಣನಿಗೆ ತುಳಸಿ ಸಮರ್ಪಿಸುವ ಪ್ರಮುಖ ತೋಟವಾಗಲಿ ಈ ನಿಟ್ಟಿನಲ್ಲಿ ದೇವಾಲಯದ ಆಡಳಿತ ಕಾಳಜಿ ವಹಿಸಲಿ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ನಾಗರಾಜ್ ಮಾರ್ಗದರ್ಶನದಲ್ಲಿ ಪಾಂಡವಪುರ ವಿಜಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಘಟಕ ಶಿಭಿರಾಧಿಕಾರಿ ಎನ್.ಕೆ ವೆಂಕಟೇಗೌಡ ಸಲಹೆ ಮೇರೆಗೆ ಕಲ್ಯಾಣಿಯ ಸಾಲು ಮಂಟಪದ ಹಿಂಭಾಗ ಬೆಳೆದಿದ್ದ ಬೃಹತ್ ಗಿಡಗಂಟೆಗಳನ್ನು ಕಿತ್ತು ತುಳಸಿ ತೋಟ ಮಾಡಲು ಸಿದ್ಧಪಡಿಸಿರುವುದನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ ರಾಜ್ಯಪಾಲರು ಈ ಬೆಳವಣಿಗೆ ದೇವಾಲಯಕ್ಕೆ ಮತ್ತಷ್ಟು ತುಳಸಿ, ಹೂ ತೋಟ ಮಾಡಲು ಪ್ರೇರಣೆಯಾಗಲಿ ಎಂದು ಹಾರೈಸಿದರು

ಈ ವೇಳೆ ಪಾಂಡವಪುರ ತಹಶೀಲ್ದಾರ್ ಶ್ರೇಯಸ್, ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಮಹೇಶ್, ವಿದ್ವಾನ್ ಶ್ರೀರಂಗಂರಾಮಪ್ರಿಯ, ಸಂತಾನರಾಮನ್, ನಾರಾಯಣಭಟ್ಟರ್ ಎನ್‌ಎಸ್‌ಎಸ್ ಶಿಭಿರಾಧಿಕಾರಿ ಡಾ.ಎನ್.ಕೆ.ವೆಂಕಟೇಗೌಡ, ರಾಜೇಶ್, ಸುರೇಶ್, ಜಯಕುಮಾರ್ ಮಹದೇವಯ್ಯ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಮದ್ದೂರಿನಲ್ಲಿ ಕಾಡಾನೆ ಹಿಂಡು ಪ್ರತ್ಯಕ್ಷ



ಮದ್ದೂರು, ಮೇ 27– ಕಾಡಿನಿಂದ ನಾಡಿನತ್ತ ಮುಖ ಮಾಡಿರುವ ಆನೆಗಳ ಹಿಂಡು ಪಟ್ಟಣದಲ್ಲಿ ಕಾಣಿಸಿಕೊಂಡಿದೆ. ಹೊಳೆ ಆಂಜನೇಯ ದೇವಾಲಯದ ಬಳಿಯ ಶಿಂಷಾ ನದಿಯಲ್ಲಿ ಕಾಡಾನೆಗಳ ಹಿಂಡು ಸೋಮವಾರ ಬೆಳ್ಳಂ ಬೆಳಗ್ಗೆ ಪ್ರತ್ಯಕ್ಷವಾಗಿವೆ.

ಆರು ಆನೆಗಳು ಗುಂಪಾಗಿ ನೀರಿನಲ್ಲಿ ಆಟವಾಡುತ್ತ ಸುತ್ತಮುತ್ತಲ ಪ್ರದೇಶದಲ್ಲಿ ತಿರುಗಾಡುತ್ತಿವೆ. ಆನೆಗಳು ಕದಲದಂತೆ ಮುನ್ನೆಚ್ಚರಿಕೆ ವಹಿಸಿರುವ ಅರಣ್ಯ ಇಲಾಖೆ ಸಿಬ್ಬಂದಿ ಸಾರ್ವಜನಿಕರು ಮತ್ತು ರೈತರಿಗೆ ಎಚ್ಚರಿಕೆ ವಹಿಸುವಂತೆ ಸೂಚನೆ ನೀಡಿದ್ದು, ಆನೆಗಳ ಹಿಂಡಿನತ್ತ ತೆರಳಬಾರದು ಹಾಗೂ ಅವುಗಳಿಗೆ ಕಿರಿಕಿರಿ ಮಾಡಬಾರದೆಂದು ಸೂಚಿಸಿದ್ದಾರೆ.

ಅರಣ್ಯ ಸಿಬ್ಬಂದಿ ಸ್ಥಳದಲ್ಲಿ ಹಾಜರಿದ್ದು ಆನೆಗಳನ್ನು ಕಾಡಿನತ್ತ ಓಡಿಸಲು ಸಿದ್ಧತೆ ಕೈಗೊಂಡಿದ್ದು, ಕಾಡಾನೆ ಹಿಂಡು ಕಾವೇರಿ ವನ್ಯಧಾಮದಿಂದ ಇತ್ತ ಬಂದಿವೆ ಎಂದು ಹೇಳಲಾಗಿದ್ದು ರಾತ್ರಿಯ ಬಳಿಕ ಆನೆಗಳನ್ನು ಕಾಡಿಗಟ್ಟಲು ಅರಣ್ಯ ಇಲಾಖೆ ಮುಂದಾಗಿದೆ.

ಕಾಡಾನೆಗಳ ಹಿಂಡು ಶಿಂಷಾ ನದಿಯಲ್ಲಿ ಕಾಣಿಸಿಕೊಂಡಿರುವುದರಿಂದ ಸಾರ್ವಜನಿಕರು ಆನೆಗಳನ್ನು ನೋಡಲು ನದಿ ದಂಡೆಯಲ್ಲಿ ನೆರೆದಿದ್ದು ಮೊಬೈಲ್ ಚಿತ್ರೀಕರಣ ಮಾಡಿಕೊಳ್ಳುತ್ತಿರುವ ದೃಶ್ಯ ಕಂಡುಬಂದಿತು.

ವಿದ್ಯಾರ್ಥಿಗಳ ಬದುಕಿನಲ್ಲಿ ಶಿಸ್ತು ಮೂಡಲು ಎನ್‌ಎಸ್‌ಎಸ್ ಶಿಬಿರ ಸಹಕಾರಿ

ರೈತ ಮುಖಂಡರಾದ ಸುನೀತ ಪುಟ್ಟಣ್ಣಯ್ಯ ಅಭಿಮತ



ಪಾಂಡವಪುರ ತಾಲೂಕಿನ ಕದಲಗೆರೆ ಗ್ರಾಮದಲ್ಲಿ ಮೇಲುಕೋಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ನಡೆದ ಎನ್‌ಎಸ್‌ಎಸ್ ಶಿಬಿರದ ಸಮಾರೋಪ ಸಮಾರಂಭವನ್ನು ರೈತ ಮುಖಂಡರಾದ ಸುನೀತ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಪಾಂಡವಪುರ: ರಾಷ್ಟ್ರೀಯ ವಾರ್ಷಿಕ ಮಹಾ ಶಿಬಿರಗಳು ವಿದ್ಯಾರ್ಥಿಗಳ ಬದುಕಿನಲ್ಲಿ ಶಿಸ್ತು ರೂಪಿಸಿಕೊಳ್ಳಲು ಸಹಕಾರಿಯಾಗಲಿವೆ ಎಂದು ರೈತ ಮುಖಂಡರಾದ ಸುನೀತ ಪುಟ್ಟಣ್ಣಯ್ಯ ಹೇಳಿದರು.

ತಾಲೂಕಿನ ಕದಲಗೆರೆ ಗ್ರಾಮದಲ್ಲಿ ಮೇಲುಕೋಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ನಡೆದ ಎನ್‌ಎಸ್‌ಎಸ್ ಶಿಬಿರದ ಸಮಾರೋಪದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳು ಸಹ ಅತ್ಯವಶ್ಯಕವಾಗಿಬೇಕಾಗಿದೆ. ಕಾಲೇಜುಗಳಲ್ಲಿ ನಡೆಯುವ ಎನ್‌ಎಸ್‌ಎಸ್ ಹಾಗೂ ಎನ್‌ಸಿಸಿ ಶಿಬಿರಗಳು ಮಕ್ಕಳ ಬೆಳವಣಿಗೆಯಲ್ಲಿ ಸಾಕಷ್ಟು ಮಹತ್ತರವಾದ ಪಾತ್ರ ವಹಿಸಲಿವೆ. ಶಿಬಿರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಯುವುದರ ಜತೆಗೆ ಶಿಸ್ತು, ಸಂಯಮ, ಸ್ವಚ್ಛತೆ ಹಾಗೂ ಗ್ರಾಮೀಣ ಪ್ರದೇಶದ ರೈತಾಪಿ ಜನರ ಬದುಕು ನೇರವಾಗಿ ಅರ್ಥವಾಗುತ್ತವೆ. ಹಾಗಾಗಿ ಪ್ರತಿಯೊಬ್ಬ ಮಕ್ಕಳು ಇಂತಹ ಶಿಬಿರದಲ್ಲಿ ಭಾಗವಹಿಸಿ, ಇಲ್ಲಿ ಸಿಗುವ ಅನುಭವಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಕದಲಗೆರೆ ಗ್ರಾಮದಲ್ಲಿ ಕಲ್ಯಾಣಿ, ಪುರಾತ ಅರಳಿಕಟ್ಟೆ, ದೇವಸ್ಥಾಗಳ ಸ್ವಚ್ಛತೆ ಮಾಡುವುದು, ದೇವಸ್ಥಾನಕ್ಕೆ ಹೋಗುವ ರಸ್ತೆಗಳ ನಿರ್ಮಾಣ, ರಸ್ತೆ ಬದಿಗಳಲ್ಲಿ ಗಿಡ ನೆಡುವುದು ಸೇರಿದಂತೆ ಗ್ರಾಮೀಣ ಪ್ರದೇಶದ ಜನರಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಿದ್ದಾರೆ. ಗ್ರಾಮಸ್ಥರು ಸಹ ಶಿಬಿರಾರ್ಥಿಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುವ ಮೂಲಕ ಶಿಬಿರದ ಯಶಸ್ಸಿಗೆ ಸಹಕಾರ ನೀಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಶಿಬಿರಾಧಿಕಾರಿ ಎಂ.ಎಸ್.ಕೃಷ್ಣ ಮಾತನಾಡಿ, ಕದಲಗೆರೆ ಗ್ರಾಮದಲ್ಲಿ ಮೇಲುಕೋಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ 7 ದಿನಗಳ ಕಾಲ ಎನ್‌ಎಸ್‌ಎಸ್ ವಾರ್ಷಿಕ ಶಿಬಿರ ಯಶಸ್ವಿಯಾಗಿ ನಡೆಸಲು ಗ್ರಾಮಸ್ಥರು, ಮುಖಂಡರು ಉತ್ತಮವಾದ ರೀತಿಯ ಸಹಕಾರ ನೀಡಿದರು ಎಂದರು.

ಗ್ರಾಮಸ್ಥರು ಎನ್‌ಎಸ್‌ಎಸ್ ವಿದ್ಯಾರ್ಥಿಗಳ ಶ್ರಮದಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ನಂಜುಂಡಯ್ಯ, ಕಾರ್ಯಕ್ರಮ ಅಧಿಕಾರಿ ಎಂ.ಎಸ್.ಕೃಷ್ಣ, ಉಪನ್ಯಾಸಕರಾದ ಸಿ.ಪರಮೇಶ್ವರ್, ಮಹೇಶ್ ಕುಮಾರ್, ಕಾವ್ಯ, ಪುನೀತ್‌ಕುಮಾರ್, ವಿಜಯ್ ಕುಮಾರ್ ಸೇರಿದಂತೆ ಹಲವರು ಹಾಜರಿದ್ದರು.

ಬಿರುಗಾಳಿಗೆ ಕೊಟ್ಟಿಗೆ ಛಾವಣಿಗೆ ಹಾನಿ...



ಕಿಕ್ಕೇರಿ ಹೋಬಳಿಯ ಕಳ್ಳನಕೆರೆ ಗ್ರಾಮದಲ್ಲಿ ಲಿಂಗರಾಜೇಗೌಡರ ಕೊಟ್ಟಿಗೆ ಮೇಲ್ಛಾವಣಿ ಬಿರುಗಾಳಿ ಮಳೆಗೆ ಹಾರಿ ಹೋಗಿರುವುದು.

ಬರ ಪರಿಹಾರದ ಹಣವನ್ನು ರೈತರ ಸಾಲಕ್ಕೆ ಹೊಂದಾಣಿಕೆ ಮಾಡುವಂತಿಲ್ಲ: ಡಾ.ಕುಮಾರ್

ಮಂಡ್ಯ, ಮೇ 27– ರೈತರಿಗೆ ಸರ್ಕಾರ ಬಿಡುಗಡೆ ಮಾಡುವ ಬರ ಪರಿಹಾರದ ಹಣವನ್ನು ಬ್ಯಾಂಕ್ ಅಧಿಕಾರಿಗಳು ರೈತರ ಯಾವುದೇ ಸಾಲಕ್ಕೆ ಹೊಂದಾಣಿಕೆ ಮಾಡಬಾರದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ರೈತರು ತೀವ್ರ ಬರದಿಂದಾಗಿ ಆರ್ಥಿಕವಾಗಿ ಸಂಕಷ್ಟದಲ್ಲಿದ್ದು, ಬ್ಯಾಂಕುಗಳು ರೈತರ ಬರ ಪರಿಹಾರ ಹಣವನ್ನು ಸಾಲಕ್ಕೆ ಹೊಂದಾಣಿಕೆ ಮಾಡದಂತೆ ಸೂಕ್ತ ನಿರ್ದೇಶನ ನೀಡಲಾಗಿದೆ. ಒಂದು ವೇಳೆ ಸಾಲಕ್ಕೆ ಹೊಂದಣಿಕೆ ಮಾಡಿಕೊಂಡಿದ್ದರೆ ಅದನ್ನು ರೈತರ ಖಾತೆಗೆ ಹಿಂದಿರುಗಿಸಿ. ಈ ಬಗ್ಗೆ ದೂರು ಬರದಂತೆ ನೋಡಿಕೊಳ್ಳಿ ಎಂದರು.

ಕಳೆದ ಸಾಲಿನಲ್ಲಿ ಪ್ರಾಣಿ ದಾಳಿಯಿಂದ ಉಂಟಾದ ಬೆಳೆ ನಷ್ಟ ಕುರಿತಂತೆ 568 ಪ್ರಕರಣಗಳು ವರದಿಯಾಗಿದೆ. ಇವುಗಳಿಗೆ ಪಾವತಿಯಾಗಿರುವ ಪರಿಹಾರ ಕುರಿತಂತೆ ವರದಿ ನೀಡುವಂತೆ ತಿಳಿಸಿದರು.

ಮಳೆ, ಗಾಳಿಯಿಂದ ಮರದ ಕೊಂಬೆಗಳು ವಿದ್ಯುತ್ ಲೈನ್ ಮೇಲೆ ಬೀಳುತ್ತಿದ್ದು, ವಿದ್ಯುತ್ ಅಡಚಣೆ ಉಂಟಾಗುತ್ತಿದೆ ಎಂದು ದೂರುಗಳು ಬರುತ್ತಿತ್ತು, ತೊಂದರೆ ಉಂಟು ಮಾಡುವ ಮರದ ಕೊಂಬೆಗಳನ್ನು ತೆರವುಗೊಳಿಸಿ. ಮಳೆ, ಗಾಳಿಯಿಂದ ವಿದ್ಯುತ್ ಕಂಬಗಳು ಬಿದ್ದಲ್ಲಿ ಅದಷ್ಟು ಬೇಗ 24 ಗಂಟೆಯೊಳಗಾಗಿ ಸರಿಪಡಿಸಿ ಎಂದರು.



ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಉಪ ವಿಭಾಗಾಧಿಕಾರಿ ಮಹೇಶ್, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಕೃಷ್ಣಕುಮಾರ್, ಲೀಡ್ ಬ್ಯಾಂಕ್ ಮ್ಯಾನೇಜರ್ ಅರುಣ್‌ಕುಮಾರ್, ಅರಣ್ಯ ಇಲಾಖೆಯ ಅಧಿಕಾರಿ ಶಿಲ್ಪ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ರೂಪಶ್ರೀ, ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ.ಸುರೇಶ್ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಹಾಜರಾಗ್ತೇನೆ...

ಈ ಹಂತದಲ್ಲಿ ಪ್ರಜ್ವಲ್ ಇಂದು ವಿಡಿಯೋ ಮೂಲಕ ದಿಢೀರ್ ಪ್ರತ್ಯಕ್ಷ ರಾಗಿದ್ದಾರೆ. ವಿದೇಶದಿಂದಲೇ ವಿಡಿಯೋ ಸಂದೇಶ ಕಳಿಸಿರುವ ಪ್ರಜ್ವಲ್ ತಾನು ನಿರ್ದೋಷಿ ಎಂದು ಸ್ಪಷ್ಟನೆ ನೀಡಿದ್ದಾರೆ.

2 ನಿಮಿಷ 57 ಸೆಕೆಂಡ್‌ಗಳ ಈ ವಿಡಿಯೋದಲ್ಲಿ ಪೆನ್‌ಡ್ರೈವ್ ಪ್ರಕರಣ ಸಂಬಂಧ ಪ್ರಜ್ವಲ್ ಹಲವು ಸ್ಪಷ್ಟನೆ ನೀಡಿದ್ದು, ತಮ್ಮನ್ನು ರಾಜಕೀಯವಾಗಿ ಮುಗಿಸಲು ಕಾಂಗ್ರೆಸ್ ಹೂಡಿರುವ ಹುನ್ನಾರ ಎಂದು ನೇರ ಆರೋಪ ಮಾಡಿದ್ದಾರೆ.

ಇತ್ತೀಚೆಗೆ ಮಾಜಿ ಸಿಎಂ ಕುಮಾರಸ್ವಾಮಿ, ರಾಷ್ಟ್ರಕ್ಕೆ ಹಿಂತಿರುಗಿ ಎಸ್‌ಐಟಿ ಮುಂದೆ ಹಾಜರಾಗುವಂತೆ ಸಾರ್ವಜನಿಕವಾಗಿ ತಾಕೀತು ಮಾಡಿದ್ದರು. ಕುಮಾರಸ್ವಾಮಿ ಅವರ ಕರೆಗೂ ಪ್ರಜ್ವಲ್ ಸ್ಪಂದಿಸದಿದ್ದಾಗ, ತಾತ ದೇವೇಗೌಡರು ಖಾರವಾಗಿ ತಮ್ಮ ಎಕ್ಸ್ ಖಾತೆಯಲ್ಲಿ ಮೊಮ್ಮಗನ ವಿರುದ್ಧ ಕಿಡಿ ಕಾರಿ, ರಾಷ್ಟ್ರಕ್ಕೆ ಹಿಂತಿರುಗಿ ಬಂದು ಎಸ್‌ಐಟಿ ಮುಂದೆ ಹಾಜರಾಗದೇ ಇದ್ದಲ್ಲಿ ಕುಟುಂಬದಿಂದ ಹೊರಹಾಕುವುದಾಗಿ ಎಚ್ಚರಿಕೆ ನೀಡಿದ್ದರು. ತಾತನ ಎಚ್ಚರಿಕೆ ಹಾಗೂ ಪ್ರಜ್ವಲ್ ವಕೀಲರು, ಭಾರತಕ್ಕೆ ಹಿಂತಿರುಗಿ ತನಿಖಾ ಸಂಸ್ಥೆ ಮುಂದೆ ಹಾಜರಾಗುವಂತೆ ನೀಡಿದ ಸಲಹೆ ಫಲಿಸಿದೆ. ಎಷ್ಟೇ ದಿನವಾದರೂ, ನೀವು ಕಾನೂನನ್ನು ಎದುರಿಸಲೇಬೇಕು. ತಡ ಮಾಡಿದರೆ, ವಿಷಯ ಮತ್ತಷ್ಟು ಗೊಂದಲಕ್ಕೆ ಒಳಗಾಗುತ್ತೆ. ಅಲ್ಲದೆ, ಕುಟುಂಬವೂ ನೆಮ್ಮದಿಯಿಂದಿರಲು ಸಾಧ್ಯವಿಲ್ಲ. ಭಾರತಕ್ಕೆ ಹಿಂತಿರುಗಿ ತನಿಖಾ ಸಂಸ್ಥೆ ಮುಂದೆ ಹಾಜರಾಗಿ ಕಾನೂನಿನ ಹೋರಾಟ ನಡೆಸಿ ಎಂದು ವಕೀಲರು ನೀಡಿದ ಸಲಹೆಗೆ ಪ್ರಜ್ವಲ್ ತಮ್ಮ ನಿರ್ಧಾರ ಬದಲಿಸಿ ರಾಷ್ಟ್ರಕ್ಕೆ ಹಿಂತಿರುಗುತ್ತಿದ್ದಾರೆ.

ಹಿಂತಿರುಗುವುದಕ್ಕೂ ಮುನ್ನ ವಕೀಲರು ನೀಡಿದ ಸಲಹೆಯಂತೆ 2.57 ನಿಮಿಷಗಳ ಟಿಪ್ಪಣಿಯನ್ನು ವಿಡಿಯೊ ಮೂಲಕ ಓದಿ, ಸಂದೇಶ ರವಾನಿಸಿದ್ದಾರೆ.

ವಿಡಿಯೋದಲ್ಲಿ ಹೇಳಿರುವುದೇನು...

ಇದರಿಂದ ಆಘಾತಕ್ಕೊಳಗಾದ ನಾನು ಒಂದು ಚೂರು ದೂರ ಇದ್ದೆ. ಯಾರೂ ಕೂಡ ಇದರ ಬಗ್ಗೆ ತಪ್ಪು ತಿಳಿಯುವುದು ಬೇಡ. ನಾನೇ ಸ್ವತಃ ಶುಕ್ರವಾರ, ಮೇ 31 ರಂದು ಬೆಳಗ್ಗೆ 10 ಗಂಟೆಗೆ ಎಸ್‌ಐಟಿ ಮುಂದೆ ಹಾಜರಾಗುತ್ತೇನೆ. ಎಸ್‌ಐಟಿ ಮುಂದೆ ಹಾಜರಾಗಿ ತನಿಖೆಗೆ ಸಂಪೂರ್ಣ ಸಹಕಾರ ಕೊಡುವ ಮೂಲಕ ಸರಿಯಾದ ರೀತಿಯಲ್ಲಿ ಉತ್ತರ ಕೊಡುವ ಕೆಲಸ ಮಾಡುತ್ತೇನೆ.

ನನಗೆ ನ್ಯಾಯಾಲಯದ ಮೇಲೆ ನಂಬಿಕೆ ಇದೆ. ಖಂಡಿತವಾಗಿಯೂ ಸುಳ್ಳು ಪ್ರಕರಣದಿಂದ ಆಚೆ ಬರುವಂತಹ ಕೆಲಸವನ್ನು ನ್ಯಾಯಾಲಯದ ಮೂಲಕವೇ ಮಾಡಿಕೊಳ್ಳುತ್ತೇನೆ ಎಂಬ ನಂಬಿಕೆ ನನಗಿದೆ. ದೇವರು, ಜನರು ಹಾಗೂ ಕುಟುಂಬದ ಆಶೀರ್ವಾದ ಇರಲಿ ಎಂದು ಕೋರುತ್ತೇನೆ. ಇದು ಪ್ರಜ್ವಲ್ ರೇವಣ್ಣ ವಿಡಿಯೋದಲ್ಲಿ ನೀಡಿರುವ ಮಾಹಿತಿ. ಈ ಮೂಲಕ ಪ್ರಜ್ವಲ್ ಮೇ 31 ರಂದು ಹಾಜರಾಗುವುದಾಗಿ ತಿಳಿಸಿದ್ದಾರೆ. ಆದರೆ ಈಗಾಗಲೇ ಎರಡು ಬಾರಿ ದೇಶಕ್ಕೆ ಹಿಂತಿಸುಗಲು ವಿಮಾನ ಟಿಕೆಟ್ ಬುಕ್ ಮಾಡಿ ಪ್ರಜ್ವಲ್ ಎಸ್‌ಐಟಿಗೆ ಚಳ್ಳೆಹಣ್ಣು ತಿಳಿಸಿರುವುದರಿಂದ ಈ ಭಾರಿ ಅವರು ಬಂದೇ ಬರುತ್ತಾರಾ... ಪ್ರಜ್ವಲ್ ಎಸ್‌ಐಟಿ ಮುಂದೆ ಹಾಜರಾದ ತರುವಾಯ ಈ ಪ್ರಕರಣ ಇನ್ನು ಹಲವು ಸ್ಫೋಟಕ ತಿರುವು ಪಡೆಯುವುದು ನಿಶ್ಚಿತ. ಪ್ರಜ್ವಲ್ ಎಸ್‌ಐಟಿ ಮುಂದೆ ಹಾಜರಾದ ನಂತರ ಪೆನ್‌ಡ್ರೈವ್ ಪ್ರಕರಣದ ಮತ್ತೊಬ್ಬ ಆರೋಪಿ ಕಾರು ಚಾಲಕ ಕಾರ್ತಿಕ್ ಸೇರಿದಂತೆ ಇತರರು ಕೂಡ ಎಸ್‌ಐಟಿ ಮುಂದೆ ಹಾಜರಾಗುತ್ತಾರಾ... Wait & See!

ವಿಡಿಯೋ ವೈರಲ್ ಸಸ್ಪೆನ್ಸ್

ವಿದೇಶದಲ್ಲಿರುವ ಪ್ರಜ್ವಲ್ ರೇವಣ್ಣ ಯಾರ ಮೂಲಕ ವಿಡಿಯೋ ಕಳುಹಿಸಿದ್ದಾರೆ ಎಂಬುದು ನಿಗೂಢವಾಗಿದೆ.

ಒಂದು ಮೂಲದ ಪ್ರಕಾರ ಪ್ರಜ್ವಲ್ ದೆಹಲಿಯ ವ್ಯಕ್ತಿಯೊಬ್ಬರಿಗೆ ವಿಡಿಯೋ ಕಳುಹಿಸಿದ್ದು, ಆತ ಸುದ್ದಿ ವಾಹಿನಿಗಳಿಗೆ ಕಳುಹಿಸಿದ್ದಾರೆ ಎನ್ನಲಾಗಿದೆ.

ಕಾದು ಕುಳಿತಿರುವ ಎಸ್‌ಐಟಿಗೆ ಪ್ರಜ್ವಲ್ ವಿಡಿಯೋ ಕಳುಹಿಸಿಲ್ಲ. ಒಂದು ವೇಳೆ ಎಸ್‌ಐಟಿಗೆ ವಿಡಿಯೋ ಕಳುಹಿಸಿದರೆ ಈಗಿನ ತಂತ್ರಜ್ಞಾನದಲ್ಲಿ ಅದರ ಟ್ರ್ಯಾಕ್ ಅನುಸರಿಸಿ ತಾನು ಇರುವ ಸ್ಥಳ ಪತ್ತೆ ಮಾಡುತ್ತಾರೆ ಎಂಬ ಕಾರಣಕ್ಕೆ ಪ್ರಜ್ವಲ್ ಎಸ್‌ಐಟಿಗೆ ವಿಡಿಯೋ ಕಳುಹಿಸಿಲ್ಲ.

ಈಗಾಗಲೇ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಪ್ರಕ್ರಿಯೆ ಆರಂಭಿಸಿರುವ ಕೇಂದ್ರ ವಿದೇಶಾಂಗ ಸಚಿವಾಲಯಕ್ಕೆ ಪ್ರಜ್ವಲ್ ವಿಡಿಯೋ ಕಳುಹಿಸಿರುವ ಸಾಧ್ಯತೆ ಇದೆ. ನಾನು ಮೇ 31 ರಂದು ಎಸ್‌ಐಟಿ ಮುಂದೆ ಹಾಜರಾಗುತ್ತಿದ್ದೇನೆ ಎಂದು ತಿಳಿಸುವ ಮೂಲಕ ಪಾಸ್‌ಪೋರ್ಟ್ ರದ್ದತಿ ಪ್ರಕ್ರಿಯೆಗೆ ಬ್ರೇಕ್ ಹಾಕುವ ಉದ್ದೇಶ ಕೂಡ ಇರುವ ಸಾಧ್ಯತೆ ಇದೆ.

ತನಿಖೆ ನಡೆಸುತ್ತೆ...

ಪ್ರಜ್ವಲ್‌ನನ್ನು ಇಲ್ಲಿಗೆ ಕರೆ ತರುವ ಪ್ರಯತ್ನ ಮಾಡಿದ್ದೆವು. ಆದರೆ ವಿದೇಶದಿಂದ ಒಬ್ಬ ವ್ಯಕ್ತಿಯನ್ನು ಕರೆ ತರುವುದು ಅಷ್ಟು ಸುಲಭದ ಕೆಲಸ ವಲ್ಲ. ಪ್ರಜ್ವಲ್ ವಿರುದ್ಧ ಈಗಾಗಲೇ ಬಂಧನ ವಾರೆಂಟ್ ಜಾರಿಯಾಗಿದೆ. ಬ್ಲ್ಯೂ ಕಾರ್ನರ್ ನೋಟಿಸ್ ಜಾರಿಯಾದ ಹಿನ್ನೆಲೆಯಲ್ಲಿ ಪ್ರಜ್ವಲ್‌ನನ್ನು ಬಂಧಿಸ ಬೇಕು. ಈ ಬಗ್ಗೆ ಎಸ್‌ಐಟಿಯವರು ಯಾವ ರೀತಿ ಕ್ರಮ ಕೈಗೊಳ್ಳುತ್ತಾರೆ ಎಂದು ನೋಡಬೇಕಿದೆ ಎಂದರು ನಾನು ವಿದೇಶಕ್ಕೆ ಹೋಗುವ ತನಕ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ ಎಂದು ಪ್ರಜ್ವಲ್ ಹೇಳಿರಬಹುದು. ಇಲ್ಲಿ ಬಂದ ಮೇಲೆ ಏನು ಹೇಳಿಕೆ ಕೊಡುತ್ತಾರೋ ನೋಡೋಣ. ತರುವಾಯ ಈ ಬಗ್ಗೆ ಎಸ್‌ಐಟಿಯವರು ಕ್ರಮ ಕೈಗೊಳ್ಳುತ್ತಾರೆ. ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಪ್ರಜ್ವಲ್ ಹೇಳಿರಬಹುದು. ಎಲ್ಲರೂ ನಮ್ಮ ತಪ್ಪಿಲ್ಲ ಎಂದು ಹಾಗೆ ಹೇಳುತ್ತಾರೆ. ಹಾಗಾದರೆ ತಪ್ಪು ಮಾಡಿದವರು ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಎಸ್‌ಐಟಿಯವರು ಈ ಬಗ್ಗೆ ತನಿಖೆ ನಡೆಸಿ, ಯಾರು ತಪ್ಪು ಮಾಡಿದ್ದಾರೆ, ಯಾರು ತಪ್ಪು ಮಾಡಿಲ್ಲ ಎಂದು ಹೇಳುತ್ತಾರೆ. ಮೇ 31 ರಂದು ಪ್ರಜ್ವಲ್ ಬಂದ ಮೇಲೆ ಏನಾಗುತ್ತೆ ಅಂತ ನೋಡೋಣ ಎಂದು ಡಾ.ಪರಮೇಶ್ವರ್ ತಿಳಿಸಿದರು.

ಭಾರಿ ಬೇಡಿಕೆ

ಶುದ್ಧೀಕರಿಸಿ, ಪೂರೈಕೆ ಮಾಡಿದರೂ ನೀರು ಬಗಡಾಗಿ, ಹಳದಿ ಬಣ್ಣದಲ್ಲೇ ಇರುವುದರಿಂದ ಪಾಲಿಕೆ ಪೂರೈಸುವ ನೀರನ್ನು ಬಳಕೆ ಮಾಡಲು ಜನ ಹಿಂದೆ–ಮುಂದೆ ನೋಡುವಂತಾಗಿದೆ. ಹಾಗಾಗಿ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಬಳಕೆ ಮಾಡುವುದು ಹೆಚ್ಚಾಗುತ್ತಿದೆ ಎಂದು ನಗರಪಾಲಿಕೆ ವಾಣಿವಿಲಾಸ ವಾಟರ್‌ವರ್ಕ್ಸ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರ ಮೊಹಮ್ಮದ್ ಮುಸ್ತಫಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಆರೋಗ್ಯ ಕಾಳಜಿ: ಕೊರೊನಾ ನಂತರ ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚಾಗಿದೆ. ಪ್ಯಾಕೇಜ್ ಡ್ರಿಂಕಿಂಗ್ ವಾಟರ್‌ಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಸಣ್ಣ ಟೀ ಅಂಗಡಿಯಲ್ಲೂ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಬಾಟಲ್‌ಗಳು ದೊರೆಯಲಿವೆ. ಅಲ್ಲದೆ ಇತ್ತೀಚೆಗೆ ಕಾಲರಾದಂತಹ ಸಾಂಕ್ರಾಮಿಕ ರೋಗಗಳಿಂದಾಗಿಯೂ ಶುದ್ಧ ಕುಡಿಯುವ ನೀರಿನ ಬಳಕೆಗೆ ಆದ್ಯತೆ ನೀಡುತ್ತಿದ್ದಾರೆ. ಹಲವರು ಮನೆಯಲ್ಲಿಯೇ ಆರ್‌ಓ ಪ್ಲಾಂಟ್‌ಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಎಂದು ಬನ್ನಿಮಂಟಪ ಕೈಗಾರಿಕಾ ಪ್ರದೇಶದಲ್ಲಿರುವ ಸಮ ಆಕ್ವಾ(ಶುದ್ಧ ಕುಡಿಯುವ ನೀರಿನ ಘಟಕ) ಮುಖ್ಯಸ್ಥ ಮೊಹಮ್ಮದ್ ಮಾಜ್ ತಿಳಿಸಿದರು.

ಶೇ.50 ರಷ್ಟು ಜಾಸ್ತಿ: ಕಳೆದ ಎರಡ್ಮೂರು ವರ್ಷದಲ್ಲಿ ಪ್ಯಾಕೇಜ್ ಡ್ರಿಂಕಿಂಗ್ ವಾಟರ್ ಬಳಕೆ ಶೇ.50 ರಷ್ಟು ಜಾಸ್ತಿಯಾಗಿದೆ. ಆರಂಭದಲ್ಲಿ ಅಷ್ಟೇನು ಬೇಡಿಕೆ ಇರಲಿಲ್ಲ. ಆದರೆ ಕಳೆದ ಎರಡ್ಮೂರು ವರ್ಷದಲ್ಲಿ ಬೇಡಿಕೆ ಹೆಚ್ಚಾಯಿತು. ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎಸ್) ಹಾಗೂ ಫುಡ್ ಲೈಸನ್ಸ್ ಪಡೆದಿರುವ ಕಂಪನಿಗಳ ಮೇಲೆ ಜನರು ನಂಬಿಕೆ ಇಡಲಿದ್ದಾರೆ ಎಂದರು.

ಮೈಸೂರಲ್ಲಿ ಬೇಡಿಕೆ ಹೆಚ್ಚಳ: ವರ್ಷದಿಂದ ವರ್ಷಕ್ಕೆ ಮೈಸೂರಿನಲ್ಲಿ ಶುದ್ಧ ಕುಡಿಯುವ ನೀರಿನ ಬಾಟಲ್‌ಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಅದಕ್ಕೆ ಅನುಗುಣವಾಗಿ ಪೂರೈಕೆ ಮಾಡಲು ಹೊಸ ಹೊಸ ಘಟಕಗಳು ತಲೆ ಎತ್ತುತ್ತಿವೆ ಎಂದು ವಾಟರ್ ಬಾಟಲ್ ಡಿಸ್ಟ್ರಿಬ್ಯೂಟರ್ ಗಜೇಂದ್ರ ಮಾಹಿತಿ ನೀಡಿದರು. ಹಾಗೆಯೇ ಬೇಸಿಗೆಯಲ್ಲಿ ಪ್ಯಾಕೇಜ್ ಡ್ರಿಂಕಿಂಗ್ ವಾಟರ್‌ಗೆ ಬೇಡಿಕೆ ಜಾಸ್ತಿಯಾಗಲಿದ್ದು, ಪೂರೈಕೆ ಮಾಡುವುದೇ ಕೆಲವೊಮ್ಮೆ ಕಷ್ಟವಾಗುತ್ತದೆ. ವರ್ಷದಿಂದ ವರ್ಷಕ್ಕೆ ಬಾಟಲ್ ನೀರಿನ ಬಳಕೆ ಹೆಚ್ಚಾಗುತ್ತಿದೆ ಎಂದು ಬಾಬು ಎಂಟರ್‌ಪ್ರೈಸಸ್‌ನ ಬೈಲಿ ನೀರಿನ ಬಾಟಲ್ ಡಿಸ್ಟ್ರಿಬ್ಯೂಟರ್ ರಮೇಶ್ ತಿಳಿಸಿದರು.

> **ಕುಡಿಯುವ ಶುದ್ಧ ನೀರಿಗೆ 'ಓಜನೈಜೇಷನ್' ಮಾಡುವುದರಿಂದ ದೇಹದ ಮೂಳೆಗಳಿಗೆ ಅನುಕೂಲ. ಡಿಹೈಡ್ರೇಶನ್ ಕಡಿಮೆಯಾಗಲಿದೆ. ಬಾಯಾರಿಕೆ ಕಡಿಮೆಯಾಗುತ್ತದೆ. ಆರೋಗ್ಯದ ದೃಷ್ಟಿಯಿಂದ ಶುದ್ಧ ಕುಡಿಯುವ ನೀರು ಅನಿವಾರ್ಯವಾಗಿದೆ. ದೇಶದಲ್ಲಿಯೇ ಶುದ್ಧ ಕುಡಿಯುವ ನೀರಿನ ಬಳಕೆ ಶೇ.50 ರಿಂದ 60 ರಷ್ಟು ಹೆಚ್ಚಾಗಿದೆ.**
> – ಧ್ರುವಕುಮಾರ್, ಸಿನಿಯರ್ ಮ್ಯಾನೆಜರ್, ಬಿಸ್ಲೇರಿ

> **ಬೇಸಿಗೆ, ಸಾಂಕ್ರಾಮಿಕ ಕಾಯಿಲೆಗಳಿಂದಾಗಿ ಇತ್ತೀಚಿನ ದಿನಗಳಲ್ಲಿ ಶುದ್ಧ ಕುಡಿಯುವ ನೀರಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಫಾಸ್ಟೋ ವಾಟರ್ ಬಾಟಲ್‌ಗಳ ವ್ಯಾಪಾರದಲ್ಲಿ ಶೇ.25 ರಷ್ಟು ಹೆಚ್ಚಾಗಿದೆ.**
> – ಧವನಮ್ ಶ್ರೀನಿವಾಸ್, ಮುಖ್ಯಸ್ಥರು, ಫಾಸ್ಟೋ ಕಂಪನಿ, ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು

> **ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬೇಡಿಕೆ ಹೆಚ್ಚಾಗಿದೆ. ಗುಣಮಟ್ಟದ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡುತ್ತಿದ್ದು, ಗ್ರಾಹಕರಿಂದಲೂ ಬೇಡಿಕೆ ಉತ್ತಮವಾಗಿದೆ. 2018ರಿಂದ ಆರಂಭಿಸಿ, ದಕ್ಷಿಣ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ಸಪ್ಲೆ ಮಾಡುತ್ತಿದ್ದೇವೆ.**
> – ದಿಲೀಪ್ ಕುಮಾರ್, ಯುಬಿ ಸಿಗ್ನೇಚರ್, ಮಂಟಿ ಕೈಗಾರಿಕಾ ಪ್ರದೇಶ, ಮಂಡ್ಯ

> **ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ನಗರಪಾಲಿಕೆಯ ವ್ಯಾಪ್ತಿಯಲ್ಲಿ 116 ಶುದ್ಧ ಕುಡಿಯುವ ನೀರಿನ ಘಟಕಗಳ ಜೊತೆಗೆ ಖಾಸಗಿ ಶುದ್ಧ ನೀರಿನ ಘಟಕಗಳ ಸಂಖ್ಯೆಯೂ ಹೆಚ್ಚಾಗುತ್ತಿವೆ. ಬಹುತೇಕ ಮನೆಗಳಲ್ಲಿ 5 ರೂ ಕಾಯಿನ್‌ನಿಂದ 20 ಲೀಟರ್ ನೀರನ್ನು ತುಂಬಿಸಿಕೊಂಡು ಕುಡಿಯಲು ಬಳಕೆ ಮಾಡುತ್ತಿದ್ದಾರೆ. ಸಾಂಕ್ರಾಮಿಕ ಕಾಯಿಲೆಗಳ ಆತಂಕದಿಂದಾಗಿ ಜನರು ಶುದ್ಧ ಕುಡಿಯುವ ನೀರಿನ ಬಳಕೆಗೆ ಆದ್ಯತೆ ನೀಡಿದ್ದಾರೆ.**
> – ಮೊಹಮ್ಮದ್ ಮುಸ್ತಫಾ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಪಾಲಿಕೆ ವಾಣಿವಿಲಾಸ ವಾಟರ್ ವರ್ಕ್ಸ್

ನೂರಾರು ಸರ್ಕಾರಿ ಶಾಲಾ ಕಟ್ಟಡಗಳು ದುರಸ್ತಿ

- ಸುರಕ್ಷತೆ ಬಗ್ಗೆ ಮಕ್ಕಳು, ಪೋಷಕರಲ್ಲಿ ಆತಂಕ
- ಮೈಸೂರು ಜಿಲ್ಲೆಯ 1818 ಶಾಲಾ ಕೊಠಡಿಗಳ ರಿಪೇರಿ ಜರೂರು
- ಅನುದಾನ ಕೋರಿ ಪಟ್ಟಿ ಸಲ್ಲಿಸಿದರೂ ಇನ್ನೂ ಕೃಪೆ ತೋರಿಲ್ಲ



ಸಾಂದರ್ಭಿಕ ಚಿತ್ರ

ಮೈಸೂರು, ಮೇ 27(ಎಸ್‌ಬಿಡಿ)– ಶಾಲೆಗಳ ಪುನಾರಂಭದ ಜೊತೆಗೆ ಮುಂಗಾರು ಮಳೆ ಅಬ್ಬರಿಸುವ ಸಾಧ್ಯತೆ ಇದೆ. ಆದರೆ ಬಡವರ ಮಕ್ಕಳು ಓದುವ ಸರ್ಕಾರಿ ಶಾಲೆಗಳು ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಎದುರಾಗಿದೆ.

ಬೇಸಿಗೆ ರಜೆ ಬಳಿಕ ಮೇ 31ರಂದು ರಾಜ್ಯದಲ್ಲಿ ಶಾಲೆಗಳು ಆರಂಭವಾಗುತ್ತಿದ್ದು, ಅದೇ ದಿನ ಮುಂಗಾರು ಮಳೆಯೂ ಪ್ರಾರಂಭವಾಗಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಆದರೆ ಮುಖ್ಯಮಂತ್ರಿಗಳ ತವರು ಮೈಸೂರು ಜಿಲ್ಲೆಯಲ್ಲಿ ಪೂರ್ವ ಮುಂಗಾರಿನ ಬಿರುಗಾಳಿ ಸಹಿತ ಮಳೆಯಿಂದ ಹಲವು ಶಾಲೆಗಳ ಛಾವಣಿ ಸೋರುತ್ತಿದ್ದು, ಕೆಲ ಶಾಲೆಗಳ ಗೋಡೆಗಳೂ ಬಿರುಕು ಬಿಟ್ಟಿವೆ. ಸಾವಿರಾರು ಕೊಠಡಿಗಳ ದುರಸ್ತಿ ಆಗಬೇಕಿದೆ. ಪರಿಸ್ಥಿತಿ ಹೀಗಿರುವಾಗ ಶಾಲೆಗಳ ಭದ್ರತೆ, ಸುರಕ್ಷತೆ ಬಗ್ಗೆ ಮಕ್ಕಳು ಹಾಗೂ ಪೋಷಕರಲ್ಲಿ ಆತಂಕ ಉಂಟಾಗುವುದು ಸಹಜ.

ಜಿಲ್ಲೆಯಲ್ಲಿ 991 ಕಿರಿಯ ಪ್ರಾಥಮಿಕ, 1665 ಹಿರಿಯ ಪ್ರಾಥಮಿಕ ಹಾಗೂ 786 ಪ್ರೌಢಶಾಲೆ ಸೇರಿದಂತೆ ಒಟ್ಟು 3,442 ಸರ್ಕಾರಿ ಶಾಲೆಗಳಿದ್ದು, 4616 ಕೊಠಡಿಗಳಿವೆ. ಇದರಲ್ಲಿ 752 ಶಾಲೆಗಳ 1818 ಕೊಠಡಿಗಳ ದುರಸ್ತಿ ಆಗಬೇಕಿದೆ. 810 ಕೊಠಡಿಗಳಲ್ಲಿ ಹೆಚ್ಚು ದುರಸ್ತಿ ಕಾರ್ಯದ ಅಗತ್ಯವಿದೆ. ಶೀಘ್ರ ದುರಸ್ತಿ ಕಾರ್ಯ ಆರಂಭಿಸಬೇಕು. ಸರ್ಕಾರ ಈ ಬಗ್ಗೆ ತುರ್ತು ಕ್ರಮ ವಹಿಸಬೇಕು ಎಂದು ಪೋಷಕರು ಆಗ್ರಹಿಸಿದ್ದಾರೆ.

ಸಚಿವರೇ ಗಮನಹರಿಸಿ: ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರ ಸ್ವಕ್ಷೇತ್ರ ತಿ.ನರಸೀಪುರ ಹಾಗೂ ನಂಜನಗೂಡು ತಾಲೂಕುಗಳಲ್ಲಿ ಹೆಚ್ಚು ಶಾಲಾ ಕೊಠಡಿಗಳಿಗೆ ತುರ್ತು ದುರಸ್ತಿ ಅಗತ್ಯವಿದೆ. ತಿ.ನರಸೀಪುರ ತಾಲೂಕಿನ 143 ಶಾಲೆಗಳ 230 ಕೊಠಡಿಗಳು ಹೆಚ್ಚು ಹಾಳಾಗಿದ್ದು, 98 ಕೊಠಡಿಯಲ್ಲಿ ಸಣ್ಣಪುಟ್ಟ ರಿಪೇರಿ ಆಗಬೇಕಿದೆ. ಒಟ್ಟು ಕೊಠಡಿ(924)ಗಳಲ್ಲಿ ಶೇ.35ರಷ್ಟು ಕೊಠಡಿಗಳು ದುರಸ್ತಿಯಲ್ಲಿವೆ.

ನಂಜನಗೂಡು ತಾಲೂಕಿನ 129 ಶಾಲೆಗಳ 249 ಕೊಠಡಿಗಳು ಮೇಜರ್ ರಿಪೇರಿ ಹಾಗೂ 104 ಮೈನರ್ ರಿಪೇರಿ ಆಗಬೇಕಿದೆ. ಹುಣಸೂರಿನಲ್ಲಿ 264 ಕೊಠಡಿ ಮೈನರ್ ಹಾಗೂ 61 ಮೇಜರ್ ರಿಪೇರಿ, ನಂಜನಗೂಡಿನಲ್ಲಿ 104 ಮತ್ತು 249, ಹೆಚ್.ಡಿ.ಕೋಟೆಯಲ್ಲಿ 99 ಮತ್ತು 87, ಕೆ.ಆರ್.ನಗರ ತಾಲೂಕಿನಲ್ಲಿ 34 ಮತ್ತು 56, ಮೈಸೂರು ಉತ್ತರ ವಲಯ 90 ಮತ್ತು 71, ಮೈಸೂರು ದಕ್ಷಿಣ 30 ಮತ್ತು 15 ಹಾಗೂ ಮೈಸೂರು ಗ್ರಾಮಾಂತರದಲ್ಲಿ 277 ಕೊಠಡಿಗಳು ಮೈನರ್ ಹಾಗೂ 28 ಮೇಜರ್ ರಿಪೇರಿ ಆಗಬೇಕಿದೆ.

ಅನುದಾನಕ್ಕೆ ಮನವಿ: ಹುಣಸೂರು ತಾಲೂಕು ಶಾಲಾ ಕೊಠಡಿಗಳ ದುರಸ್ತಿಗೆ 15.44 ಕೋಟಿ ರೂ., ತಿ.ನರಸೀಪುರಕ್ಕೆ 7.36 ಕೋಟಿ, ನಂಜನಗೂಡಿಗೆ 12.04 ಕೋಟಿ, ಮೈಸೂರು ಗ್ರಾಮಾಂತರ ವಲಯಕ್ಕೆ 8.45 ಕೋಟಿ, ಹೆಚ್.ಡಿ. ಕೋಟೆಗೆ 3.89 ಕೋಟಿ, ಕೆ.ಆರ್.ನಗರಕ್ಕೆ 2.90 ಕೋಟಿ, ಮೈಸೂರು ಉತ್ತರ ವಲಯಕ್ಕೆ 2.32 ಕೋಟಿ, ಪಿರಿಯಾಪಟ್ಟಣಕ್ಕೆ 76 ಲಕ್ಷ ರೂ. ಹಾಗೂ ದಕ್ಷಿಣ ವಲಯಕ್ಕೆ 30 ಲಕ್ಷ ರೂ. ಸೇರಿದಂತೆ ಜಿಲ್ಲೆಯ ಶಾಲಾ ಕೊಠಡಿಗಳ ದುರಸ್ತಿಗೆ ಒಟ್ಟು 53.05 ಕೋಟಿ ರೂ. ಅಗತ್ಯವಿದ್ದು, ಈ ಸಂಬಂಧ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್.ಕೆ.ಪಾಂಡು ಸರ್ಕಾರಕ್ಕೆ ವರದಿ ಸಲ್ಲಿಸಿ, ಅನುದಾನ ಕೋರಿದ್ದಾರೆ.

ಒತ್ತಡದಲ್ಲಿ ಕಲಿಕೆ ಕಷ್ಟ: ಶಾಲಾ ಕೊಠಡಿಗಳ ಸೋರುವ ಛಾವಣಿ, ಬಿರುಕು ಬಿಟ್ಟಿರುವ ಗೋಡೆಗಳನ್ನು ತುರ್ತು ರಿಪೇರಿ ಮಾಡಿಸದಿದ್ದರೆ ಮಕ್ಕಳ ಕಲಿಕೆಗೆ ಖಂಡಿತವಾಗಿ ಅಡ್ಡಿಯಾಗುತ್ತದೆ. ರಿಪೇರಿ ಇರುವ ಕೊಠಡಿಗಳಲ್ಲಿ ಮಕ್ಕಳನ್ನು ಕೂರಿಸುವುದು ಸುರಕ್ಷಿತವಲ್ಲದ ಕಾರಣ ಸುಸ್ಥಿತಿಯಲ್ಲಿರುವ ಕೊಠಡಿಗಳಲ್ಲೇ ಎಲ್ಲರಿಗೂ ಅವಕಾಶ ಮಾಡಿಕೊಡಬೇಕಾಗುತ್ತದೆ. ವಿವಿಧ ತರಗತಿ ಮಕ್ಕಳನ್ನು ಒಂದೇ ಕೊಠಡಿಯಲ್ಲಿ ಕೂರಿಸಿದರೆ ಗೊಂದಲವಾಗುತ್ತದೆ. ಸಾಮರ್ಥ್ಯಕ್ಕಿಂತ ಹೆಚ್ಚು ಮಕ್ಕಳಿದ್ದರೂ ತೊಂದರೆಯಾಗುತ್ತದೆ.

> **ನೂರಾರು ಕೊಠಡಿ ಶಿಥಿಲ**
> ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ವಿಭಾಗದ ಒಟ್ಟು 164 ಹಾಗೂ ಪ್ರೌಢಶಾಲಾ ವಿಭಾಗದ 44 ಸೇರಿ ಒಟ್ಟು 208 ಕೊಠಡಿಗಳು ಶಿಥಿಲಗೊಂಡಿದ್ದು, ಅವುಗಳನ್ನು ತೆರವುಗೊಳಿಸಿ ಹೊಸದಾಗಿ ನಿರ್ಮಾಣ ಮಾಡಬೇಕಿದೆ. 94 ಕೊಠಡಿಗಳನ್ನು ನಿರ್ಮಿಸಲು ಖಾಲಿ ಜಾಗ ಲಭ್ಯವಿದೆ.

ಕನ್ನಡ ಬೆಳೆಸಲು ಕಸಾಪ ಜೊತೆ ಎಲ್ಲಾ ಸಂಘ–ಸಂಸ್ಥೆಗಳು ಸಹಕರಿಸಲಿ

ಕನ್ನಡ ನುಡಿ ಸಂಭ್ರಮದಲ್ಲಿ ಸಾಧಕರಿಗೆ ಸನ್ಮಾನ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ ಕನ್ನಡ ನುಡಿ ಸಂಭ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಡಾ.ಎನ್.ಕೆ.ಲೋಲಾಕ್ಷಿ, ರಾಸಾ ಟ್ರಸ್ಟ್ ಅಧ್ಯಕ್ಷ ಆರ್.ಈಶ್ವರ್, ಟ್ರಸ್ಟಿ ಹೇಮಾ, ಕಸ್ತೂರಿ ಚಂದ್ರು, ತ್ಯಾಗರಾಜು, ಗುಂಡು ವೆಂಕಟೇಶಕುಮಾರ್ ಇದ್ದಾರೆ.

ಮೈಸೂರು, ಮೇ 27–ಕನ್ನಡ ಬೆಳೆಸುವುದು ಕೇವಲ ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸವಲ್ಲ. ಎಲ್ಲಾ ಸಂಘ, ಸಂಸ್ಥೆಗಳು ಸಹಕರಿಸಬೇಕು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕರೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಬೆಂಗಳೂರಿನ ರಾಸಾ ಕನ್ನಡ ಮತ್ತು ಕಲಾ ಸಂಸ್ಕೃತಿ ಚಾರಿಟಬಲ್ ಟ್ರಸ್ಟ್ ಮತ್ತು ರಾಸಾ ಪಬ್ಲಿಕೇಷನ್ಸ್ ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಕನ್ನಡ ನುಡಿ ಸಂಭ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ಎಲ್ಲಾ ಕನ್ನಡ ಪರ ಸಂಘಟನೆಗಳು ಈ ದಿಸೆಯಲ್ಲಿ ಕೆಲಸ ಮಾಡುತ್ತಿರುವುದು ಸ್ವಾಗತಾರ್ಹ ಎಂದು ಹೇಳಿದರು.

ಕನ್ನಡಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪ್ರಾಚೀನ ಭಾಷೆಯಾಗಿರುವುದರಿಂದಲೇ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆ. ಅತಿ ಹೆಚ್ಚು ಜ್ಞಾನಪೀಠ ಪುರಸ್ಕಾರಗಳು ಕನ್ನಡಕ್ಕೆ ಬಂದಿವೆ. ಇಷ್ಟೆಲ್ಲಾ ಇದ್ದರೂ ನಾವು ನವೆಂಬರ್‌ನಲ್ಲಿ ಮಾತ್ರ ಕನ್ನಡದ ಬಗ್ಗೆ ಜಾಗೃತರಾಗಿ ಬೇರೆ ಸಂದರ್ಭದಲ್ಲಿ ಮರೆಯುತ್ತಿದ್ದೇವೆ. ಇದರ ಬದಲು ವರ್ಷವಿಡೀ ಕನ್ನಡ ಕಲೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಪರಂಪರೆ ಬೆಳೆಸುವ ಕಾರ್ಯಕ್ರಮಗಳನ್ನು ಸಂಘಟಿಸಬೇಕು ಕನ್ನಡಿಗರು ಕನ್ನಡ ಪುಸ್ತಕೋದ್ಯಮ ಮತ್ತು ಪತ್ರಿಕೋದ್ಯಮ ಬೆಳೆಸಬೇಕು ಎಂದು ಹೇಳಿದರು.

ಪ್ರಸ್ತುತ ಕನ್ನಡದಲ್ಲಿ ಓದಿದರೆ ಕೆಲಸ ಸಿಗುವುದಿಲ್ಲ ಎಂಬ ಭಾವನೆ ಇದೆ. ಇದು ಹೋಗಬೇಕು. ಕನ್ನಡ ಅನ್ನದ ಭಾಷೆಯಾಗಬೇಕು. ಡಾ.ಸರೋಜಿನಿ ಮಹಿಷಿ ವರದಿಯಂತೆ ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು. ರಾಜ್ಯ ಸರ್ಕಾರ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ, ಕವಯತ್ರಿ ಡಾ.ಎನ್.ಕೆ. ಲೋಲಾಕ್ಷಿ ಅವರು ಕವಿಗೋಷ್ಠಿ ಉದ್ಘಾಟಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು.

ರಾಸಾ ಕನ್ನಡ ಮತ್ತು ಕಲಾ ಸಂಸ್ಕೃತಿ ಚಾರಿಟಬಲ್ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷ ರಾಸಾ ಆರ್.ಈಶ್ವರ್, ಟ್ರಸ್ಟಿ ಹೇಮಾ, ಜಿಲ್ಲಾ ಕಸಾಪ ಉಪಾಧ್ಯಕ್ಷ ಟಿ.ತ್ಯಾಗರಾಜು, ಹರೇ ಶ್ರೀನಿವಾಸ ಸಮಿತಿ ಅಧ್ಯಕ್ಷ ಗುಂಡು ವೆಂಕಟೇಶಕುಮಾರ್, ಮಾನವ ಹಕ್ಕು ಹೋರಾಟಗಾರ ಕಸ್ತೂರಿ ಚಂದ್ರು ಮುಖ್ಯ ಅತಿಥಿಗಳಾಗಿದ್ದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕವಿಗೋಷ್ಠಿಯಲ್ಲಿ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದರು. ನಂತರ ವಿವಿಧ ಸಾಂಸ್ಕೃತಿಕ ಕಾರ್ಯಕ್రಮಗಳು ಜರುಗಿದವು.

ಬಹುತೇಕ ಸಾಧಕರು ಕನ್ನಡ ಮಾಧ್ಯಮದಲ್ಲಿ ಓದಿದವರು; ಗ್ರಾಮೀಣ ಪ್ರದೇಶದಿಂದ ಬಂದವರು!

- ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅಭಿಮತ
- ಕಾನೂನು ವಿವಿ ಕುಲಪತಿ ಪ್ರೊ.ಸಿ.ಬಸವರಾಜುಗೆ ಸನ್ಮಾನ

ಮೈಸೂರು, ಮೇ 27–ಪ್ರತಿಯೊಬ್ಬರಿಗೂ ಕಲಿಕೆಯ ಹಸಿವಿರಬೇಕು ಎಂದು ರಾಜ್ಯ ಹೈಕೋರ್ಟಿನ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿವಿ ಕಾನೂನು ವಿಭಾಗದ ಪ್ರಾಧ್ಯಾಪಕ ಹುದ್ದೆಯಿಂದ ವಯೋನಿವೃತ್ತಿ ಹೊಂದುತ್ತಿರುವ ಕರ್ನಾಟಕ ರಾಜ್ಯ ಕಾನೂನು ವಿವಿ ಕುಲಪತಿ ಪ್ರೊ.ಸಿ. ಬಸವರಾಜು ಅವರನ್ನು ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸನ್ಮಾನಿಸಿ ಅವರು ಮಾತನಾಡಿ, ಬಡ ಕುಟುಂಬದಿಂದ ಬಂದ ಬಸವರಾಜು ಹಾಗೂ ರೈತ ಕುಟುಂಬದಿಂದ ಬಂದ ನನ್ನನ್ನು ಹಸಿವು ಇಲ್ಲಿವರೆಗೆ ತಂದು ನಿಲ್ಲಿಸಿದೆ ಎಂದರು.

ಬಹುತೇಕ ಉನ್ನತ ಹುದ್ದೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ ಗ್ರಾಮಾಂತರ ಪ್ರದೇಶದವರೇ ಇದ್ದಾರೆ. ರಾಜ್ಯ ಹೈಕೋರ್ಟಿನ 50 ನ್ಯಾಯಮೂರ್ತಿಗಳ ಪೈಕಿ 46 ಮಂದಿ ಕನ್ನಡ ಹಾಗೂ ಗ್ರಾಮೀಣ ಹಿನ್ನೆಲೆವುಳ್ಳವರು. ವಿದ್ವತ್ ಭಾಷೆಯಿಂದ ಬರುವುದಿಲ್ಲ, ಕಲಿಕೆಯಿಂದ ಬರುತ್ತದೆ. ನಾನು ಕೇವಲ 375 ರೂ. ಶುಲ್ಕದಲ್ಲಿ ಬಿ.ಎಸ್ಸಿ, 1.500 ರೂ. ಶುಲ್ಕದಲ್ಲಿ ಎಂ.ಎಸ್ಸಿ, 2100 ರೂ. ಶುಲ್ಕದಲ್ಲಿ ಎಲ್‌ಎಲ್‌ಬಿ ಪಾಸು ಮಾಡಿದವನು. ಓದುವಾಗ ಹಣದ ತೊಂದರೆ ಇದ್ದಿದ್ದರಿಂದ ಮೈಸೂರಿನ ಇಂದ್ರಭವನ್ ಹೋಟೆಲ್‌ನಲ್ಲಿ 333 ರೂ. ವೇತನ, ಎರಡು ಹೊತ್ತು ಊಟದ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡಿದ್ದೆ ಎಂದರು.

ಒಂದು ಕಾಲಕ್ಕೆ ಭಾರತದಿಂದ ಪ್ರತಿಭಾ ಪಲಾಯನವಾಯಿತು. ಈಗ ಅಮೆರಿಕಾ, ಲಂಡನ್ ಮೊದಲಾದ ಕಡೆ ಇರುವ ಎರಡು– ಮೂರನೇ ತಲೆಮಾರಿನವರು ವಾಪಸ್ ಭಾರತಕ್ಕೆ ಬರಲು ಬಯಸುತ್ತಿದ್ದಾರೆ. ಯಾರೇ ಆಗಲಿ ನಾವು ಬಂದ ಮೂಲವನ್ನು ಮರೆಯಬಾರದು ಎಂದರು.

ಅಂಬೇಡ್ಕರ್ ಅವರ ಸಂವಿಧಾನದಿಂದಾಗಿ ಮೀಸಲಾತಿ ಸಿಕ್ಕಿದೆ. ಆದ್ದರಿಂದಲೇ ನಾನು ಜಾತಿ ಪ್ರಮಾಣ ಪತ್ರ ನೀಡಲು, ಎಂ.ಎಸ್ಸಿ ಓದಲು ಸಹಾಯವಾಯಿತು. ಹೀಗಾಗಿ ಅಂಬೇಡ್ಕರ್ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದ್ದಾರೆ. ಅವರು ಭವಿಷ್ಯದ ಬಗ್ಗೆ ತುಂಬಾ ಆಲೋಚನೆ ಮಾಡಿ, ಸಂವಿಧಾನದಲ್ಲಿ ಎಲ್ಲಾ ಅಂಶಗಳನ್ನು ಸೇರಿಸಿದ್ದಾರೆ. ಹೀಗಾಗಿ ಅವರೊಬ್ಬ ಆಧುನಿಕ ನಾಸ್ಟರ್ ಡಾಮ್ ಎನ್ನಬಹುದು ಎಂದರು.



ಮೈಸೂರು ವಿವಿ ಕಾನೂನು ವಿಭಾಗದ ಪ್ರಾಧ್ಯಾಪಕ ಹುದ್ದೆಯಿಂದ ವಯೋ ನಿವೃತ್ತಿ ಹೊಂದುತ್ತಿರುವ ಕರ್ನಾಟಕ ಕಾನೂನು ವಿವಿ ಕುಲಪತಿ ಪ್ರೊ.ಸಿ.ಬಸವರಾಜು ದಂಪತಿಯನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಹೈಕೋರ್ಟಿನ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಸನ್ಮಾನಿಸಿದರು. ಸಾಹಿತಿ ಡಾ.ಪ್ರಧಾನ ಗುರುದತ್ತ, ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ಕೆ.ಆರ್.ವೇಣುಗೋಪಾಲ್, ಪ್ರೊ.ವಿ.ವಿಜಯಕುಮಾರ್, ಪ್ರೊ.ಪಿ.ವೆಂಕಟರಾಮಯ್ಯ ಇತರರಿದ್ದಾರೆ.

ಮುಖ್ಯ ಅತಿಥಿಯಾಗಿದ್ದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಬಡತನದಲ್ಲೂ ಪ್ರತಿಭೆ ಅರಳುತ್ತದೆ ಎಂಬುದಕ್ಕೆ ಎರಡು ಬಾರಿ ನೊಬೆಲ್ ಪ್ರಶಸ್ತಿ ಪಡೆದ ಮೇಡಂ ಕ್ಯೂರಿ ನಿದರ್ಶನ ಎಂದರು.

ಪ್ರೊ.ಸಿ.ಬಸವರಾಜು ಅವರು ನಾನು ಕುಲಪತಿಯಾಗಿದ್ದಾಗ ಕುಲಸಚಿವರಾಗಿ ಮೈವಿವಿ ಶತಮಾನೋತ್ಸವ ಯಶಸ್ಸಿಗೆ ಹೆಗಲುಕೊಟ್ಟು ದುಡಿದರು. ಕಾನೂನು ವಿಭಾಗ ಟೂರಿಂಗ್ ಟಾಕೀಸ್‌ನಂತೆ ಇತ್ತು. ನಾನು ಹೇಳಿದ ನಂತರ ಗಂಗೋತ್ರಿಯಲ್ಲಿ ಪ್ರತ್ಯೇಕ ಕಾನೂನು ಶಾಲೆ ಆರಂಭಕ್ಕೆ ಕ್ರಮ ವಹಿಸಿದರು ಎಂದು ಶ್ಲಾಘಿಸಿದರು.

ಅಭಿನಂದನಾ ಭಾಷಣ ಮಾಡಿದ ಹಿರಿಯ ಸಾಹಿತಿ ಡಾ.ಪ್ರಧಾನ ಗುರುದತ್ತ, ಕುಲಪತಿ ಹುದ್ದೆಯಿಂದ ಪ್ರೊ.ಸಿ. ಬಸವರಾಜು ನಿವೃತ್ತಿ ಆಗುವ ವೇಳೆಗೆ ಅವರ ಸಾಧನೆಯನ್ನು ದಾಖಲಿಸುವ ಅಭಿನಂದನಾ ಗ್ರಂಥ ಹೊರತರುವಂತೆ ಸಲಹೆ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ಮಾತನಾಡಿ, ಕುಲಸಚಿವರಾಗಿ ಪ್ರೊ.ಸಿ.ಬಸವರಾಜು ಉತ್ತಮವಾಗಿ ಕೆಲಸ ಮಾಡಿದರು. ಪ್ರೌಢಶಾಲಾ ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಉತ್ತೇಜನ ನೀಡಿದರು ಎಂದು ಹೇಳಿದರು.

> ನಾನು ಕೇವಲ 375 ರೂ. ಶುಲ್ಕದಲ್ಲಿ ಬಿ.ಎಸ್ಸಿ, 1.500 ರೂ. ಶುಲ್ಕದಲ್ಲಿ ಎಂ.ಎಸ್ಸಿ 2100 ರೂ. ಶುಲ್ಕದಲ್ಲಿ ಎಲ್‌ಎಲ್‌ಬಿ ಪಾಸು ಮಾಡಿದವನು. ಓದುವಾಗ ಹಣದ ತೊಂದರೆ ಇದ್ದಿದ್ದರಿಂದ ಮೈಸೂರಿನ ಇಂದ್ರಭವನ್ ಹೋಟೆಲ್‌ನಲ್ಲಿ 333 ರೂ. ವೇತನ, ಎರಡು ಹೊತ್ತು ಊಟದ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡಿದ್ದೆ.
>
> –ನ್ಯಾಯಮೂರ್ತಿ ಶಂಕರೇಗೌಡರು

ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿದ ಪ್ರೊ.ಸಿ.ಬಸವರಾಜು ಮಾತನಾಡಿ, ತಳ ಸಮುದಾಯದಿಂದ ಬಂದ ನನಗೆ ನೋವು–ಹಸಿವು ಶಿಕ್ಷಣ ಮುಖ್ಯ ಎಂಬುದನ್ನು ಕಲಿಸಿತು. ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಸವಣ್ಣ ಇಬ್ಬರೂ ಸಮ ಸಮಾಜ ನಿರ್ಮಾಣಕ್ಕೆ ಹೋರಾಟ ಮಾಡಿದವರು. ಬಸವಣ್ಣನವರ ವಚನಗಳು ತಮ್ಮ ಮೇಲೆ ಅಪಾರ ಪ್ರಭಾವ ಬೀರಿವೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಪ್ರತಿಭಾವಂತರಲ್ಲಿ ಗ್ರಾಮೀಣ ಪ್ರದೇಶದಿಂದ ಬಂದವರೇ ಹೆಚ್ಚು ಇರುತ್ತಾರೆ. ಶ್ರದ್ಧೆ, ಪ್ರಾಮಾಣಿಕತೆ, ವಿಶ್ವಾಸದಿಂದ ಕೆಲಸ ಮಾಡಿದರೆ ಅತ್ಯುನ್ನತ ಸ್ಥಾನ ತಲುಪಲು ಸಾಧ್ಯ. ಸಮಸ್ಯೆಗಳು ಬರುತ್ತವೆ. ಅವುಗಳನ್ನು ಸಮರ್ಥವಾಗಿ ಎದುರಿಸುವ ಗುಣ ಬೆಳೆಸಿಕೊಂಡರೆ ಜೀವನ ವಿಕಾಸವಾಗುತ್ತದೆ ಎಂದು ಅವರು ಹೇಳಿದರು.

ಪ್ರತಿಯೊಬ್ಬರಿಗೂ ಜ್ಞಾನದ ಹಸಿವು ಇರಬೇಕು. ಜ್ಞಾನಕ್ಕೆ ಸಮನಾದುದು ಯಾವುದೂ ಇಲ್ಲ ಎಂದ ಅವರು, ಮೈವಿವಿಯಲ್ಲಿ ಪ್ರೊ.ಕೆ.ಎಸ್.ರಂಗಪ್ಪ–ಪ್ರೊ.ಸಿ.ಬಸವರಾಜು ಕುಲಪತಿ– ಕುಲಸಚಿವರಾಗಿ ಶತಮಾನೋತ್ಸವ ಸಂದರ್ಭದಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಮುಖ್ಯ ಅತಿಥಿಯಾಗಿದ್ದ ಸಮಾಜ ಸೇವಕ ಮ.ವೆಂಕಟರಾಮ್, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಆರ್.ವೇಣುಗೋಪಾಲ್, ಭೋಪಾಲ್ ರಾಷ್ಟ್ರೀಯ ಕಾನೂನು ವಿವಿಯ ವಿಶ್ರಾಂತ ಕುಲಪತಿ ಪ್ರೊ.ವಿ. ವಿಜಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ

ಎಂ.ನಾಗೇಂದ್ರಬಾಬು ಬೆಂಬಲಿಸಲು ಮನವಿ

ಮೈಸೂರು, ಮೇ 27(ಜಿಎ)–ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವ ಸಲುವಾಗಿ ಕರ್ನಾಟಕ ಜನತಾ ಪಕ್ಷದ ಅಭ್ಯರ್ಥಿಯಾಗಿ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿರುವ ಎಂ.ನಾಗೇಂದ್ರಬಾಬು ಅವರನ್ನು ಮತದಾರರು ಚುನಾಯಿಸಬೇಕೆಂದು ಪಕ್ಷದ ರಾಜ್ಯ ಕಾರ್ಯಾಧ್ಯಕ್ಷರಾದ ಕದಂಬ ನಾ.ಅಂಬರೀಶ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತಮ ಸಮಾಜದ ನಿರ್ಮಾಣದ ಕನಸನ್ನು ಹೊತ್ತು ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಆದರೆ ಮೇಲ್ಮನೆಯನ್ನು ರಾಜಕೀಯ ಪಕ್ಷಗಳು ವ್ಯವಹಾರವನ್ನಾಗಿಸಿಕೊಳ್ಳುವ ಮೂಲಕ ಉತ್ತಮರನ್ನು ಅಲ್ಲಿಗೆ ಕಳುಹಿಸುತ್ತಿಲ್ಲ. ಹೀಗಾಗಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಹೊಂದಿರುವ ಇವರನ್ನು ಚುನಾಯಿಸಿದಲ್ಲಿ, ಸಮಸ್ಯೆ ಬಗೆಹರಿಸಲು ಶ್ರಮಿಸುತ್ತಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಭ್ಯರ್ಥಿ ಎಂ.ನಾಗೇಂದ್ರಬಾಬು, ಶಿವಕುಮಾರ್, ಮಂಜುನಾಥ್, ಪ್ರವೀಣ್ ಭಾರದ್ವಾಜ್ ಉಪಸ್ಥಿತರಿದ್ದರು.

ಜೂನ್ 2ಕ್ಕೆ ಮೈಸೂರಲ್ಲಿ ಫ್ಯಾಷನ್ ಶೋ

ಮೈಸೂರು, ಮೇ 27(ಜಿಎ)–ಎ1 ಫ್ಯಾಷನ್ ವತಿಯಿಂದ ಜೂ.2ರಂದು ಸಂಜೆ 4 ಗಂಟೆಗೆ ನಗರದ ಮಹಾದೇವಪುರ ಮುಖ್ಯ ರಸ್ತೆಯಲ್ಲಿರುವ ಗ್ರೀನ್ ಫಿಂಚ್ ರೆಸಾರ್ಟ್‌ನಲ್ಲಿ 'ಮಾಡೆಲ್ ಆಫ್ ದಿ ಇಯರ್ 2024' ಫ್ಯಾಷನ್ ಶೋ ಆಯೋಜಿಸಲಾಗಿದೆ.

ಸಂಚಾಲಕ ವಿಜಯಕುಮಾರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಈ ವಿಷಯ ತಿಳಿಸಿ, ಫ್ಯಾಷನ್ ಶೋ ಎಂದರೆ ಸೆಲೆಬ್ರಿಟಿಗಳಿಗೆ ಮಾತ್ರ ಸೀಮಿತವಲ್ಲ, ಸಾಮಾನ್ಯರೂ ಪಾಲ್ಗೊಳ್ಳಬಹುದಾಗಿದೆ ಎಂಬ ಆಶಯದಿಂದ ಸಾಮಾನ್ಯ ಜನತೆಗಾಗಿ ಈ ಫ್ಯಾಷನ್ ಶೋ ಆಯೋಜಿಸಲಾಗಿದೆ. ಇದರಲ್ಲಿ ಖ್ಯಾತ ರೂಪದರ್ಶಿಗಳು ತೀರ್ಪುಗಾರರಾಗಿ ಪಾಲ್ಗೊಳ್ಳುತ್ತಿದ್ದಾರೆ. ಪಾರಂಪರಿಕ, ಪಾಶ್ಚಾತ್ಯ ಉಡುಗೆ ಸುತ್ತು, ಪ್ರಶ್ನೋತ್ತರ ಮೊದಲಾದ ಸುತ್ತುಗಳು ಇರಲಿವೆ. ವಿಜೇತರಿಗೆ ಟ್ರೋಫಿ, ಪ್ರಮಾಣಪತ್ರ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಯ್ಯದ್ ಇಸ್ಮಾಯಿಲ್ ಮಿರ್ಜಾ ಅಲಿ, ಶಹಬಾದ್ ಖಾನ್ ಇತರರಿದ್ದರು.

ಇಂದು ಶರಣ ಚಿಂತನ ಗೋಷ್ಠಿ

ಮೈಸೂರು, ಮೇ 27– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಮೈಸೂರು ಮತ್ತು ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಮೇ 28ರಂದು ಸಂಜೆ 7ರಿಂದ 9ರವರೆಗೆ ಆನ್‌ಲೈನ್ ಅರಿವಿನ ಮನೆ ಕಾರ್ಯಕ್ರಮದಲ್ಲಿ ಶರಣ ಚಿಂತನಗೋಷ್ಠಿ ಸಂಚಿಕೆ 8ನ್ನು ಹಮ್ಮಿಕೊಳ್ಳಲಾಗಿದೆ. ಶರಣ ಚಿಂತನ ಗೋಷ್ಠಿಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದೆಹಲಿ ಘಟಕದ ಅಧ್ಯಕ್ಷ ಎನ್.ಪಿ. ಚಂದ್ರಶೇಖರ್, 'ಬಸವಣ್ಣ–ಸಾಂಸ್ಕೃತಿಕ ನಾಯಕ' ಎಂಬ ವಿಷಯ ಕುರಿತು ಅನುಭವ ನೀಡಲಿದ್ದಾರೆ. ಎಲ್ಲಾ ಶರಣ ಬಂಧುಗಳು ಈಗಾಗಲೇ ವ್ಯಾಟ್ಸಾಪ್‌ಗೆ ಕಳುಹಿಸಲಾದ ಲಿಂಕ್ ಅನ್ನು ಬಳಸಿಕೊಂಡು ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳಲು ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ಕೋರಿದ್ದಾರೆ.

ಪರಿಷತ್‌ಗೆ ಅವಕಾಶ ಕಲ್ಪಿಸಲು ಕಾಂಗ್ರೆಸ್ ಮುಖಂಡ ಆರ್.ಸೋಮಸುಂದರ್ ಮನವಿ



ಮೈಸೂರು, ಮೇ 27–ವಿಧಾನಪರಿಷತ್‌ಗೆ ಅವಕಾಶ ಕಲ್ಪಿಸುವಂತೆ ಮೈಸೂರು ನಗರಪಾಲಿಕೆ ಮಾಜಿ ಕಾರ್ಪೊರೇಟರ್ ಮತ್ತು ಕಾಂಗ್ರೆಸ್ ಮುಖಂಡ ಆರ್.ಸೋಮಸುಂದರ್ ಮನವಿ ಮಾಡಿದ್ದಾರೆ.

ಈ ಸಂಬಂಧ ಈಗಾಗಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ತಮಗೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದಾರೆ.

ಪರಿಶಿಷ್ಟ ಜಾತಿಗೆ ಸೇರಿದ ಬೋವಿ ಸಮಾಜದ ತಮಗೆ ಟಿಕೆಟ್ ನೀಡುವ ಮೂಲಕ ಸಮುದಾಯಕ್ಕೆ ಅವಕಾಶ ಮಾಡಿಕೊಡುವಂತೆ ಕೋರಿರುವ ಅವರು ತಾವು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಪಕ್ಷ ಮತ್ತು ನಾಯಕರಿಗೆ ಗೌರವ ತರುವ ನಿಟ್ಟಿನಲ್ಲಿ ಕೆಲಸ ಮಾಡುವುದಾಗಿ ಕೋರಿದ್ದಾರೆ.

ಇಂದು ಮೃಗಾಲಯ ವೀಕ್ಷಣೆಗೆ ಅವಕಾಶ



ಮೈಸೂರು, ಮೇ 27–ಬೇಸಿಗೆ ರಜೆ ಪ್ರಯುಕ್ತ ಪ್ರವಾಸಿಗರು, ಜನಸಾಮಾನ್ಯರು ಹಾಗೂ ಸ್ಥಳೀಯರಿಗೆ ಮೃಗಾಲಯವನ್ನು ವೀಕ್ಷಿಸಲು ಅನುವಾಗುವಂತೆ, ಮೇ 28ರಂದು ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆದಿರಲಾಗುವುದು ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಧಕರಿಗೆ ಚಾಣಕ್ಯ ಸೇವಾರತ್ನ ಪ್ರಶಸ್ತಿ ಪ್ರದಾನ



ಮೈಸೂರು, ಮೇ 27–ಸಮಾಜ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮುಖ್ಯವಾಗಿದೆ. ಆರ್ಥಿಕವಾಗಿ ದುರ್ಬಲರಾದ ಬಡವರು ಹಾಗೂ ಸಮಾಜದ ಏಳ್ಗೆಗೆ ಅದ್ಯತೆ ಇರಲಿ. ಈ ದಿಸೆಯಲ್ಲಿ ಕೆಎಂಪಿಕೆ ಟ್ರಸ್ಟ್ ತನ್ನ ವಿಶಿಷ್ಟ ಸೇವೆಗಳ ಮೂಲಕ ಮೈಸೂರು ನಗರದಲ್ಲಿ ಮಹತ್ವದ ಸ್ಥಾನ ಪಡೆದಿದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ 18ನೇ ವರ್ಷದ ವಾರ್ಷಿಕೋತ್ಸವದ ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಚಾಣಕ್ಯ ಸೇವಾರತ್ನ ಪ್ರಶಸ್ತಿಗೆ ಭಾಜನರಾದ ಕೆ.ಬಿ.ಲಿಂಗರಾಜು (ಕ್ರೈಗಾರಿಕಾ ಕ್ಷೇತ್ರ), ಡಾ.ವೈ.ಡಿ.ರಾಜಣ್ಣ (ಸಾಹಿತ್ಯ), ಆರ್.ಕೃಷ್ಣ (ಮಾಧ್ಯಮ), ಶ್ರೀಧರ್ ಸಿ.ಎಂ. (ಸೈನಿಕ), ಶಿವಪ್ರಸಾದ್ (ಆರೋಗ್ಯ), ರಶ್ಮಿ (ಆರೋಗ್ಯ), ಅಮ್ಮ ರಾಮಚಂದ್ರ (ಜನಪದ), ಡಾ.ಕವಿತಾ ಮಠದ (ಶಿಕ್ಷಣ), ಮಲ್ಲೇಶ್ (ಆರೋಗ್ಯ), ಶೋಭಾ (ರೂಪದರ್ಶಿ) ಅವರಿಗೆ ಚಾಣಕ್ಯ ಸೇವಾರತ್ನ ಪ್ರಶಸ್ತಿ ನೀಡಿ, ಗೌರವಿಸಿದರು.

ನಂತರ ಮಾತನಾಡಿದ ಅವರು, ಸದೃಢ ಸಮಾಜ ನಿರ್ಮಾಣಕ್ಕೆ ಯುವಕರು ಪಣತೊಡಬೇಕು. ಪ್ರಾಮಾಣಿಕ ಸಮಾಜ ಸೇವೆ ಮಾಡುವಂತಹ ಸಂಘಟನೆಗಳು ಹುಟ್ಟುವುದು ಅಗತ್ಯವಾಗಿದೆ. ಸಾಮಾಜಿಕ ಅಸಮಾನತೆ ಹೋಗಲಾಡಿಸುವುದು ಮುಖ್ಯ ಎಂದರು.

ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಂಸ್ಥೆಗಳು ಬರೀ ಲೆಟ್ರೀಡ್‌ಗೆ ಸೀಮಿತಗೊಂಡಿದ್ದು, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ 18 ವರ್ಷಗಳಿಂದ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ಸಾಮಾಜಿಕವಾಗಿ ಸಕಲ ಜೀವರಾಶಿಗಳಿಗೆ ಸೇವೆ ಸಲ್ಲಿಸುತ್ತಿದೆ ಎಂದರು. ಡಾ.ವೈ.ಡಿ.ರಾಜಣ್ಣ, ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿದರು. ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಉದ್ಯಮಿ ಸ್ವೀಟ್ ಮಹೇಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಅಜಯ್ ಶಾಸ್ತ್ರಿ, ಪ್ರಕಾಶ್ ಪ್ರಿಯದರ್ಶನ್, ರೇಖಾ ಶ್ರೀನಿವಾಸ್, ವಿದ್ಯಾ, ದೀಪ, ಬೈರತಿ ಲಿಂಗರಾಜು, ಮಂಜುನಾಥ್, ಸಚಿಂದ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಎಸ್.ಸಿ.ಬಸವರಾಜು ಅವರಿಗೆ ಎಂಎಲ್‌ಸಿ ಟಿಕೆಟ್ ನೀಡುವಂತೆ ಕಾಂಗ್ರೆಸ್ ನಾಯಕರಿಗೆ ಮನವಿ

ಮೈಸೂರು, ಮೇ 27(ಜಿಎ)–ನಾಯಕ ಸಮುದಾಯದ ಮುಖಂಡರಾದ ಎಸ್.ಸಿ. ಬಸವರಾಜು ಅವರಿಗೆ ಪರಿಶಿಷ್ಟ ಪಂಗಡಗಳ ಕೋಟಾದಡಿ ಕಾಂಗ್ರೆಸ್ ಪಕ್ಷ ವಿಧಾನ ಪರಿಷತ್ ಚುನಾವಣೆಯಲ್ಲಿ ಟಿಕೆಟ್ ನೀಡಬೇಕು ಎಂದು ಕರ್ನಾಟಕ ರಾಜ್ಯ ನಾಯಕರ ಯುವಸೇನೆ ಸಮಿತಿ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯಾಧ್ಯಕ್ಷ ದೇವರಾಜು ಟಿ.ಕಾಟೂರು ಮಾತನಾಡಿ, ಎಸ್.ಸಿ.ಬಸವರಾಜು ಅವರು ಪ್ರಾಮಾಣಿಕವಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ 10 ವರ್ಷಗಳಿಂದ ಉಡುಪಿ, ಚಾಮರಾಜನಗರ ಜಿಲ್ಲೆಗಳ ಉಸ್ತುವಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಹಳೇ ಮೈಸೂರು ಭಾಗದಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ ಜಿಲ್ಲೆಗಳಲ್ಲಿ ನಾಯಕ ಸಮಾಜದ ಹಿಂದುಳಿದ ವರ್ಗಗಳ ಪರವಾಗಿ ಹೋರಾಟ ಮತ್ತು ಸಂಘಟನೆಯನ್ನು ಮಾಡಿಕೊಂಡು ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ್ದಾರೆ ಎಂದರು. ಎಸ್.ಸಿ.ಬಸವರಾಜು ಅವರಿಗೆ ಪರಿಷತ್ ಸದಸ್ಯರಾಗಿ ಅವಕಾಶ ಮಾಡಿಕೊಟ್ಟರೆ ಮೈಸೂರು ಪ್ರಾಂತ್ಯದ ನಾಯಕ ಸಮಾಜ ಕಾಂಗ್ರೆಸ್ ಜೊತೆ ನಿಲ್ಲಲಿದೆ. ಹೀಗಾಗಿ ಇವರಿಗೆ ಪರಿಷತ್ ಸದಸ್ಯರನ್ನಾಗಿ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಹೈಕಮಾಂಡ್‌ಗೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅಹಿಂದ ಮುಖಂಡ ಎಸ್.ಆರ್.ರವಿಕುಮಾರ್, ದಲಿತ ವಿದ್ಯಾರ್ಥಿ ಒಕ್ಕೂಟದ ಸಚಿನ್, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ನೃಪತುಂಗ ಇನ್ನಿತರರು ಹಾಜರಿದ್ದರು.

ಕಾಳಿಹುಂಡಿ ಶಿವಕುಮಾರ್‌ಗೆ 'ಕರುನಾಡಿನ ಸ್ವರ ಮಧುರ' ಪ್ರಶಸ್ತಿ



ಮೈಸೂರು: ಬೆಂಗಳೂರಿನ ಝೇಂಕಾರ ಸ್ವರ ಮಧುರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸಂಸ್ಥೆಯು 'ಬುದ್ಧ ಜಯಂತಿ' ಪ್ರಯುಕ್ತ ವಾಟ್ಸಾಪ್ ಬಳಗದಲ್ಲಿ ನಡೆಸಿದ 'ಭಕ್ತಿ ಗೀತೆ' ಗಾಯನದಲ್ಲಿ ಭಾಗವಹಿಸಿ, ಅತ್ಯುತ್ತಮ ಸ್ಥಾನದೊಂದಿಗೆ 'ಕರುನಾಡಿನ ಸ್ವರ ಮಧುರ' ಪ್ರಶಸ್ತಿಯನ್ನು ಲೇಖಕ, ವಿಮರ್ಶಕ ಕಾಳಿಹುಂಡಿ ಶಿವಕುಮಾರ್ ಪಡೆದುಕೊಂಡಿದ್ದಾರೆ. ಈ ಸಂಸ್ಥೆಯು ಹಬ್ಬ ಹರಿದಿನ, ವಿಶೇಷ ಜಯಂತಿ ಇನ್ನಿತರ ಸಂದರ್ಭಗಳಲ್ಲಿ ಅನೇಕ ಸ್ಪರ್ಧೆಗಳನ್ನು ಆಯೋಜಿಸುತ್ತಾ ಗಾಯನ ಪ್ರತಿಭೆಗಳನ್ನು ಗುರುತಿಸುತ್ತಿದೆ. ಈಗಾಗಲೇ ಹಲವು ಜಿಲ್ಲೆಗಳಲ್ಲಿ ಅತ್ಯುತ್ತಮ ಗಾಯಕರನ್ನು ಆಯ್ಕೆ ಮಾಡಿ ಪ್ರೋತ್ಸಾಹಿಸುತ್ತಿದೆ.

ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪ್ರದಾನ

ಮೈಸೂರು, ಮೇ 27(ಎಸ್‌ಪಿಎನ್)– ರಾಜ್ಯಮಟ್ಟದ 'ಮುಳ್ಳೂರು ನಾಗರಾಜ ಕಾವ್ಯ' ಪ್ರಶಸ್ತಿಯನ್ನು ತಿ.ನರಸೀಪುರದ ಕವಿ ಎಂ.ಜವರಾಜ್ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಯೋಜಿತ ಅಧ್ಯಕ್ಷ ಡಾ.ಎಲ್. ಎನ್.ಮುಕುಂದರಾಜು ಪ್ರದಾನ ಮಾಡಿದರು.

ಮೈಸೂರಿನ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರು ನೆಲೆ ಹಿನ್ನೆಲೆ, ಚಾಮರಾಜನಗರ ರಂಗವಾಹಿನಿ ಹಾಗೂ ರಾಮಮನೋಹರ ಲೋಹಿಯಾ ಟ್ರಸ್ಟ್ ಸಹಯೋಗದೊಂದಿಗೆ 12ನೇ ವರ್ಷದ ರಾಜ್ಯಮಟ್ಟದ ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪ್ರದಾನ ಹಾಗೂ ಹಿರಿಯ ಪತ್ರಕರ್ತ ರಾಜಶೇಖರ ಕೋಟಿ ಸ್ಮರಣಾರ್ಥ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಮುಳ್ಳೂರು ನಾಗರಾಜ ಅವರನ್ನು ಹತ್ತಿರದಿಂದ ನೋಡಿಲ್ಲ. ಆದರೆ, ಹಿರಿಯ ಸಾಹಿತಿ ದೇವನೂರ ಮಹದೇವ ರಚಿತ ಕುಸುಮಬಾಲೆಯಲ್ಲಿ ಇವರ ಪಾತ್ರವನ್ನು ಓದಿದ್ದೇನೆ. ಅಲ್ಲದೆ, ಅವರು, ಶೋಷಿತರ ಪರವಾಗಿ ಸಾಕಷ್ಟು ಹೋರಾಟ ಮಾಡಿರುವ ಕುರಿತು ಪತ್ರಿಕೆಗಳಲ್ಲಿ ಓದಿದ್ದೇನೆ. ಆದರೆ, ಮುಳ್ಳೂರು ನಾಗರಾಜ ರಚಿತ 'ನೆಲದ ಜೋಗುಳ' ಮತ್ತು 'ಏಕಾಂಗಿ ಏಕಲವ್ಯ' ಮಹಾಕಾವ್ಯವನ್ನು ಒಳಗೊಂಡಿದೆ. ರಾಮಾಯಣದ ಶಂಬೂಕ, ಮಹಾಭಾರತದ ಏಕಲವ್ಯರನ್ನು ಕೇಂದ್ರವಾಗಿಟ್ಟುಕೊಂಡು ರಚನೆಗೊಂಡಿರುವ ಈ ಮಹಾಕಾವ್ಯಗಳು ದಮನಿತ ಸಮುದಾಯಗಳ ಶೋಷಣೆಯ ಬದುಕಿನ ಹಲವು ಆಯಾಮಗಳನ್ನು ಕಟ್ಟಿಕೊಡುತ್ತವೆ. ಅದರಲ್ಲಿ 'ನೆಲದ ಜೋಗುಳ' ಕೃತಿಯನ್ನು ಓದಿದ್ದೇನೆ ಎಂದರು.



ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿಯನ್ನು ತಿ.ನರಸೀಪುರದ ಕವಿ ಎಂ.ಜವರಾಜ್ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಯೋಜಿತ ಅಧ್ಯಕ್ಷ ಡಾ.ಎಲ್.ಎನ್.ಮುಕುಂದರಾಜು ಪ್ರದಾನ ಮಾಡಿದರು.

ಹಿರಿಯ ಪತ್ರಕರ್ತ ರಾಜಶೇಖರ ಕೋಟಿ ಅವರನ್ನು ಒಮ್ಮೆ ನಮ್ಮ ಸ್ನೇಹಿತರೆಲ್ಲಾ ಸೇರಿ ಮೈಸೂರಿನಲ್ಲಿ ಭೇಟಿ ಮಾಡಿದ್ದೆವು. ಆ ಸಂದರ್ಭದಲ್ಲಿ ಮಾನವೀಯತೆಗೆ ಸಂಬಂಧಿಸಿದ ವರದಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅವರು ತೆಗೆದುಕೊಳ್ಳುತ್ತಿದ್ದ ಪ್ರಸಂಗವೊಂದನ್ನು ಹತ್ತಿರದಿಂದ ಗಮನಿಸಿದಾಗ ಅವರೊಬ್ಬ ಮಾನವೀಯತೆ ಮೈಗೂಡಿಸಿಕೊಂಡ ನೈಜ ಪತ್ರಕರ್ತ ಎಂಬುದು ತಿಳಿಯುತ್ತದೆ ಎಂದು ಬಣ್ಣಿಸಿದರಲ್ಲದೆ, ಹಿರಿಯ ಬರಹಗಾರ ಮುಳ್ಳೂರು ನಾಗರಾಜ ಹಾಗೂ ಹಿರಿಯ ಪತ್ರಕರ್ತ ರಾಜಶೇಖರ ಕೋಟಿ ಅವರು ಸಮುದಾಯಕ್ಕೆ ಸಲ್ಲಿಸಿರುವ ಸೇವೆ ಅಪಾರ. ಇವರಿಬ್ಬರನ್ನು ಇಂದು ಸ್ಮರಣೆ ಮಾಡುತ್ತಿರುವುದು ಸ್ವಾಗತಾರ್ಹ ಎಂದರು.

ಬೆಂಗಳೂರು ಪ್ರದೇಶಾಭಿವೃದ್ಧಿ ಮಂಡಳಿ ನಿರ್ದೇಶಕ ಡಿ.ಚಂದ್ರಶೇಖರಯ್ಯ ಮಾತನಾಡಿ, ನಾನು ಚಾಮರಾಜನಗರ ತಾಪಂ ಇಓ ಆಗಿ ಕೆಲಸ ಮಾಡುತ್ತಿದ್ದಾಗ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಹಿರಿಯ ಬರಹಗಾರ ಮುಳ್ಳೂರು ನಾಗರಾಜ ಅವರನ್ನು ಆಹ್ವಾನಿಸಿದ್ದೆ. ಕಾರ್ಯಕ್ರಮ ಮುಗಿದ ನಂತರ ಅವರನ್ನು ಮಾತಿಗೆಳೆದಾಗ ಅವರಲ್ಲಿದ್ದ ದಮನಿತರ ಕುರಿತಾದ ನೈಜ ಕಳಕಳಿ ಕಂಡು ನನ್ನಲ್ಲಿ ಅವರ ಮೇಲೆ ಮತ್ತಷ್ಟು ಪೂಜ್ಯನೀಯ ಭಾವನೆ ಇಮ್ಮಡಿಗೊಂಡಿತು ಎಂದರು.

ಇನ್ನು ಹಿರಿಯ ಪತ್ರಕರ್ತ ರಾಜಶೇಖರ ಕೋಟಿ ಅವರು 1980ರ ದಶಕದಲ್ಲಿ ಪ್ರಾದೇಶಿಕ ಪತ್ರಿಕೆಗಳನ್ನು ತೆರೆದು ಆ ಮೂಲಕ ಶೋಷಿತರ ಪರವಾಗಿ ದನಿಗೂಡಿಸಿದರು. ಇಂದು ಅವರು ಬದುಕಿದ್ದರೆ, ಹಾಸನದ ಪೆನ್‌ಡ್ರೈವ್ ಪ್ರಕರಣಕ್ಕೆ ಒತ್ತು ನೀಡಿ ನೊಂದ ಮಹಿಳೆಯರಿಗೆ ಬೆಂಬಲವಾಗಿ ನಿಲ್ಲುತ್ತಿದ್ದರು. ಆದರೆ, ಇಂದಿನ ಪತ್ರಕರ್ತರು ನೊಂದವರ ನೋವು ಅರಿಯದೇ ಇರುವುದು ಬೇಸರ ಸಂಗತಿ ಎಂದರು.

> ಓರ್ವ ವ್ಯಕ್ತಿ ಸಮುದಾಯ ಸೇವೆ ಮಾಡಲು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದಾಗ ಮಾತ್ರ ಸಮುದಾಯ ಗುರುತಿಸುತ್ತದೆ ಎಂಬುದಕ್ಕೆ ಇಂದಿನ ಸಮಾರಂಭವೇ ಸಾಕ್ಷಿ. 'ನೆಲದ ಜೋಗುಳ', 'ಏಕಾಂಗಿ ಏಕಲವ್ಯ' ಸೇರಿದಂತೆ ಇತರೆ ಪುಸ್ತಕಗಳನ್ನು ಓದಿದಾಗ ಶೋಷಿತ ಏಳಿಗೆಗಾಗಿ ಹಮ್ಮಿಕೊಂಡಿದ್ದ ಹಲವು ಹೋರಾಟಗಳ ಮೂಲಕ ಮುಳ್ಳೂರು ನಾಗರಾಜ ಅವರು ಕಂಡಿದ್ದ ಕನಸುಗಳನ್ನು ಕಾಣಬಹುದು.
>
> –ಮುಕುಂದರಾಜು

ಈ ವೇಳೆ ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ಆರ್.ರಾಜು, ವಿಶ್ರಾಂತ ಕುಲಪತಿ ಪ್ರೊ.ಮಹದೇವ, ರಾಜ್ಯ ಪ್ರಶಸ್ತಿ ಪುರಸ್ಕೃತ ಸುಬ್ಬುಹೊಲೆಯಾರ್, ಒಡನಾಡಿಯ ಸ್ಟ್ಯಾನ್ಲಿ, ನೆಲೆ ಹಿನ್ನೆಲೆ ಕೆ.ಆರ್.ಗೋಪಾಲಕೃಷ್ಣ, ಚಾಮರಾಜನಗರ ರಂಗವಾಹಿನಿ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಪತ್ರಕರ್ತರಾದ ರಶ್ಮಿ ಕೋಟಿ, ದಸಂಸ ಮುಖಂಡ ಮಲೆಯೂರು ಸೋಮಯ್ಯ ಸೇರಿದಂತೆ ಇತರರಿದ್ದರು. ಇದೇ ವೇಳೆ ಮಿಸೆಸ್ ಅಂಬೇಡ್ಕರ್ ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮನಸೆಳೆಯಿತು.

ತಲಕಾವೇರಿಯಲ್ಲಿ ಸಿಎನ್‌ಸಿ ವಿಶೇಷ ಪೂಜೆ



ಕೊಡವ ಜನಾಂಗದ ಯೋಗಕ್ಷೇಮಕ್ಕಾಗಿ ತಲಕಾವೇರಿಯಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮಡಿಕೇರಿ, ಮೇ 27–ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತತೆ, ಎಸ್‌ಟಿ ಟ್ಯಾಗ್, ಕೊಡವರ ಅಂತರಿಕ ರಾಜಕೀಯ ಸ್ವಯಂ ನಿರ್ಣಯದ ಹಕ್ಕುಗಳನ್ನು ಮಾನ್ಯ ಮಾಡುವುದು ಸೇರಿದಂತೆ ಇಡೀ ಕೊಡವ ಜನಾಂಗದ ಯೋಗಕ್ಷೇಮಕ್ಕಾಗಿ ತಲಕಾವೇರಿ ಮತ್ತು ಪಾಡಿ ಶ್ರೀಇಗ್ಗುತ್ತಪ್ಪ ದೇವಾಲಯದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥಿಸಲಾಯಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಕೊಡವರ ಪವಿತ್ರ ತೀರ್ಥಕ್ಷೇತ್ರ ತಲಕಾವೇರಿ ಹಾಗೂ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದ ಪ್ರಮುಖರು, ಕೊಡವ ಜನಾಂಗದ ಅಭ್ಯುದಯಕ್ಕೆ ಆಶೀರ್ವದಿಸುವಂತೆ ಕೋರಿದರು.

ಭೂಪರಿವರ್ತನೆ ವಿರುದ್ಧ ಜನಜಾಗೃತಿ: ಸಿದ್ದಾಪುರದ 2400 ಎಕರೆ ಖಾಸಗಿ ಕಾಫಿ ತೋಟದ ಭೂ ಪರಿವರ್ತನೆ ಸೇರಿದಂತೆ ಕೊಡಗು ಜಿಲ್ಲಾದ್ಯಂತ ನಡೆಯುತ್ತಿರುವ ಭೂಪರಿವರ್ತನೆಗಳ ವಿರುದ್ಧ ಜೂ.3 ರಿಂದ ಜಿಲ್ಲಾ ವ್ಯಾಪಿ ಸಿಎನ್‌ಸಿ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಎನ್.ಯು.ನಾಚಪ್ಪ ಇದೇ ಸಂದರ್ಭ ತಿಳಿಸಿದರು.

ಮಡಿಕೇರಿ, ಸುಂಟಿಕೊಪ್ಪ, ಮಾದಾಪುರ, ಚೆಟ್ಟಳ್ಳಿ, ಚೇರಂಬಾಣೆ, ಮೂರ್ನಾಡು, ಕಕ್ಕಬೆ, ನಾಪೋಕ್, ವಿರಾಜಪೇಟೆ, ಸಿದ್ದಾಪುರ, ಗೋಣಿಕೊಪ್ಪ, ತಿತಿಮತಿ, ಪಾಳಿಬೆ ಪೊನ್ನಂಪೇಟೆ, ಹುದಿಕೇರಿ, ಕುಟ್ಟ, ಶ್ರೀಮಂಗಲ, ಟಿ.ಶೆಟ್ಟಿಗೇರಿ, ಬಿರುನಾಣಿಯಲ್ಲಿ ಶಾಂತಿಯುತ ಮಾನವ ಸರಪಳಿ ಕಾರ್ಯಕ್ರಮ ನಡೆಸಲಾಗುವುದು. ಜೂ.3ರಂದು ಬಿರುನಾಣಿ, ಜೂ.10ರಂದು ಬಾಳೆಲೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಮುಂದಿನ ಕಾರ್ಯಕ್ರಮದ ಸ್ಥಳ ಮತ್ತು ದಿನಾಂಕವನ್ನು ಪ್ರಕಟಿಸಲಾಗುವುದು ಎಂದರು.

ಭೂಪರಿವರ್ತನೆಯ ಮೂಲಕ ಬೃಹತ್ತಾಕಾರದ ವಿಲ್ಲಾಗಳು, ಮೆಗಾ ಟೌನ್‌ಶಿಪ್‌ಗಳು ಮತ್ತು ಮನೆ ನಿವೇಶನಗಳನ್ನು ನಿರ್ಮಿಸಲು ಅವಕಾಶ ನೀಡಲಾಗುತ್ತಿದೆ. ಯುನೆಸ್ಕೋದ ವಿಶ್ವ ಪರಂಪರೆಯ ತಾಣದಿಂದ ತಡಿಯಂಡಮೋಲ್ ವ್ಯಾಪ್ತಿಯಲ್ಲಿ 300 ಎಕರೆ ಕಾಫಿ ತೋಟ, ಮಕ್ಕಂದೂರಿನ ಪ್ರಧಾನ ಘಟ್ಟಗಳ ವಲಯದಲ್ಲಿ ಅಕ್ರಮವಾಗಿ ರೆಸಾರ್ಟ್ ನಿರ್ಮಿಸಲಾಗಿದೆ. ಜಿಲ್ಲಾಡಳಿತದ ಸಹಯೋಗದೊಂದಿಗೆ ಉದ್ಯಮಿಯೊಂದಿಗೆ ವಸತಿ ಕಾಲೋನಿಯನ್ನು ಅಭಿವೃದ್ಧಿಪಡಿಸಲಾಗಿದೆ ನಿರ್ದಿಷ್ಟವಾಗಿ ಗಾಳಿಬೀಡಿನ ಹುಲಿ ಬೆಲ್ಟ್ ಪ್ರದೇಶದಲ್ಲಿ ಮತ್ತು ಬಿಟ್ಟಾಂಗಲ ಟ್ಯಾಗ್ಲಿಯಾಗಿ ಕೊಡಗಿನಾದ್ಯಂತ ಎಲ್ಲಾ ಕುಗ್ರಾಮಗಳು ಮತ್ತು ಹಳ್ಳಿಗಳು ನಾಶವಾಗುತ್ತಿವೆ. ಇದು ನಮ್ಮ ಪವಿತ್ರ ಭೂದೃಶ್ಯವನ್ನು ನಾಶಪಡಿಸುತ್ತಿದ್ದು, ಈ ಮಣ್ಣು ಆಗಿಯುವ ಕೆಲಸದಲ್ಲಿ ನಮ್ಮ ಬಹುವಾರ್ಷಿಕ ಜಲಮೂಲಗಳ ನರ ಕೇಂದ್ರಗಳು ಈಗಾಗಲೇ ಮುಚ್ಚಿವೆ ಎಂದು ನಾಚಪ್ಪ ಆರೋಪಿಸಿದರು.

ಈ ಸಂದರ್ಭ ಪಟ್ಟಮಾಡ ಕುಶ, ಚಂಬಂಡ ಜನತ್, ಮಂದಪಂಡ ಮನೋಜ್, ಕಾಂಡೇರ ಸುರೇಶ್, ಬೇಪಡಿಯಂಡ ಬಿದ್ದಪ್ಪ, ಬಾಚಮಂಡ ರಾಜ ಪೂವಣ್ಣ, ಬೇಪಡಿಯಂಡ ದಿನು, ಪಾರ್ವಂಗಡ ನವೀನ್, ನಂದಿನೆಟ್ಟಿರ ರವಿ, ಇತರರು ಉಪಸ್ಥಿತರಿದ್ದರು.

ಪ್ರಕೃತಿ ವಿಕೋಪ, ನೀರು ಪೂರೈಕೆಗೆ ಚರ್ಚೆ

ಎಸಿ ವಿನಾಯಕ ನರ್ವಾಡೆ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ಸಭೆ



ಮಡಿಕೇರಿ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಯಿತು.

ಮಡಿಕೇರಿ, ಮೇ27–ಮುಂಗಾರು ಮಳೆ ಹಿನ್ನೆಲೆಯಲ್ಲಿ ಪ್ರಕೃತಿ ವಿಕೋಪ ಎದುರಿಸುವುದು ಹಾಗೂ ಶುದ್ಧ ಕುಡಿಯುವ ನೀರು ಪೂರೈಕೆ ಸಂಬಂಧ ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ಸಭೆ ಸೋಮವಾರ ನಡೆಯಿತು.

ನಗರದ ಉಪವಿಭಾಗಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಡಿಕೇರಿ ತಾಲೂಕಿನಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವುದು, ಪ್ರವಾಹ ಪೀಡಿತ ಹಾಗೂ ಭೂಕುಸಿತ ಪ್ರದೇಶದಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಸೇರಿದಂತೆ ಮತ್ತಿತರ ಸಂಬಂಧ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಪ್ರತಿ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳು ಆಯಾಯ ವ್ಯಾಪ್ತಿ ಶುದ್ಧ ಕುಡಿಯುವ ನೀರು ಪೂರೈಸಬೇಕು. ಜೊತೆಗೆ ಪ್ರತಿನಿತ್ಯ ಕುಡಿಯುವ ನೀರನ್ನು ಪರೀಕ್ಷೆ ಮಾಡಬೇಕು. ಹಾಗೆಯೇ ಮುಂದಿನ ದಿನಗಳಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆ ಇದ್ದು, ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮುಂಚಿತವಾಗಿ ಮಾಹಿತಿ ನೀಡಿ, ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಬೇಕು ಎಂದು ಉಪವಿಭಾಗಾಧಿಕಾರಿ ನಿರ್ದೇಶನ ನೀಡಿದರು.

ಮುಂಗಾರು ಸಂದರ್ಭದಲ್ಲಿ ಎಲ್ಲಾ ಹಂತದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು, ಕರ್ತವ್ಯ ನಿರ್ವಹಿಸಬೇಕು. ಇಲ್ಲಿನ ಸ್ಥಳೀಯ ಸಮಸ್ಯೆಗಳನ್ನು ಅರಿತು ಕಾರ್ಯನಿರ್ವಹಿಸಬೇಕು ಎಂದು ವಿನಾಯಕ ನರ್ವಾಡೆ ಸೂಚಿಸಿದರು.

ಸಭೆಯಲ್ಲಿ ತಹಶೀಲ್ದಾರ್ ರಮೇಶ್ ಬಾಬು, ತಾಲೂಕು ನೋಡಲ್ ಅಧಿಕಾರಿಗಳಾದ ಶೇಖರ್, ಗಿರೀಶ್, ವಿನಯ ಕುಮಾರ್, ಭೂದಾಖಲೆಗಳ ಸಹಾಯಕ ನಿರ್ದೇಶಕ ವಿರೂಪಾಕ್ಷ, ತಾಲೂಕು ವೈದ್ಯಾಧಿಕಾರಿ ಚೇತನ್, ತಾಪಂ ಇಒ ನಾಗಮಣಿ, ಪೌರಾಯುಕ್ತ ವಿಜಯ್, ಸಿಡಿಪಿಒ ಸೀತಾಲಕ್ಷ್ಮಿ, ಕುಡಿಯುವ ನೀರು ವಿಭಾಗದ ಎಇಇ ಹರ್ಷದ್ ಪಾಷಾ, ಹೋಬಳಿ ಮಟ್ಟದ ಕಂದಾಯ ನಿರೀಕ್ಷಕರು ಇತರರಿದ್ದರು.

ಸಂಗಡಿಗನನ್ನು ಕೊಲೆ ಮಾಡಿದ ನಾಲ್ವರ ಬಂಧನ



ಕೃಷ್ಣ



ಲೋಕೇಶ್,



ಹರೀಶ್

ವಿರಾಜಪೇಟೆ: ಹಣಕಾಸು ಹಂಚಿಕೆ ವಿಚಾರದಲ್ಲಿ ಸಂಗಡಿಗನನ್ನು ಕೊಲೆ ಮಾಡಿದ್ದ ನಾಲ್ವರು ಆರೋಪಿಗಳನ್ನು ವಿರಾಜಪೇಟೆ ನಗರ ಠಾಣೆ ಪೊಲೀಸರು ಭಾನುವಾರ ಸಂಜೆ ಬಂಧಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕಿನ ಬಾವಲಿಯ ಜೇನು ಕುರುಬರ ಕೃಷ್ಣ, ಲೋಕೇಶ್, ಹರೀಶ್ ಹಾಗೂ ಬಾಲಕ ಬಂಧಿತರು. ಈ ನಾಲ್ವರು ಮೇ 22ರಂದು ಅದೇ ಜನಾಂಗದ ರಮೇಶ್(39)ನನ್ನು ಕೊಲೆ ಮಾಡಿದ್ದರು.

ಗೋಣಿಕೊಪ್ಪಲು ಬಳಿಯ ದೇವರಪುರದಲ್ಲಿ ನಡೆದ ಬೇಡು (ಕುಂಡೆ)ಹಬ್ಬ ಅಂಗವಾಗಿ 22ರಂದು ವಿರಾಜಪೇಟೆಯಲ್ಲಿ ಎಲ್ಲರೂ ವಿವಿಧ ವೇಷಭೂಷಣ ಧರಿಸಿ, ನೃತ್ಯ ಪ್ರದರ್ಶಿಸಿ ಅಂಗಡಿಮುಂಗಟ್ಟು ಹಾಗೂ ಸಾರ್ವಜನಿಕರಿಂದ ಹಣ ಬೇಡಿದ್ದರು.

ನಂತರ ಅದೇ ರಾತ್ರಿ ಇಲ್ಲಿನ ಖಾಸಗಿ ಬಸ್ ನಿಲ್ದಾಣದಲ್ಲಿ ಬೇಡಿದ್ದ ಹಣಕಾಸಿನ ಹಂಚಿಕೆ ವಿಚಾರವಾಗಿ ಗಲಾಟೆ ನಡೆದಿದೆ. ಈ ವೇಳೆ ರಮೇಶ್‌ನನ್ನು ಕೊಲೆ ಮಾಡಿ ನಾಲ್ವರು ಪರಾರಿಯಾಗಿದ್ದರು. ಮೇ 23ರಂದು ಮುಂಜಾನೆ ಸ್ಥಳೀಯ ಅಂಗಡಿಯವರಿಗೆ ಶವ ಪತ್ತೆಯಾಗಿದೆ. ಸ್ಥಳೀಯರು ಕೂಡಲೇ ಪೊಲೀಸರಿಗೆ ತಿಳಿಸಿದ್ದಾರೆ. ಬಳಿಕ ಸ್ಥಳಕ್ಕೆ ಆಗಮಿಸಿದ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಸಂಶಯಾಸ್ಪದ ಸಾವಿನ ಪ್ರಕರಣ ದಾಖಲಿಸಿಕೊಂಡಿದ್ದರು.

ಆದರೆ, ಮೃತ ರಮೇಶನ ಪತ್ನಿ ಭಾವನಿ ನನ್ನ ಗಂಡನನ್ನು ಕೊಲೆ ಮಾಡಲಾಗಿದೆ ಎಂದು ವಿರಾಜಪೇಟೆ ನಗರ ಠಾಣೆಗೆ ದೂರು ನೀಡಿದ್ದರು. ಬಳಿಕ ಕೃಷ್ಣ, ಲೋಕೇಶ್, ಹರೀಶ್ ಹಾಗೂ ಬಾಲಕನೋರ್ವನನ್ನು ಪೊಲೀಸ್ ಠಾಣಾಧಿಕಾರಿ ರವೀಂದ್ರ, ಬಂಧಿಸಿ, ವಿಚಾರಿಸಿದಾಗ ಕೊಲೆ ಮಾಡಿರುವುದು ತಿಳಿದಿದೆ. ನಂತರ ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಯಿತು.

ಮನೆಗಳ್ಳನ ಬಂಧನ; 45 ಗ್ರಾಂ ಚಿನ್ನಾಭರಣ ವಶ

ಮಡಿಕೇರಿ, ಮೇ 27– ಮನೆ ಹಾಗೂ ದೇವಾಲಯದ ಹುಂಡಿ ಕಳ್ಳತನ ಮಾಡಿದ್ದ ಆರೋಪಿಯನ್ನು ಸೋಮವಾರ ಬಂಧಿಸಿರುವ ಶನಿವಾರಸಂತೆ ಪೊಲೀಸರು, 45 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಸುಳುಗಳಲೆ ಗ್ರಾಮದ ನಿವಾಸಿ ಜೀವನ್ (25) ಬಂಧಿತ ಆರೋಪಿ. ಸುಳುಗಳಲೆ ಗ್ರಾಮದ ಕಾಲೋನಿ ನಿವಾಸಿ ಬಿ.ಕೆ.ಸುಂದರ್ ಅವರು ಮೇ 24ರಂದು ತಮ್ಮ ಮನೆಗೆ ಬೀಗ ಹಾಕಿಕೊಂಡು ಕೆಲಸಕ್ಕೆ ತೆರಳಿದರು. ಈ ವೇಳೆ ಮಧ್ಯಾಹ್ನ 12.30ಕ್ಕೆ ಇವರ ಮಗಳು ಮನೆಗೆ ಬಂದು ನೋಡಿದಾಗ ಬೀರುವನ್ನು ಒಡೆದು ಹಾಕಿ ಅದರಲ್ಲಿ ಇದ್ದ 51.5 ಗ್ರಾಂ ಚಿನ್ನಾಭರಣ ಕಳುವಾಗಿತ್ತು.

ಈ ಸಂಬಂಧ ಶನಿವಾರಸಂತೆ ಪೊಲೀಸ್ ಠಾಣೆಗೆ ಸುಂದರ್ ದೂರು ನೀಡಿದ್ದರು. ಸೋಮವಾರ ಜೀವನ್‌ನನ್ನು ಬಂಧಿಸಿರುವ ಪೊಲೀಸರು, 45 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡು ಆತನನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಈತ ಫೆಬ್ರವರಿ 11ರಂದು ಶನಿವಾರಸಂತೆಯ ತ್ಯಾಗರಾಜ ಕಾಲೋನಿಯ ಶ್ರೀ ವಿಜಯ ವಿನಾಯಕ ದೇವಾಲಯದ ಹುಂಡಿಯನ್ನು ಕಳವು ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರಪೇಟೆ ಡಿವೈಎಸ್‌ಪಿ ಗಂಗಾಧರಪ್ಪ, ವೃತ್ತ ನಿರೀಕ್ಷಕ ಪ್ರೀತಮ್, ಶನಿವಾರಸಂತೆ ಠಾಣಾಧಿಕಾರಿಗಳಾದ ರವಿಕಿರಣ್, ಗೋವಿಂದ್‌ರಾಜ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಜೂ.1ರಿಂದ ಸಸಿಗಳ ವಿತರಣೆ

ಮಡಿಕೇರಿ: ಆರ್‌ಎಸ್‌ಪಿಡಿ ಲಕ್ಷೇರ್ಷಿಕೊಂಡಿರಿ ಜೂ.1 ರಿಂದ ಅಯಾ ವಲಯ ಅರಣ್ಯ ವ್ಯಾಪ್ತಿ ಸಸಿಗಳನ್ನು ಸಾರ್ವಜನಿಕರು ಹಾಗೂ ರೈತರಿಗೆ ವಿತರಿಸಲಾಗುವುದು.

ವಿರಾಜಪೇಟೆ ವಿಭಾಗದ ತಿತಿಮತಿ ವಲಯದ ಮಜ್ಜಿಗೆಹಳ್ಳ ಸಸ್ಯ ಕ್ಷೇತ್ರದಲ್ಲಿ 6X9 ಗಾತ್ರದ 75 ಸಾವಿರ ಹಾಗೂ 8X12 ಗಾತ್ರದ 5 ಸಾವಿರ ಒಟ್ಟು 80 ಸಾವಿರ ಸಸಿಗಳು ಬೆಳೆಸಲಾಗಿದೆ. ಆಸಕ್ತರು ತಮ್ಮ ಗುರುತಿನ ಚೀಟಿ, ಆರ್‌ಟಿಸಿ, ಆಧಾರ್ ಕಾರ್ಡ್ ಮತ್ತಿತರ ಅಗತ್ಯ ದಾಖಲಾತಿಗಳನ್ನು ನೀಡಿ ತಿತಿಮತಿ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ನಿಗದಿ ಪಾವತಿಸಿ, ರಶೀದಿ ಪಡೆದು ಸಸಿಗಳನ್ನು ಪಡೆದುಕೊಳ್ಳಬಹುದು ಎಂದು ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ.

ಪ್ರತಿಯೊಬ್ಬರು ಸಾಮರಸ್ಯ ಕಾಪಾಡಬೇಕು



ಬೇಟೋಳಿ ಗ್ರಾಮದಲ್ಲಿ ನಡೆದ ಚಿಟ್ಟಡೆ ಉರುಸ್ ಸೌಹಾರ್ದ ಸಮ್ಮೇಳನದಲ್ಲಿ ಶಾಸಕ ಎ.ಎಸ್. ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು.

ಪೊನ್ನಂಪೇಟೆ, ಮೇ 27–ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಾಮರಸ್ಯ ಕಾಪಾಡುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ಬೇಟೋಳಿ ಗ್ರಾಮದ ಚಿಟ್ಟಡೆ ಮೊಹಿದ್ದೀನ್ ಜುಮಾ ಮಸೀದಿ ಆಶ್ರಯದಲ್ಲಿ ನಡೆದ ಚಿಟ್ಟಡೆ ಉರುಸ್‌ನ ಸೌಹಾರ್ದ ಸಮ್ಮೇಳನದಲ್ಲಿ ಮಾತನಾಡಿದ ಅವರು, ಸಂವಿಧಾನದ ಹಕ್ಕುಗಳಿಂದ ಯಾವುದೇ ಸಮುದಾಯ ವಂಚಿತರಾಗಬಾರದು. ಎಲ್ಲಾ ಧರ್ಮಗಳು ಶ್ರೇಷ್ಠ ಎಂದು ತಿಳಿದಾಗ ಮಾತ್ರ ಸಂಪ್ರದಾಯ ಹಾಗೂ ಭಾಷೆಗಳ ಬಗ್ಗೆ ಗೌರವ ಭಾವನೆ ಮೂಡುತ್ತದೆ. ಆದ್ದರಿಂದ ಆಯಾ ಧಾರ್ಮಿಕ ಭಾವನೆಗಳೊಂದಿಗೆ ಚಿಲ್ಲಾವಾಡದೇ ಸೌಹಾರ್ದತೆಯಿಂದ ಬದುಕು ಸಾಗಿಸಬೇಕು ಎಂದರು.

ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ) ಅಧ್ಯಕ್ಷ ದುದ್ದಿಯಂಡ ಹೆಚ್. ಸೂಫಿ ಹಾಜಿ ಮಾತನಾಡಿ, ಧಾರ್ಮಿಕ ಉತ್ಸವ ಮತ್ತು ಆಚರಣೆಗಳು ಆಯಾಯ ಊರಿನ ಪವಿತ್ರ ಮಹತ್ವ ಒಂದು ಪ್ರಮುಖ ಪರಂಪರೆಯಾಗಿದೆ. ಕೊಡಗಿನ ಹಲವೆಡೆ ನಡೆಯುವ ಉರುಸ್ ಕಾರ್ಯಕ್ರಮಗಳಲ್ಲಿ ಹಿಂದೂ–ಮುಸ್ಲಿಂ ಸಮುದಾಯವರು ಬೇಧ–ಭಾವ ಮರೆತು ಒಂದಾಗಿ ಭಾಗವಹಿಸುತ್ತಾರೆ. ಹೀಗಾಗಿ ಉರುಸ್‌ಗಳು ಹಿಂದೂ–ಮುಸ್ಲಿಂ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಪಿ.ಎ.ಹನೀಫ್ ಮಾತನಾಡಿದರು. ವಿರಾಜಪೇಟೆ ಅನ್ವಾರುಲ್ ಹುದಾ ಸಂಸ್ಥೆಯ ಪ್ರಾಂಶುಪಾಲ ಅಶ್ರಫ್ ಅಹ್ಸನಿ ಸಮ್ಮೇಳನ ಉದ್ಘಾಟಿಸಿದರು. ದಕ್ಷಿಣ ಕನ್ನಡ ಪ್ರಸಿದ್ಧ ವಿದ್ವಾಂಸ ಸಿರಾಜುದ್ದೀನ್ ಸೂಫಿ ಕನ್ನಾನ ಧಾರ್ಮಿಕ ಉಪನ್ಯಾಸ ನೀಡಿದರು. ಚಿಟ್ಟಡೆ ಮೊಹಿದ್ದೀನ್ ಜುಮಾ ಮಸೀದಿಯ ಅಧ್ಯಕ್ಷ ಕೆ.ಯು.ಫಕ್ರುದ್ದೀನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎ.ನಾಸರ್, ವಿರಾಜಪೇಟೆ ಪುರಸಭಾ ಸದಸ್ಯ ಮೊಹಮ್ಮದ್ ರಾಫಿ, ಕೊಮಾಲಿದ ಗ್ರಾಮ ಸದಸ್ಯ ಎಂ.ಇಸ್ಮಾಯಿಲ್, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಕೋಳುಮಂಡ ರಫೀಕ್, ಕಾಫಿ ಬೆಳೆಗಾರರಾದ ಮಾಳೇಟಿರ ಚಿಣ್ಣಪ್ಪ ಬಾಬು, ಲತೀಫ್ ಉಸ್ತಾದ್, ಆಡಳಿತ ಮಂಡಳಿ ಪದಾಧಿಕಾರಿಗಳಾದ ವೈ.ಎಂ.ಹಾಸನ್, ಕೆ.ಯು.ರಜಾಕ್, ಸಿ.ಯು.ಹುಸ್ಸು, ವೈ.ಎಂ. ಮುಸ್ತಫಾ, ಕೆ.ಯು.ಮೊಹಮ್ಮದ್, ವೈ.ಕೆ.ಹನೀಫಾ, ಸಿ.ಎ.ಅಜೀಜ್, ಸಿ.ಎಸ್.ಹನೀಫ್ ಮೊದಲಾದವರು ಉಪಸ್ಥಿತರಿದ್ದರು.

ವಾಸು, ಅಕ್ಷಯ್, ಗೋಪಾಲ್‌ಗೆ ಪ್ರೆಸ್‌ಕ್ಲಬ್ ಪ್ರಶಸ್ತಿ



ಎ.ಎನ್.ವಾಸು



ಪಿ.ವಿ.ಅಕ್ಷಯ್



ಗೋಪಾಲ್

ಮಡಿಕೇರಿ, ಮೇ 27–ಕೊಡಗು ಪ್ರೆಸ್‌ಕ್ಲಬ್‌ನ ವಾರ್ಷಿಕ ಪ್ರಶಸ್ತಿಗೆ ಮೂವರು ಪತ್ರಕರ್ತರು ಭಾಜನರಾಗಿದ್ದಾರೆ.

ಹಿರಿಯ ಪತ್ರಕರ್ತ ಕೆ.ಬಿ.ಮಹಾಂತೇಶ್ ಅವರ ಸ್ಮರಣಾರ್ಥ ಕೊಡಗು ಪ್ರೆಸ್‌ಕ್ಲಬ್ ವತಿಯಿಂದ ನೀಡುವ ಅತ್ಯುತ್ತಮ ಪರಿಣಾಮಕಾರಿ ವರದಿ ಪ್ರಶಸ್ತಿಯನ್ನು ಶಕ್ತಿ ಪತ್ರಿಕೆಯಲ್ಲಿ ಪ್ರಕಟವಾದ 'ವಿಜೇಂಟರ ಮೋಸಕ್ಕೆ ಬಲಿಯಾಗಿ ವಿದೇಶದಲ್ಲಿ ಸಿಲುಕಿದ ಮಹಿಳೆ' ಎಂಬ ವರದಿಗೆ ಎ.ಎನ್.ವಾಸು ಪಡೆದುಕೊಂಡಿದ್ದಾರೆ.

ಕೋವರ್ ಕೊಲ್ಲಿ ಇಂದ್ರೇಶ್ ಮತ್ತು ಕುಟುಂಬವರ್ಗ ತಮ್ಮ ತಂದೆ ಬಿ.ವಿ.ಚಂದ್ರಶೇಖರ್ ಹಾಗೂ ತಾಯಿ ಪುಷ್ಪಲತಾ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಮಾನವೀಯ ವರದಿ ಪ್ರಶಸ್ತಿ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯಲ್ಲಿ ಪ್ರಕಟವಾದ 'Daredevil act by kodagu born vet saves leopard in mangaluru' ವರದಿಗೆ ಪಿ.ವಿ.ಅಕ್ಷಯ್ ಪಡೆದುಕೊಂಡಿದ್ದಾರೆ.

ಎಂ.ಎನ್.ಚಂದ್ರಮೋಹನ್ ಅವರು ತಮ್ಮ ತಂದೆ ಎಂ.ನಾರಾಯಣ ಹಾಗೂ ತಾಯಿ ಎನ್.ಪದ್ಮಾವತಿ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಪರಿಸರ ವರದಿ ಪ್ರಶಸ್ತಿಯನ್ನು ಟಿವಿ 9 ವಾಹಿನಿಯಲ್ಲಿ ಪ್ರಕಟವಾದ 'ಮಡಿಕೇರಿಯಲ್ಲಿ ಮರಗಳ ಮಾರಣ ಹೋಮ' ವರದಿಗೆ ಐಮಂಡ ಗೋಪಾಲ್ ಸೋಮಯ್ಯ ಗಳಿಸಿದ್ದಾರೆ. ಮೂರು ಪ್ರಶಸ್ತಿಯು ತಲಾ 5 ಸಾವಿರ ರೂ. ನಗದು ಹಾಗೂ ಫಲಕ ಒಳಗೊಂಡಿದೆ. ಜೂ.2ರಂದು ಮಧ್ಯಾಹ್ನ 12 ಗಂಟೆಗೆ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸಂಸ್ಕೃತಿ, ಪರಂಪರೆ ಉಳಿವಿಗೆ ಸಾಹಿತ್ಯ ಕ್ಷೇತ್ರ ಅಗತ್ಯ



ಮಡಿಕೇರಿಯಲ್ಲಿ ಕೊಡವ ಮಕ್ಕಡ ಕೂಟ ಹಾಗೂ ಲೇಖಕಿ ಚೀರಮ್ಮನ ವಾಣಿ ಚಂಗುಮಯ್ಯ ಅವರ ತಾಳ್ಳೆರ ತಾವರೆ ಪುಸ್ತಕ ಬಿಡುಗಡೆಗೊಳಿಸಲಾಯಿತು.

ಮಡಿಕೇರಿ: ಸಂಸ್ಕೃತಿ, ಪರಂಪರೆ, ಪದ್ಧತಿ ಮತ್ತು ಆಚಾರ–ವಿಚಾರಗಳು ಉಳಿಯಬೇಕಾದರೆ ಸಾಹಿತ್ಯ ಕ್ಷೇತ್ರದ ಬೆಳವಣಿಗೆ ಅಗತ್ಯವಾಗಿದೆ ಎಂದು ಸಾಹಿತಿ ಪಿ.ಎಸ್. ವೈಲೇಶ್ ಅಭಿಪ್ರಾಯಪಟ್ಟರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಕೊಡವ ಮಕ್ಕಡ ಕೂಟದ 91ನೇ ಪುಸ್ತಕ, ಲೇಖಕಿ ಚೀರಮ್ಮನ ವಾಣಿ ಚಂಗುಮಯ್ಯ ಅವರ 3ನೇ ಪುಸ್ತಕ 'ತಾಳ್ಳೆರ ತಾವರೆ' ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಡಗಿನ ಆಚಾರ, ವಿಚಾರ, ಸಂಸ್ಕೃತಿ, ಪದ್ಧತಿ, ಪರಂಪರೆ ಇಂದಿಗೂ ಶ್ರೀಮಂತವಾಗಿರಲು ಸಾಹಿತ್ಯವೇ ಕಾರಣ. ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹರದಾಸ ಅಪ್ಪನೆರವಂಡ ಅಪ್ಪಚ್ಚಕವಿ, ಕೊಡಗಿನ ಗೌರಮ್ಮ ಸೇರಿದಂತೆ ಅನೇಕ ಹಿರಿಯ ಸಾಹಿತಿಗಳ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ. ಅವರ ಹೆಸರು, ಖ್ಯಾತಿ ಉಳಿದು ಕೊಂಡಿರುವುದು ಸಾಹಿತ್ಯದಿಂದ ಎಂದರು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಹಿರಿಯ ಸಾಹಿತಿ ಬಾಚರಣಿಯಂಡ ಗೌರಮ್ಮ ಮಾದಮಯ್ಯ, ತಾಳ್ಳೆರ ತಾವರೆ ಪುಸ್ತಕದ ಲೇಖಕಿ ಚೀರಮ್ಮನ ವಾಣಿ ಚಂಗುಮಯ್ಯ ವಿಶೇಷ ಚೇತನರಾಗಿ, ಮನೆಯಲ್ಲೇ ಅಕ್ಷರಾಭ್ಯಾಸ ಮಾಡಿ, ಸಾಹಿತ್ಯ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ ಎಂದರು.

'ತಾಳ್ಳೆರ ತಾವರೆ' ಲೇಖಕಿ ಚೀರಮ್ಮನ ವಾಣಿ ಚಂಗುಮಯ್ಯ ಮಾತನಾಡಿ, ತಾಳ್ಳೆರ ತಾವರೆ ಪುಸ್ತಕ ಕಾವೇರಿ ಮಾತೆ, ಗಿಡ, ಪ್ರಕೃತಿ, ಪ್ರಾರ್ಥನೆ, ಆಸೆ–ಭಾವ, ಸುಖ–ದುಃಖ, ನೋವು–ನಲಿವು, ತಂದೆ–ತಾಯಿಗೆ ಸಂಬಂಧಿಸಿದಂತೆ 201 ಕವನಗಳನ್ನು ಒಳಗೊಂಡಿದೆ. ಹಿರಿಯ ಕವಿಗಳು ಹಾಗೂ ಸಾಹಿತಿಗಳ ಪುಸ್ತಕಗಳನ್ನು ಓದಬೇಕು. ಆ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಬೆಳೆದು ಮೌಲ್ಯಯುತ ಬರಹಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ, ಸಮಾಜ ಸೇವಕರಾದ ಕೂಪದಿರ ಗೊಂಬೆ ಉತ್ತಪ್ಪ ಹಾಗೂ ಕೂಪದಿರ ಜಯಾ ವಿಜಯ್ ಉಪಸ್ಥಿತರಿದ್ದರು.

ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆ

ವಿವಿಧ ಕಾಲೇಜಿನಲ್ಲಿ ಮತಯಾಚಿಸಿದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಭರವಸೆ



ಚಾಮರಾಜನಗರದ ವಿವಿಧ ಕಾಲೇಜಿಗೆ ಭೇಟಿ ನೀಡಿ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಶಿಕ್ಷಕರಲ್ಲಿ ಮತಯಾಚಿಸಿದರು.

ಚಾಮರಾಜನಗರ, ಮೇ 27–ನಾನು ವಿಧಾನಪರಿಷತ್ ಸದಸ್ಯನಾಗಿ ಆಯ್ಕೆಯಾದರೆ, ಗೌರವ ಧನ ಪಡೆಯುವ ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸುವುದಾಗಿ ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಮೈತ್ರಿ ಕೂಟದ ಅಭ್ಯರ್ಥಿ ಕೆ. ವಿವೇಕಾನಂದ ಭರವಸೆ ನೀಡಿದರು.

ತಾಲೂಕಿನ ಮರಿಯಾಲ ಜೆಎಸ್‌ಎಸ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ಜೆಎಸ್‌ಎಸ್ ಮಹಿಳಾ ಕಾಲೇಜು ಹಾಗೂ ಸೇವಾ ಭಾರತಿ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ, ಮತಯಾಚಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಹೆಚ್.ಡಿ. ಕುಮಾರಸ್ವಾಮಿ, ರಾಜ್ಯಾಧ್ಯಕ್ಷ ವಿಜಯೇಂದ್ರ ಸೂಚನೆಯಂತೆ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದೇನೆ ಎಂದು ಹೇಳಿದರು.

ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದು, ಶಿಕ್ಷಕರು ಉತ್ತಮವಾಗಿ ಸ್ಪಂದಿಸಿದ್ದಾರೆ. ಅವರ ಸೇವಕನಾಗಿ ಕೆಲಸ ಮಾಡುವ ಆಸೆ ನನ್ನದಾಗಿದೆ. ಗುರುಗಳ ಋಣ ತೀರಿಸುವ ಸುದಿನ ಇದಾಗಿದೆ. ನಿಮ್ಮೆಲ್ಲರ ಆಶೀರ್ವಾದದಿಂದ ನಾನು ವಿಧಾನಪರಿಷತ್‌ಗೆ ಆಯ್ಕೆಯಾದರೆ, ಶಿಕ್ಷಕರ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ. ಬಡತನದಲ್ಲಿ ಬೆಳೆದ ನನಗೆ ಶಿಕ್ಷಕರ ಸಂಕಷ್ಟಗಳು ಅರ್ಥವಾಗಿದೆ. ಹೀಗಾಗಿ ನಿಮ್ಮೆಲ್ಲರ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಶಿಕ್ಷಕರ ನಿಧಿ ಸ್ಥಾಪನೆ ಜೊತೆಗೆ ಶಿಕ್ಷಕರ ಬಡಾವಣೆಯನ್ನು ನಿರ್ಮಾಣ ಮಾಡಿ, ಅತ್ಯಂತ ಕಡಿಮೆ ದರದಲ್ಲಿ ಶಿಕ್ಷಕರಿಗೆ ನಿವೇಶನ ನೀಡಲಾಗುವುದು. ಶಿಕ್ಷಕರ ಶ್ರೇಯೋಭಿವೃದ್ಧಿಗೆ ದುಡಿಯುವ ಮೂಲಕ ಅವರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈಗಾಗಲೇ ಕಾಂಗ್ರೆಸ್ ಅಭ್ಯರ್ಥಿಗೆ ನಾಲ್ಕು ಬಾರಿ ಅವಕಾಶ ಕೊಟ್ಟಿದ್ದೀರಿ. ಈ ಬಾರಿ ನನಗೊಂದು ಅವಕಾಶ ಕೊಡಿ, ನನ್ನ ಕೆಲಸವನ್ನು ನೋಡಿ ಎಂದು ಮನವಿ ಮಾಡಿದರು.

ಬಿಜೆಪಿ ನಿಕಟ ಪೂರ್ವ ಅಭ್ಯರ್ಥಿ ಬಿ. ನಿರಂಜನ್‌ಕುಮಾರ್ ಮಾತನಾಡಿ, ಬಹಳ ಸರಳ ಸಜ್ಜನಿಕೆಯುಳ್ಳ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ ಅವರಿಗೆ ಶಿಕ್ಷಕರು ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು. ಕಳೆದ ಅವಧಿಯಲ್ಲಿ ನನಗೆ ನೀಡಿದ ಪ್ರೀತಿ, ವಿಶ್ವಾಸ ಹಾಗೂ ಬೆಂಬಲವನ್ನು ವಿವೇಕಾನಂದ ಅವರಿಗೆ ನೀಡಬೇಕು. ಅವರನ್ನು ಗೆಲ್ಲಿಸಿದರೆ ನಾನು ಗೆದ್ದಂತೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಎಂ.ರಾಮಚಂದ್ರ, ಡಾ.ಎ.ಆರ್.ಬಾಬು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ, ಉಪಾಧ್ಯಕ್ಷ ಎಚ್.ಎಂ.ಬಸವಣ್ಣ, ಮಾಜಿ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷ ಮಲೆಯೂರು ಕುಮುದಮ್ಮ, ಪ್ರಧಾನ ಕಾರ್ಯದರ್ಶಿ ಶೈಲಾ, ಜೆಡಿಎಸ್ ಮುಖಂಡ ಆಲೂರು ಮಲ್ಲು, ನೂರೊಂದುಶೆಟ್ಟಿ, ನಟರಾಜು, ನಗರ ಮಂಡಲದ ಅಧ್ಯಕ್ಷ ಶಿವರಾಜ್ ಮೊದಲಾದವರು ಇದ್ದರು.

ಮರಿಯಾಲ ಮಠಕ್ಕೆ ಮೈತ್ರಿ ಅಭ್ಯರ್ಥಿ ಭೇಟಿ



ಮರಿಯಾಲ ಮಠಕ್ಕೆ ಕೆ.ವಿವೇಕಾನಂದ ಭೇಟಿ ನೀಡಿ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಚಾಮರಾಜನಗರ, ಮೇ 27–ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಮರಿಯಾಲದ ಮಠಕ್ಕೆ ಭೇಟಿ ನೀಡಿ, ಮಠಾಧ್ಯಕ್ಷ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಕೆ.ವಿವೇಕಾನಂದ ಹಾಗೂ ಬಿಜೆಪಿ ಮುಖಂಡ ಬಿ.ನಿರಂಜನ್ ಮೂರ್ತಿ, ಡಾ. ಎ.ಆರ್.ಬಾಬು, ಜೆಡಿಎಸ್ ಮುಖಂಡ ಆಲೂರು ಮಲ್ಲು, ಬಿಜೆಪಿ ಹಾಗೂ ಜೆಡಿಎಸ್ ಮುಖಂಡರೊಂದಿಗೆ ಮಠಕ್ಕೆ ತೆರಳಿ ಶ್ರೀಗಳಿಂದ ಆಶೀರ್ವಾದ ಪಡೆದರು.

ಜಿಲ್ಲೆಯಲ್ಲಿ ಪ್ರಚಾರದಲ್ಲಿ ನಿರತರಾಗಿರುವ ಕೆ.ವಿವೇಕಾನಂದ ಶ್ರೀ ಮುರುಘರಾಜೇಂದ್ರಸ್ವಾಮೀಜಿ, ವಿದ್ಯಾಸಂಸ್ಥೆ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಶಿಕ್ಷಕರನ್ನು ಭೇಟಿ ಮಾಡಿ, ಪ್ರಥಮ ಪ್ರಾಶಸ್ತ್ಯ ಮತ ನೀಡುವಂತೆ ಮನವಿ ಮಾಡಿದರು.

ಇದಕ್ಕು ಮುನ್ನ ಶ್ರೀಮಠದ ಹಿರಿಯ ಶ್ರೀಗಳ ಗದ್ದುಗೆಗೆ ಪೂಜೆ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಶಿಕ್ಷಕರ ಶ್ರೇಯೋಭಿವೃದ್ಧಿಗೆ ದುಡಿಯುವ ಮೂಲಕ ಅವರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಮಹದೇವಸ್ವಾಮಿ, ಉಪನ್ಯಾಸಕ ಅಶೋಕ ಮೊದಲಾದವರಿದ್ದರು.

ಸಹಕಾರ ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 27–ಜಿಲ್ಲಾ ಸಹಕಾರ ಒಕ್ಕೂಟ, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಮೈಸೂರು ಸಹಕಾರ ತರಬೇತಿ ಸಂಸ್ಥೆ ಸಹಯೋಗದಲ್ಲಿ ಸಹಕಾರ ಸಂಘ ಸಂಸ್ಥೆಗಳ ಸಿಬ್ಬಂದಿಗೆ ದೂರ ಶಿಕ್ಷಣ ಡಿಪ್ಲೊಮಾ ಇನ್–ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಕೋರ್ಸ್ ಸಹಕಾರ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮಾಹಿತಿಗೆ ದೂ.ಸಂ: 08226–223802 ಅಥವಾ ಮೊ.ಸಂ: 9141873304, 7019083386 ಸಂಪರ್ಕಿಸುವಂತೆ ಜಿಲ್ಲಾ ಸಹಕಾರ ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಡಳಿತ ಮಾದರಿ ಯೋಜನೆ ಅಳವಡಿಕೆ ಕಡ್ಡಾಯ

ಚಾಮರಾಜನಗರ, ಮೇ 27– ರಾಜ್ಯ ವಕ್ಫ್ ಮಂಡಳಿ ನಿರ್ದೇಶನದಂತೆ ಎಲ್ಲಾ ವಕ್ಫ್ ಸಂಸ್ಥೆಗಳಲ್ಲಿ ಆಡಳಿತ ಮಾದರಿ ಯೋಜನೆ ಕಡ್ಡಾಯವಾಗಿದೆ.

ಈಗಾಗಲೇ ಚಾಮರಾಜನಗರ ಜಿಲ್ಲೆಯ ಹಲವಾರು ವಕ್ಫ್ ಸಂಸ್ಥೆಗಳು ಆಡಳಿತಕ್ಕಾಗಿ ಅನುಮೋದನೆ ಪಡೆದಿದ್ದು, ಉಳಿದ ಸಂಸ್ಥೆಗಳು ಮಾದರಿ ಯೋಜನೆ ಅಳವಡಿಸಿಕೊಳ್ಳಬೇಕು.

ನಗರದ ಗುಂಡ್ಲುಪೇಟೆ ರಸ್ತೆಯ ಮೌಲಾನಾ ಆಜಾದ್ ಹಾಸ್ಟೆಲ್ ಆವರಣದಲ್ಲಿರುವ ಜಿಲ್ಲಾ ವಕ್ಫ್ ಕಚೇರಿಗೆ ಸೂಕ್ತ ದಾಖಲೆಗಳೊಂದಿಗೆ 15 ದಿನಗಳ ಒಳಗಾಗಿ ಪ್ರಸ್ತಾವನೆ ಸಲ್ಲಿಸಬೇಕು. ನಿಗದಿತ ಸಮಯದಲ್ಲಿ ಪ್ರಸ್ತಾವನೆ ಸಲ್ಲಿಸದ ಸಂಸ್ಥೆಗಳ ಮಾಧಿಕಾರಿಗಳ ವಿರುದ್ಧ ವಕ್ಫ್ ಕಾಯ್ದೆ ಹಾಗೂ ನಿಯಮಗಳ ಅಡಿ ಕ್ರಮ ಕೈಗೊಳ್ಳಲು ರಾಜ್ಯ ವಕ್ಫ್ ಮಂಡಳಿಗೆ ವರದಿ ನೀಡಲಾಗುವುದು ಎಂದು ಜಿಲ್ಲಾ ವಕ್ಫ್ ಕಚೇರಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಣ್ಣ ನಿಧನ



ಚಾಮರಾಜನಗರ, ಮೇ 27–ನಗರದ ಕೋರ್ಟ್ ರಸ್ತೆ ನಿವಾಸಿಯಾದ ನಿವೃತ್ತ ಕಂದಾಯ ನಿರೀಕ್ಷಕ ರಾಜಣ್ಣ (61) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಸ್ವಗ್ರಾಮ ಕಾಗಲವಾಡಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಿತು.

ಒಂದನೇ ಪುಟದಿಂದ

ಕಲುಷಿತ ನೀರು

ಮೈಸೂರು ನಗರದ ಕಲುಷಿತ ನೀರು ಸೇರ್ಪಡೆಯಾಗುವುದರಿಂದ ಗಂಜಾಂನ ವಾರ್ಡ್‌ಗಳಿಗೆ ಸರಬರಾಜು ಮಾಡುವ ಕುಡಿಯುವ ನೀರು ಮಲಿನವಾಗುತ್ತಿದೆ. ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಹೀಗಾಗಿ ಕಾವೇರಿ ನದಿಗೆ ಕಲುಷಿತ ನೀರು ಬಿಡುವುದನ್ನು ತಡೆಯಬೇಕು ಎಂದು ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮತ್ತು ಮೈಸೂರು ಮಹಾನಗರ ಪಾಲಿಕೆಗೆ ಪತ್ರ ಬರೆದಿದ್ದಾರೆ.

ಈ ಪ್ರದೇಶದಲ್ಲಿ ಈಗ ತಾನೇ ದಿಢೀರನೇ ಕಾವೇರಿ ನದಿಗೆ ಕಲುಷಿತ ನೀರು ಸೇರ್ಪಡೆಯಾಗಿಲ್ಲ. ಈ ಸಮಸ್ಯೆ ಹಲವಾರು ವರ್ಷಗಳಿಂದಲೂ ಇದ್ದರೂ ಕೂಡ ಯಾವುದೇ ಅಧಿಕಾರಿ ತಲೆ ಕೆಡಿಸಿಕೊಂಡಿಲ್ಲ. ಬರಗಾಲದ ಕಾರಣದಿಂದ ಕಾವೇರಿಯಲ್ಲಿ ನೀರಿನ ಹರಿವು ಕಡಿಮೆಯಾದಾಗ ಕಲುಷಿತ ನೀರಿನ ಪ್ರಮಾಣ ಹೆಚ್ಚಾಗಿದೆ. ಆಗಲೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿಲ್ಲ. ಕಾಲರಾ ಭೀತಿ ಎದುರಾದಾಗ ಮಂಡ್ಯ ಜಿಲ್ಲಾಧಿಕಾರಿಗೆ ಮಾತ್ರ ಜ್ಞಾನೋದಯವಾಗಿ ಮೈಸೂರು ಜಿಲ್ಲಾಧಿಕಾರಿ ಮತ್ತು ಪಾಲಿಕೆಗೆ ಪತ್ರ ಬರೆದು ಕೈ ತೊಳೆದುಕೊಂಡಿದ್ದಾರೆ. ಆದರೆ, ಸದರಿ ಸ್ಥಳದಲ್ಲಿ ನೀರು ಕಲುಷಿತಗೊಳ್ಳುವುದನ್ನು ತಡೆಯಲು ಯಾವುದೇ ಕಾರ್ಯಕ್ರಮ ರೂಪಿಸಿಲ್ಲ ಎಂದು ಕಾಣುತ್ತಿದೆ.

ಹಾಗೇ ನೋಡುವುದಾದರೆ ತಲಕಾವೇರಿಯಿಂದ ಹರಿದುಬರುವ ಕಾವೇರಿ ನದಿಗೆ ಕೊಡಗಿನ ಸಿದ್ದಾಪುರ ಮತ್ತು ಕುಶಾಲನಗರದಲ್ಲೇ ಕಲುಷಿತ ನೀರು ಸೇರ್ಪಡೆ ಆರಂಭವಾಗುತ್ತದೆ. ಅಲ್ಲಿನ ರೆಸಾರ್ಟ್‌ಗಳು ಮತ್ತು ಹೋಟೆಲ್‌ಗಳಿಂದ ನದಿಗೆ ಕಲುಷಿತ ನೀರನ್ನು ರಾಜಾರೋಷವಾಗಿ ಹರಿಯಬಿಡಲಾಗುತ್ತದೆ. ನಂತರ ಮಂಡ್ಯ ಜಿಲ್ಲೆವರೆಗೂ ನದಿ ಹರಿದುಬರುವ ಮಾರ್ಗದುದ್ದಕ್ಕೂ ಕಾರ್ಖಾನೆಗಳು ಮತ್ತು ಹೋಟೆಲ್‌ಗಳ ಮಲಿನ ನೀರು ನದಿಗೆ ಸೇರುತ್ತಿದೆ.

ಶ್ರೀರಂಗಪಟ್ಟಣ ತಾಲೂಕಿನ ಗಡಿಭಾಗವಾದ ಇನ್‌ಫೋಸಿಸ್ ಬಳಿ ಇರುವ ಕಾಲುವೆ ಮೂಲಕ ಮೈಸೂರು ನಗರದ ಕಾರ್ಖಾನೆಗಳು ಹಾಗೂ ಹೋಟೆಲ್‌ಗಳ ತ್ಯಾಜ್ಯ ನೀರು ಹರಿದುಬಂದು ವಿರಿಜಾ ನಾಲೆಗೆ ಸೇರಿ ನಂತರ ಕಾವೇರಿ ಒಡಲು ಸೇರಿಕೊಳ್ಳುತ್ತಿದೆ. ಈ ನೀರನ್ನೇ ಕಾರೇಕುರ, ಹೊಸಹಳ್ಳಿ, ನಗುವನಹಳ್ಳಿ, ಚಂದಗಾಲು, ಗಂಜಾಂ ಸೇರಿದಂತೆ ಈ ಭಾಗದ ಜನರು ಕುಡಿಯುವಂತಹ ದುಸ್ಥಿತಿ ಎದುರಾಗಿದೆ. ಮಾತ್ರವಲ್ಲದೇ ಇದೇ ನೀರನ್ನು ವ್ಯವಸಾಯಕ್ಕೂ ಬಳಸಲಾಗುತ್ತಿದ್ದು, ಈ ನೀರನ್ನು ಕುಡಿದ ಕೆಲವು ಜಾನುವಾರುಗಳು ಮೃತಪಟ್ಟಿರುವುದಾಗಿ ರೈತರು ಹೇಳುತ್ತಿದ್ದಾರೆ.

ಮೈಸೂರು, ಮಂಡ್ಯ ಮತ್ತು ಬೆಂಗಳೂರಿಗೆ ಕುಡಿಯುವ ನೀರು ಹಾಗೂ ಲಕ್ಷಾಂತರ ಎಕರೆ ಪ್ರದೇಶದಲ್ಲಿ ವ್ಯವಸಾಯಕ್ಕೆ ನೀರುಣಿಸುವ ಕಾವೇರಿ ಒಡಲಿಗೆ ಯುಜಿಡಿ ಹಾಗೂ ಕೈಗಾರಿಕಾ ಪ್ರದೇಶಗಳ ಅಶುದ್ಧ ನೀರು ಸೇರ್ಪಡೆಯಾಗುತ್ತಿದೆ. ಇದರ ಜೊತೆಗೆ ಮಾಂಸದಂಗಡಿಗಳ ತ್ಯಾಜ್ಯ, ಹೋಟೆಲ್, ರೆಸ್ಟೋರೆಂಟ್, ಹೋಂಸ್ಟೇಗಳಿಂದಲೂ ನದಿಗೆ ತ್ಯಾಜ್ಯ ನೀರನ್ನು ಬಿಡಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕಾವೇರಿಗೆ ತ್ಯಾಜ್ಯ ನೀರನ್ನು ಬಿಡುವ ಯಾವುದೇ ಸಂಸ್ಥೆಯ ಮೇಲೂ ಈವರೆಗೂ ಕ್ರಮ ಕೈಗೊಂಡ ಉದಾಹರಣೆ ಇಲ್ಲ.

ನದಿಯಂಚಿನ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನದಿಯಲ್ಲಿ ಹರಿಯುವ ಕಚ್ಚಾ ನೀರನ್ನೇ ಕುಡಿಯಲು ಸರಬರಾಜು ಮಾಡಲಾಗುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ. ಈ ನೀರನ್ನು ಕುಡಿಯುವ ಜನರು ಜಾಂಡೀಸ್ ಮತ್ತಿತರ ಕಾಯ್ದೆಗಳಿಗೆ ತುತ್ತಾಗುತ್ತಿದ್ದಾರೆ. ಸಾಮಾನ್ಯವಾಗಿ ಕುಡಿಯುವ ನೀರು ಎ ಗ್ರೇಡ್‌ನಲ್ಲಿ ಇರಬೇಕು. ಆದರೆ, ಕಾವೇರಿ ನೀರು ಹಂತ ಹಂತವಾಗಿ ಸಿ ಗ್ರೇಡ್‌ಗೆ ತಲುಪಿದ್ದು, ಇದರಿಂದ ನದಿಯಲ್ಲಿನ ಜಲಚರಗಳೂ ಕೂಡ ಅಪಾಯದ ಅಂಚಿಗೆ ತಲುಪುತ್ತಿವೆ ಎಂದು ಪರಿಸರ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಜೀವನದಿ ಕಾವೇರಿ ಮಲಿನಗೊಳ್ಳುವುದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ಕೆಲವೊಮ್ಮೆ ಕಾರ್ಯ ನಿರ್ವಹಿಸಿದೆಯಾದರೂ ಅದು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. 2010ರಲ್ಲಿ ಮೊದಲ ಬಾರಿಗೆ ಮಂಡ್ಯ ಜಿಲ್ಲೆಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಸಂಪರ್ಕ ಕಲ್ಪಿಸುವ ಮೂಲಕ ನೇರವಾಗಿ ನದಿಗೆ ಕೊಳಚೆ ನೀರು ಸೇರುವುದನ್ನು ತಡೆಯಲು ಕ್ರಮ ಕೈಗೊಳ್ಳಲಾಗಿತ್ತು. ಕಳೆದ ವರ್ಷ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಮಂಡ್ಯ ವಿಭಾಗದಿಂದ ನದಿಗೆ ಚರಂಡಿ ಹಾಗೂ ಯುಜಿಡಿ ಮಲಿನ ನೀರು ಸೇರುವುದನ್ನು ತಡೆಗಟ್ಟಿ ಅದನ್ನು ಶುದ್ಧೀಕರಿಸಿ ವ್ಯವಸಾಯಕ್ಕೆ ಬಳಸುವ ಉದ್ದೇಶದಿಂದ ಸರ್ಕಾರಕ್ಕೆ 45 ಕೋಟಿ ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿ ಆ ಪೈಕಿ 16 ಕೋಟಿ ರೂ. ಬಿಡುಗಡೆಯಾಗಿ ಯುಜಿಡಿ ಮತ್ತು ಚರಂಡಿ ನೀರು ಶುದ್ಧೀಕರಣ ಘಟಕವನ್ನು ಶ್ರೀರಂಗಪಟ್ಟಣ ಹೊರವಲಯದಲ್ಲಿ ಸ್ಥಾಪನೆ ಮಾಡಲಾಗಿದೆ. ಈ ಮೂಲಕ ಸುಮಾರು 3 ಸಾವಿರ ಮನೆಗಳ ಮಲಿನ ನೀರು ನದಿಗೆ ಸೇರದಂತೆ ಕ್ರಮ ಕೈಗೊಳ್ಳಲಾಗಿದೆ. ಆದರೆ, ಕಾಲುವೆಗಳ ಮೂಲಕ ನದಿಗೆ ಹರಿದುಬರುತ್ತಿರುವ ತ್ಯಾಜ್ಯ ನೀರನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಯೋಜನೆ ರೂಪಿಸಿದಂತೆ ಕಾಣುತ್ತಿಲ್ಲ.

ಮೂರು ವರ್ಷದ ಹಿಂದೆಯೇ 'ಮೈಸೂರು ಮಿತ್ರ'ನ ಎಚ್ಚರಿಕೆ ಗಂಟೆ

ಕಾವೇರಿ ನದಿ ಕಲುಷಿತಗೊಳ್ಳುತ್ತಿರುವ ಬಗ್ಗೆ 'ಮೈಸೂರು ಮಿತ್ರ' 2021ರ ಮಾರ್ಚ್ 23ರಂದು ಸುದೀರ್ಘ ವರದಿ ಪ್ರಕಟಿಸಿತ್ತು. ಅಂದಿನ ತಾಲೂಕು ಆರೋಗ್ಯಾಧಿಕಾರಿ ಡಾ. ಎನ್.ಕೆ. ವೆಂಕಟೇಶ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ. ಬೆನ್ನೂರ್, ಆರೋಗ್ಯ ಮೇಲ್ವಿಚಾರಕ ಜಿ. ಮೋಹನ್, ಹಿರಿಯ ಆರೋಗ್ಯ ಸಹಾಯಕ ಹೇಮಣ್ಣ ಅವರನ್ನೊಳಗೊಂಡ ತಂಡ ಬೆಳಗೊಳ ಬಳಿ ನೀರಿನ ಮಾದರಿಯನ್ನು ಸಂಗ್ರಹಿಸಿ, ಲ್ಯಾಬ್‌ನಿಂದ ವರದಿ ಬಂದ ನಂತರ ತಾಲೂಕು ಆರೋಗ್ಯಾಧಿಕಾರಿಗಳು, ಈ ನೀರನ್ನು ಸೇವಿಸಿದರೆ ಜಾಂಡೀಸ್, ಕರುಳುಬೇನೆ ಸಂಬಂಧಿಸಿದ ಕಾಯಿಲೆಗಳು ಬರುವ ಅಪಾಯವಿದೆ. ಅಲ್ಲದೇ, ಚರ್ಮ ವ್ಯಾದಿಗೂ ಜನರು ತುತ್ತಾಗಬಹುದು ಎಂದು ತಿಳಿಸಿದ್ದರು.

ಅಂದು ತಹಶೀಲ್ದಾರ್ ಆಗಿದ್ದ ಎಂ.ವಿ. ರೂಪಾ ಅವರು, ಕಾವೇರಿ ನದಿಗೆ ಕಲುಷಿತ ನೀರು ಸೇರ್ಪಡೆಯಾಗುವ ವಿಚಾರವನ್ನು ಮಂಡ್ಯ ಜಿಲ್ಲಾಧಿಕಾರಿಗಳ ಮೂಲಕ ಮೈಸೂರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ವಹಿಸಲಾಗುವುದು. ಬೆಳಗೊಳ ಹಾಗೂ ನಗುವನಹಳ್ಳಿ ಭಾಗದಲ್ಲಿ ಕೈಗಾರಿಕೆಗಳಿಂದ ಶುದ್ಧೀಕರಣ ಮಾಡದ ಕಲುಷಿತ ನೀರನ್ನು ಕಾವೇರಿ ನದಿಗೆ ಬಿಡಲಾಗುತ್ತಿದ್ದು, ಇದರ ಬಗ್ಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮೈಸೂರು ಜಿಲ್ಲಾಡಳಿತದ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮೂರು ವರ್ಷದ ಹಿಂದೆಯೇ ತಿಳಿಸಿದ್ದರಾದರೂ ಈವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ, ಈಗ ಕಾಲರಾ ಭೀತಿಯಿಂದಾಗಿ ಮಂಡ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲಾಧಿಕಾರಿ ಹಾಗೂ ನಗರಪಾಲಿಕೆಗೆ ಪತ್ರ ಬರೆದಿದ್ದಾರೆ. ಇದು ಇಷ್ಟಕ್ಕೇ ಸ್ಥಗಿತಗೊಂಡು ಕಾವೇರಿ ಮತ್ತಷ್ಟು ಮಲಿನವಾಗುತ್ತದೆಯೇ? ಅಥವಾ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಜೀವನದಿ ಮಲಿನಗೊಳ್ಳುವುದನ್ನು ನಿಯಂತ್ರಿಸುವ ಮೂಲಕ ಜನರಿಗೆ ಶುದ್ಧ ಕುಡಿಯುವ ನೀರು ಹಾಗೂ ರೈತರ ಬೆಳೆಗೆ ಹಾನಿಯಾಗದಂತಹ ನೀರು ದೊರೆಯಲು ಸಹಕರಿಸುವರೇ ಕಾದು ನೋಡಬೇಕಾಗಿದೆ.

'ಕಾಂಗ್ರೆಸ್ ಕುಟುಂಬ'

ಹೊಂದಿರುವವರಿಗೆ ಮಾತ್ರ ಅವಕಾಶವಿರುತ್ತದೆ. ಸಚಿವರುಗಳು ಒಂದು ವಾರ ಮೊದಲೇ ಕಾರ್ಯಕ್ರಮದ ದಿನಾಂಕ ನಿಗದಿ ಮಾಡಿ ಕಾರ್ಯಕರ್ತರನ್ನು ಭೇಟಿ ಮಾಡಬೇಕು. ನಮ್ಮನ್ನು ವಿಧಾನಸೌಧದಲ್ಲಿ ಕೂರಿಸಿದವರ ಜೊತೆ ನೇರವಾಗಿ ಮಾತನಾಡಲು ಆಗುತ್ತಿಲ್ಲ, ಆದ್ದರಿಂದ ಕಾಂಗ್ರೆಸ್ ಕುಟುಂಬ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ.

ಇದು ನಾಲ್ಕು ವರ್ಷದ ಸರ್ಕಾರ ಅಲ್ಲ, 10 ವರ್ಷದ ಸರ್ಕಾರ. ಅದಕ್ಕಾಗಿ ಈಗಿನಿಂದಲೇ ಸಿದ್ಧತೆ ನಡೆಸಬೇಕು. ಈ ಕುರಿತು ಸಚಿವರಾದ ರಾಮಲಿಂಗಾ ರೆಡ್ಡಿ, ಕೃಷ್ಣ ಬೈರೇಗೌಡ ಜೊತೆ ಚರ್ಚಿಸಲಾಗಿದೆ.

ಪಕ್ಷದ ದೇವಾಲಯ ಕಾಂಗ್ರೆಸ್‌ನ ಪ್ರಧಾನ ಕಚೇರಿಗೆ ಮೊದಲ ಆದ್ಯತೆ. ರಾಜ್ಯದ ಎಲ್ಲಾ ಜಿಲ್ಲಾ ಕಾಂಗ್ರೆಸ್ ಕಚೇರಿಗಳ ನಿರ್ಮಾಣಕ್ಕೆ ಮುಂದಿನ ಒಂದು ವರ್ಷದಲ್ಲಿ ಶಂಕುಸ್ಥಾಪನೆ ಮಾಡಲಾಗುವುದು. ರೇಸ್ ಕೋರ್ಸ್ ರಸ್ತೆ ಕಚೇರಿಯ ಕಟ್ಟಡ ಜಾಗದಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಸಚಿವರು, ಶಾಸಕರು, ಕಾರ್ಯಕರ್ತರು ನಿರ್ಮಾಣದ ಹೊಣೆ ಹೊರಬೇಕು, ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಕಾರ್ಯಆರಂಭವಾಗಿದೆ ಎಂದರು. ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರದ ಚುನಾವಣೆಯನ್ನು ಒಗ್ಗಟ್ಟಾಗಿ ಎದುರಿಸಬೇಕು. ಆರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಬೇಕು. ಆಗ ಮಾತ್ರ ಪಕ್ಷಕ್ಕೆ ಪರಿಷತ್‌ನಲ್ಲಿ ಬಹುಮತ ದೊರೆತು ಮಸೂದೆಗಳಿಗೆ ಅಂಗೀಕಾರ ಪಡೆಯಬಹುದು ಎಂದರು. ಜವಾಹರ ಲಾಲ್ ನೆಹರು ಅವರ ಹೆಸರೇ ಕಾಂಗ್ರೆಸ್ ಹಾಗೂ ಕಾರ್ಯಕರ್ತರಿಗೆ ಸ್ಫೂರ್ತಿ. ದೇಶದ ಸಂವಿಧಾನಕ್ಕೆ ಭದ್ರ ಅಡಿಪಾಯ ಹಾಕಿದ್ದೇ ಅವರು. ಈ ಇತಿಹಾಸ ಬದಲಿಸಲು ಯಾರಿಂದಲೂ ಸಾಧ್ಯವಿಲ್ಲ. ಬಿಜೆಪಿ ನಾಯಕರು ಇತಿಹಾಸ ತಿರುಚಲು, ಪ್ರಯತ್ನಿಸುತ್ತಿದ್ದು, 2-3 ಜನ್ಮ ಎತ್ತಿದರೂ ನೆಹರೂ ಸಾಧನೆ ತೆಗೆದುಹಾಕುವುದು ಅಸಾಧ್ಯ.

ಬೆಂಗಳೂರಿನಲ್ಲಿ ಎಚ್‌ಎಂಟಿ, ಹೆಚ್‌ಎಎಲ್, ಐಐಟಿ, ಬಿಹೆಚ್‌ಇಎಲ್, ಇಸ್ರೋ ಸೇರಿದಂತೆ ಅನೇಕ ಸಂಸ್ಥೆಗಳನ್ನು ಕಟ್ಟಿದ್ದಾರೆ. ಉದ್ಯೋಗ ಸೃಷ್ಟಿಸಿ ಬಡತನ ನಿವಾರಣೆಗೆ ಎಲ್ಲಾ ವರ್ಗದ ಜನರಿಗೆ ಶಕ್ತಿ ತುಂಬಲು ಸಾರ್ವಜನಿಕ ಉದ್ದಿಮೆಗಳನ್ನು ಆರಂಭಿಸಿದರು. ದೇಶದಲ್ಲಿ ಕೈಗಾರಿಕಾ ನೀತಿ, ವಿದೇಶಾಂಗ ನೀತಿ, ಅಭಿವೃದ್ಧಿ ನೀತಿಯಿಂದ ನೆಹರು ಅವರನ್ನು ವಿಶ್ವವೇ ಗೌರವದಿಂದ ಕಾಣುತ್ತಿತ್ತು ಎಂದರು.

ಶಿಕ್ಷಕರ ಸಮಸ್ಯೆ ಬಗೆಹರಿಸಲು ಮರಿತಿಬ್ಬೇಗೌಡರನ್ನು ಬೆಂಬಲಿಸಿ, ಮಾಜಿ ಮೇಯರ್‌ಗಳ ಫೋರಂ ಮನವಿ

ಮೈಸೂರು,ಮೇ 27(ಎಂಟಿವೈ)- ಶಿಕ್ಷಣ ಕ್ಷೇತ್ರ ಹಾಗೂ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಕಳೆದ ಮೂರು ದಶಕಗಳಿಂದ ಬದ್ಧತೆಯಿಂದ ಶ್ರಮಿಸುತ್ತಿರುವ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರು ಬೆಂಬಲ ನೀಡಬೇಕು ಎಂದು ಮಾಜಿ ಮೇಯರ್‌ಗಳ ಫೋರಂ ಮನವಿ ಮಾಡಿದೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಾಜಿ ಮೇಯರ್‌ಗಳ ಫೋರಂ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಹೆಚ್.ಎನ್.ಶ್ರೀಕಂಠಯ್ಯ ಮಾತನಾಡಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಮಾಜಿ ಮೇಯರ್‌ಗಳು ಮಾತನಾಡಿ, ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರು ಪ್ರಥಮ ಪ್ರಾಶಸ್ತ್ಯದ ಮತ ನೀಡಿ, ಬೆಂಬಲಿಸುವ ಮೂಲಕ ಶಿಕ್ಷಕರ ಪರವಾದ ಧ್ವನಿ ಎತ್ತಲು ಸಹಕರಿಸಬೇಕು ಎಂದು ಕೋರಿದರು.

ಅನುಭವಿ ರಾಜಕಾರಣಿ: ಮಾಜಿ ಮೇಯರ್ ಹೆಚ್.ಎನ್.ಶ್ರೀಕಂಠಯ್ಯ ಮಾತನಾಡಿ, ಕಳೆದ ನಾಲ್ಕು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿರುವ ಮರಿತಿಬ್ಬೇಗೌಡರಿಗೆ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವ ಬದ್ಧತೆ ಇದೆ. ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಶಿಕ್ಷಕರ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಶಿಕ್ಷಕರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳಿಗೆ ಸೂಕ್ತ ಪರಿಹಾರ ಒದಗಿಸಲು ಸಮರ್ಥವಾದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಅವರಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು. ಮರಿತಿಬ್ಬೇಗೌಡರು ಶಿಕ್ಷಕರ ಸಮಸ್ಯೆಗಳನ್ನು ಪರಿಷತ್‌ನಲ್ಲಿ ಪ್ರಬಲವಾಗಿ ಮಂಡಿಸಿ ಅವುಗಳಿಗೆ ಸೂಕ್ತ ಪರಿಹಾರ ಒದಗಿಸುವಲ್ಲಿ ಯಶಸ್ವಿಯಾಗುತ್ತಾರೆ. ಅವರ ಪ್ರತಿಸ್ಪರ್ಧಿ ವಿವೇಕಾನಂದ ಓರ್ವ ಉದ್ಯಮಿಯಾಗಿದ್ದು, ಅವರಿಗೆ ಶಿಕ್ಷಕರ ಸಮಸ್ಯೆ ಅರ್ಥವಾಗುವುದಿಲ್ಲ.

ಶಿಕ್ಷಕರ ವೇತನ ತಾರತಮ್ಯದ ಬಗ್ಗೆ ಮರಿತಿಬ್ಬೇಗೌಡರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಶಿಕ್ಷಕರ ಬಗ್ಗೆ ಸಹಾನುಭೂತಿ ಹೊಂದಿದೆ. ಕಳೆದ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿದಂತೆ ಎನ್‌ಪಿಎಸ್ ಬದಲು ಓಪಿಎಸ್ ಜಾರಿಗೆ ನಮ್ಮ ಸರ್ಕಾರ ಬದ್ಧವಾಗಿದೆ. ಶಿಕ್ಷಕರ ಕೊರತೆಯನ್ನೂ ಸಹ ನೀಗಿಸಲು ಮುಂದಾಗಿ ಹೊಸ ಶಿಕ್ಷಕರ ನೇಮಕಾತಿ ನಡೆಸುತ್ತಿದೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮರಿತಿಬ್ಬೇಗೌಡರು ಶಿಕ್ಷಕರ ಪರವಾಗಿ ವಿಧಾನ ಪರಿಷತ್‌ನಲ್ಲಿ ಅತಿ ಹೆಚ್ಚು ಮಾತನಾಡಿರುವ ಕೀರ್ತಿ ಹೊಂದಿದ್ದಾರೆ. ಶಿಕ್ಷಕರನ್ನು ಕಾಯಂಗೊಳಿಸಲು, ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಶ್ರಮಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಕ್ಷೇತ್ರದ ಮತದಾರರು ಮರಿತಿಬ್ಬೇಗೌಡ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಕಾಂಗ್ರೆಸ್ ಸರ್ಕಾರವನ್ನು ಬಲಪಡಿಸಬೇಕು. ಮೇ 29ರಿಂದ ಶಾಲಾ-ಕಾಲೇಜು ಪುನರಾರಂಭವಾಗಲಿದ್ದು, ಖುದ್ದಾಗಿ ಮತದಾರರನ್ನು ಭೇಟಿ ಮಾಡಿ ಮತಯಾಚಿಸುತ್ತೇವೆ ಎಂದರು.

ಮಾಜಿ ಮೇಯರ್ ಬಿ.ಕೆ.ಪ್ರಕಾಶ್ ಮಾತನಾಡಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್-ಬಿಜೆಪಿ ಅಭ್ಯರ್ಥಿ ವಿವೇಕಾನಂದ ಕೇವಲ ಓರ್ವ ಉದ್ಯಮಿಯಷ್ಟೇ. ಅವರಿಗೆ ಶಿಕ್ಷಕರೊಂದಿಗೆ ಒಡನಾಟವಿಲ್ಲ. ಶಿಕ್ಷಣ ಕ್ಷೇತ್ರದ ಬಗ್ಗೆ ಮಾಹಿತಿ ಇಲ್ಲ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಅರಿವಿಲ್ಲ. ಆದರೆ, ಮರಿತಿಬ್ಬೇಗೌಡ ಸತತ ನಾಲ್ಕು ಬಾರಿ ಆಯ್ಕೆಯಾಗಿ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಸಂಪೂರ್ಣ ಅರಿವಿದ್ದು, ಹೆಚ್ಚಿನ ಒಡನಾಟವಿದೆ. ಹಾಗಾಗಿ ಶಿಕ್ಷಕ ಮತದಾರರು ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸುವ ಮೂಲಕ ಶಿಕ್ಷಕರ ಕ್ಷೇತ್ರದ ಘನತೆ ಎತ್ತಿ ಹಿಡಿಯಬೇಕು ಎಂದು ಮನವಿ ಮಾಡಿದರು.

ಮಾಜಿ ಮೇಯರ್ ನರಸಿಂಹ ಅಯ್ಯಂಗಾರ್ ಮಾತನಾಡಿ, ಈ ಹಿಂದೆ ಬಿಜೆಪಿ ಸರ್ಕಾರ ಪದವಿ ಅವಧಿಯನ್ನು 4 ವರ್ಷ ಮಾಡಲು ಮುಂದಾಗಿತ್ತು. ವಿದ್ಯಾರ್ಥಿಗಳು ಪದವಿ ಪಡೆಯಲು ನಾಲ್ಕು ವರ್ಷ ಬೇಕಾದರೆ, ಜೀವನಕ್ಕೆ ಕಷ್ಟವಾಗುತ್ತದೆ ಎಂದು ಹಾಲಿ ಇರುವ ಮೂರು ವರ್ಷದ ಅವಧಿಯನ್ನೇ ಮುಂದುವರೆಸಬೇಕು ಎಂದು ವಿಧಾನ ಪರಿಷತ್‌ನಲ್ಲಿ ಮರಿತಿಬ್ಬೇಗೌಡ ವಿವರವಾಗಿ ಹೇಳಿದ್ದರು. ಅಲ್ಲದೆ, ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಪ್ರಾಮಾಣಿಕ ಕೆಲಸ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಕ್ಷೇತ್ರ ಪ್ರತಿನಿಧಿಸಲು ಅವರೇ ಸಮರ್ಥ ಅಭ್ಯರ್ಥಿಯಾಗಿದ್ದಾರೆ ಎಂದು ತಿಳಿಸಿದರು.

ಮಾಜಿ ಮೇಯರ್ ಮೋದಾಮಣಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳಿಂದ ಬಡವರು ಸೇರಿದಂತೆ ಶಿಕ್ಷಕ ವರ್ಗಕ್ಕೂ ಪ್ರಯೋಜನ ದೊರೆಯುತ್ತಿದೆ. ಕಾಂಗ್ರೆಸ್ ಸರ್ಕಾರ ಯಾವುದೇ ಯೋಜನೆಗಳನ್ನು ಜಾರಿಗೊಳಿಸಿದರೂ ಒಂದು ವರ್ಗ, ಒಂದು ಸಮುದಾಯ ಹಾಗೂ ಒಂದೇ ಧರ್ಮಕ್ಕೆ ಸೀಮಿತಗೊಳಿಸಲ್ಲ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಕ್ಷೇತ್ರದ ಪ್ರಜ್ಞಾವಂತ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್‌ಗಳಾದ ದಕ್ಷಿಣಾ ಮೂರ್ತಿ, ಟಿ.ಬಿ.ಚಿಕ್ಕಣ್ಣ, ಎಂ.ಸಿ.ರಾಜೇಶ್ವರಿ ಪುಟ್ಟಸ್ವಾಮಿ, ಪುಷ್ಪಲತಾ ಚಿಕ್ಕಣ್ಣ, ಪುಷ್ಪಲತಾ ಜಗನ್ನಾಥ್, ನಗರ ಕಾಂಗ್ರೆಸ್ ಅಧ್ಯಕ್ಷ ಮೂರ್ತಿ, ಕಾರ್ಯದರ್ಶಿ ಶಿವಣ್ಣ, ಭಾಸ್ಕರ್‌ಗೌಡ, ಮಾಧ್ಯಮ ವಕ್ತಾರ ಮಹೇಶ್ ಇದ್ದರು.

ವಿದ್ಯಾರ್ಥಿಗಳ ಜೀವನದಲ್ಲಿ ಗುರುಗಳು ನಂದಾದೀಪವಿದ್ದಂತೆ

ಜಾನಪದ ಕಲಾವಿದ ಡಾ. ಮಳವಳ್ಳಿ ಮಹದೇವಸ್ವಾಮಿ ಅಭಿಮತ



ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಸೋಮವಾರ ನಡೆದ ಸಾಂಸ್ಕೃತಿಕ ವೇದಿಕೆಯ ಸಮಾರೋಪ ಸಮಾರಂಭದಲ್ಲಿ ಜಾನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ ಮಾತನಾಡಿದರು.

ಮೈಸೂರು, ಮೇ 27(ಎಂಟಿವೈ)- ಪೋಷಕರು ಪಡುವ ಕಷ್ಟವನ್ನು ವಿದ್ಯಾರ್ಥಿಗಳು ಮನದಲ್ಲಿಟ್ಟುಕೊಂಡು, ಶ್ರೇಯಸ್ಸಿನಂತಿರುವ ಗುರುಗಳ ಆಶೀರ್ವಾದಕ್ಕೆ ಪಾತ್ರರಾಗಿ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಜಾನಪದ ಕಲಾವಿದ ಡಾ. ಮಳವಳ್ಳಿ ಮಹದೇವಸ್ವಾಮಿ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಭಾಂಗಣದಲ್ಲಿ ಸೋಮವಾರ ನಡೆದ ಕಾಲೇಜಿನ ಶೈಕ್ಷಣಿಕ ಸಾಲಿನ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಜೀವನದಲ್ಲಿ ಗುರುಗಳು ನಂದಾದೀಪದಂತೆ. ವಿದ್ಯೆ ಕಲಿಸುವ ಗುರುಗಳಿಗೆ ಶರಣೆಂದು ಬಾಳುವವರೇ ನಿಜವಾದ ಶರಣರು. ಜೀವ ತೇಯ್ದರು ಗುರುವಿನ ಋಣ ತೀರಿಸಲು ಸಾಧ್ಯವಿಲ್ಲ. ಗುರುಗಳು ತರಗತಿಯಲ್ಲಿ ಪಾಠ ಮಾಡುವಾಗ ವಿದ್ಯಾರ್ಥಿಗಳು ಮೊಬೈಲ್ ನೋಡಿದರೆ ಜೀವನ ರೂಪಿಸಿಕೊಳ್ಳಲು ಕಷ್ಟವಾಗುತ್ತದೆ. ತಮ್ಮ ಮಕ್ಕಳ ಭವಿಷ್ಯ ಉತ್ತಮವಾಗಲೆಂದು ಪೋಷಕರು ಕಷ್ಟಪಟ್ಟು ಉನ್ನತ ಶಿಕ್ಷಣ ಕೊಡಿಸುತ್ತಿದ್ದಾರೆ. ನಿಮ್ಮ ಪೋಷಕರ ಕಷ್ಟ ನಿಮ್ಮ ಮನದಲ್ಲಿರಬೇಕು. ಕಷ್ಟಪಟ್ಟು ಓದಿ ತಮ್ಮ ಬದುಕು ರೂಪಿಸಿಕೊಳ್ಳಬೇಕು ಎಂದರು.

ವಿದ್ಯಾಭ್ಯಾಸ ಮುಗಿಸಿದ ಬಳಿಕ ಉದ್ಯೋಗ ಸಿಕ್ಕರೆ ಒಳ್ಳೆಯದು. ಇಲ್ಲದಿದ್ದರೆ ಸ್ವಯಂ ಉದ್ಯೋಗ ಮಾಡಬೇಕು. ಕಲೆಗೆ ಮನಸೋತರೆ ಉತ್ತಮ ಬದುಕು ರೂಪಿಸಿಕೊಳ್ಳಬಹುದು. ಅದಕ್ಕೆ ನಾನೇ ಉದಾಹರಣೆ. ಒಂದೊತ್ತಿನ ಊಟಕ್ಕಾಗಿ ಪದ ಕಲಿತೆ. ಕರ್ಮದ ದಾರಿಯಲ್ಲಿ ಹೋಗದೇ ಧರ್ಮದ ಹಾದಿಯಲ್ಲಿ ಹೋದರೆ ಭಗವಂತ ನಮ್ಮನ್ನು ಕಾಪಾಡುತ್ತಾನೆ ಎಂದು ಅಭಿಪ್ರಾಯಪಟ್ಟರು.

ಮಹದೇಶ್ವರ, ಮಂಟೇಸ್ವಾಮಿ, ಯಡಿಯೂರು ಸಿದ್ಧಲಿಂಗೇಶ್ವರ ಮುಂತಾದ ಪವಾಡ ಪುರುಷರು ಜೋಳಿಗೆ ಹಾಕೊಂಡು ಊರೂರು ತಿರುಗಿ ಭಿಕ್ಷೆ ಮಾಡುತ್ತಾ ಜನರಿಗೆ ತಿಳವಳಿಕೆ ಕೊಡುತ್ತಾ ಒಂದು ಕಡೆ ಐಕ್ಯವಾದರು. ಗಾಂಧೀಜಿ, ಜವಾಹರ್ ಲಾಲ್ ನೆಹರೂ, ಅಂಬೇಡ್ಕರ್ ಬ್ರಿಟಿಷರಿಂದ ದೇಶದ ಬಿಡುಗಡೆಗಾಗಿ ಜೀವ ಸವೆಸಿದರು. ಈಗ ನಾನೊಬ್ಬ ಬದುಕಿದರೆ ಸಾಕೆಂಬ ಸ್ವಾರ್ಥ ಬಂದಿದೆ ಎಂದು ವಿಷಾದಿಸಿದರು.

ಆ ಕಾಲದಲ್ಲಿಯೇ ಬಿಳಿಗಿರಿ ರಂಗಯ್ಯ ಅಂತರ್ಜಾತಿ ವಿವಾಹವಾಗಿದ್ದಾರೆ. ಇದನ್ನೇ ನಮ್ಮ ಜಾನಪದರು ಪದ ಕಟ್ಟಿ ಹಾಡಿದರು ಎಂದ ಮಹದೇವಸ್ವಾಮಿ ಅವರು, 'ಅನ್ಯಾಯ ಕಾರಿ ಬ್ರಹ್ಮ ಈ ಸುಂದರನ ಸನ್ಯಾಸಿ ಮಾಡಬಹುದೇ' ಗೀತೆಯನ್ನು ಹಾಡಿ ವಿದ್ಯಾರ್ಥಿನಿಯರನ್ನು ರಂಜಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ಬಿ.ವಿ. ವಸಂತಕುಮಾರ್ ವಹಿಸಿದ್ದರು. ವೇದಿಕೆಯಲ್ಲಿ ನಟ ಕಡೂರು ಧರ್ಮಣ್ಣ, ಪಠ್ಯೇತರ ಚಟುವಟಿಕೆ ಸಂಚಾಲಕ ಡಾ. ನಂಜುಂಡಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಂಶೋಧನೆ, ಅಭಿವೃದ್ಧಿ ಬೆಂಬಲಿಸಿ: ಕಾರ್ಪೊರೇಟ್‌ಗಳು, ಪಬ್ಲಿಕ್ ಲೀಡರ್ಸ್‌ಗೆ ಉಪರಾಷ್ಟ್ರಪತಿ ಕರೆ



ಬೆಳಗಾವಿ: ದೇಶದ ಆರ್ಥಿಕ ಬೆಳವಣಿಗೆ ಮತ್ತು ಅದರ ರಾಜತಾಂತ್ರಿಕ ಶಕ್ತಿಯಲ್ಲಿಯೂ ಪ್ರತಿಫಲಿಸುವ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕಾರ್ಪೊರೇಟ್‌ಗಳು ಮತ್ತು ಸಾರ್ವಜನಿಕ ನಾಯಕರು ಬೆಂಬಲಿಸುವಂತೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಸೋಮವಾರ ಮನವಿ ಮಾಡಿದ್ದಾರೆ.

ICMR ನ 18ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಉಪ ರಾಷ್ಟ್ರಪತಿ, 2047ರಲ್ಲಿ ವಿಕಸಿತ ಭಾರತಕ್ಕಾಗಿ ಇಡೀ ದೇಶಾದ್ಯಂತ ಅಭಿಯಾನ ನಡೆದಿದ್ದು, ಪ್ರತಿಯೊಬ್ಬ ಭಾರತೀಯರು ಸದೃಢ ಮತ್ತು ಆರೋಗ್ಯವಂತರಾಗಿರುವ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ನಾವು ದೊಡ್ಡ ಕಾಲದಲ್ಲಿ ಬದುಕುತ್ತಿದ್ದೇವೆ. ಮಾನವೀಯತೆಯ ಆರನೇ ಒಂದು ಭಾಗದ ತವರು ಭಾರತ ಇನ್ನು ಮುಂದೆ ಮಲಗುವ ರಾಷ್ಟ್ರವಾಗಿಲ್ಲ, ಅಭಿವೃದ್ಧಿಯ ರಾಷ್ಟ್ರವಾಗಿದ್ದು, ಅಭಿವೃದ್ಧಿಯನ್ನು ತಡೆಯಲಾಗದು ಎಂದರು.


ತಮ್ಮ ಸಂಸದೀಯ ದಿನಗಳು ಮತ್ತು 1991ರಲ್ಲಿ ಕೇಂದ್ರ ಸಚಿವರಾಗಿದ್ದ ಸಮಯವನ್ನು ನೆನಪಿಸಿಕೊಂಡ ಧನಕರ್, 1990 ರಲ್ಲಿ ನಮ್ಮ ಆರ್ಥಿಕತೆಯ ಗಾತ್ರವು ಲಂಡನ್ ಮತ್ತು ಪ್ಯಾರಿಸ್‌ಗಿಂತ ಚಿಕ್ಕದಾಗಿತ್ತು ಯುಕೆಗಿಂತ ಐದನೇ ಅತಿದೊಡ್ಡ ಜಾಗತಿಕ ಆರ್ಥಿಕತೆಯಾಗಿರುವ ನಾವು ಈ ಸಮಯದಲ್ಲಿ ಎಲ್ಲಿದ್ದೇವೆ ಎಂಬುದನ್ನು ನೋಡಿ. ಅವರು 100 ವರ್ಷಗಳ ಕಾಲ ನಮ್ಮನ್ನು ಆಳಿದರು. (ನಾವು) ಫ್ರಾನ್ಸ್‌ಗಿಂತ ಮುಂದಿದ್ದೇವೆ ಮತ್ತು ನಾವು ಜಪಾನ್ ಮತ್ತು ಜರ್ಮನಿಗಿಂತ ಮುಂದಿರಲಿರುವ ಸಮಯವಾಗಲಿದೆ. ಇದು ಸಣ್ಣ ಸಾಧನೆಯಲ್ಲ ಎಂದರು.

ಧನಕರ್ ಅವರು ರೋಗ ಮಾತ್ರವಲ್ಲದೆ ಅದರ ಮೂಲವನ್ನು ಒಳಗೊಂಡಿರುವ ಅಗತ್ಯವನ್ನು ಒತ್ತಿ ಹೇಳಿದರು. ಮುನ್ನೆಚ್ಚರಿಕೆ ಮತ್ತು ತಡೆಗಟ್ಟುವಿಕೆಗೆ ಹೆಚ್ಚಿನ ಗಮನ ನೀಡಬೇಕು ಎಂದು ಅವರು ಹೇಳಿದರು. ನಮ್ಮೊಂದಿಗೆ ಈಗಾಗಲೇ ಇರುವ ಜ್ಞಾನದ ಪ್ರಸಾರದಿಂದ ಇದನ್ನು ಮಾಡಬಹುದು. ದೇಶದಲ್ಲಿ ಅಭಿವೃದ್ಧಿ ಹೊಂದಬೇಕು. 2047 ರಲ್ಲಿ ವಿಕಸಿತ ಭಾರತದ ಭಾಗವಾಗಿರುವುದರಿಂದ ಪ್ರತಿಯೊಬ್ಬ ಭಾರತೀಯನು ಸದೃಢವಾಗಿರಬೇಕು ಮತ್ತು ಆರೋಗ್ಯಕರವಾಗಿರಬೇಕು ಆಕಾಶ, ಬಾಹ್ಯಾಕಾಶ ಕೂಡ ನಮ್ಮ ಬೆಳವಣಿಗೆಯ ಮಿತಿಯಲ್ಲ ಮತ್ತು ಅದು ನಡೆಯುತ್ತಿದೆ ಎಂದು ಅವರು ಹೇಳಿದರು.

ಉಪರಾಷ್ಟ್ರಪತಿ ಪ್ರಕಾರ, ಆಯುರ್ವೇದ, ಸಿದ್ಧ, ಯುನಾನಿ ಮತ್ತು ಯೋಗವನ್ನು ಒಳಗೊಂಡಿರುವ ಭಾರತ ಶ್ರೀಮಂತ ಸಾಂಪ್ರದಾಯಿಕ ಔಷಧಗಳು ನಮ್ಮ ಪೂರ್ವಜರ ಆಳವಾದ ಬುದ್ಧಿವಂತಿಕೆಗೆ ಸಾಕ್ಷಿಯಾಗಿದೆ. ಅವರು ವಿಜ್ಞಾನ, ತತ್ವಶಾಸ್ತ್ರ ಮತ್ತು ಆಧ್ಯಾತ್ಮಿಕತೆಯ ಪರಿಪೂರ್ಣ ಮಿಶ್ರಣವನ್ನು ಸಾಕಾರಗೊಳಿಸಿದ್ದಾರೆ. ಮನಸ್ಸು, ದೇಹ, ಆತ್ಮ ಮತ್ತು ಪ್ರಕೃತಿಯ ನಡುವಿನ ಸಾಮರಸ್ಯದ ಸಮತೋಲನವನ್ನು ಒತ್ತಿಹೇಳಿದ್ದಾರೆ. ದೇಶವು ದೂರದೃಷ್ಟಿಯ ನಾಯಕತ್ವವನ್ನು ಹೊಂದಿದೆ ಎಂದು ನಾವು ಬಾಹ್ಯಾಕಾಶದಲ್ಲಿ, ಭೂಮಿಯಲ್ಲಿ, ರಸ್ತೆಗಳಲ್ಲಿ, ಮೂಲಸೌಕರ್ಯದಲ್ಲಿ, ಸಮುದ್ರದಲ್ಲಿ, ರಕ್ಷಣೆಯಲ್ಲಿ ದೊಡ್ಡ ಸಾಧನೆ ಮಾಡಿದ್ದೇವೆ ಎಂದು ಧನಕರ್ ಹೇಳಿದರು.

ಉಗ್ರರು, ಹಲ್ಲೆಕೋರರ ಕುಟುಂಬ ಸದಸ್ಯರಿಗೆ ಸರ್ಕಾರಿ ಉದ್ಯೋಗವಿಲ್ಲ

ಗೃಹ ಸಚಿವ ಅಮಿತ್ ಶಾ



ನವದೆಹಲಿ: ಜಮ್ಮು ಮತ್ತು ಕಾಶ್ಮೀರದಲ್ಲಿ ಯಾವುದೇ ಭಯೋತ್ಪಾದಕರು, ಕಲ್ಲು ತೂರಾಟ ನಡೆಸಿ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯುಂಟುಮಾಡುವುದು, ತೊಂದರೆ ನೀಡುವವವರ ಕುಟುಂಬ ಸದಸ್ಯರಿಗೆ ಮತ್ತು ನಿಕಟವರ್ತಿಗಳಿಗೆ ಸರ್ಕಾರಿ ಉದ್ಯೋಗ ಸಿಗುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕಠಿಣ ಸಂದೇಶ ರವಾನಿಸಿದ್ದಾರೆ.

ಕೇಂದ್ರದ ನರೇಂದ್ರ ಮೋದಿ ಸರ್ಕಾರವು ಕೇವಲ ಭಯೋತ್ಪಾದಕರನ್ನು ಗುರಿಯಾಗಿಸಿಕೊಂಡಿರುವುದು ಮಾತ್ರವಲ್ಲದೆ ಭಯೋತ್ಪಾದಕ ಪರಿಸರ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಮುಂದಾಗಿದೆ. ಇದರ ಪರಿಣಾಮವಾಗಿ ದೇಶದಲ್ಲಿ ಭಯೋತ್ಪಾದಕ ಘಟನೆಗಳು ಬಹಳಷ್ಟು ಕಡಿಮೆಯಾಗಿದೆ.

ಕಾಶ್ಮೀರದಲ್ಲಿ, ಯಾರಾದರೂ ಭಯೋತ್ಪಾದಕ ಸಂಘಟನೆಗೆ ಸೇರಿದರೆ, ಅವರ ಕುಟುಂಬದ ಸದಸ್ಯರಿಗೆ ಯಾವುದೇ ಸರ್ಕಾರಿ ಉದ್ಯೋಗ ಸಿಗುವುದಿಲ್ಲ ಎಂಬ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಕೆಲವು ಮಾನವ ಹಕ್ಕುಗಳ ಕಾರ್ಯಕರ್ತರು ಈ ನಿರ್ಧಾರದ ವಿರುದ್ಧ ಸುಪ್ರೀಂಕೋರ್ಟ್‌ಗೆ ಹೋದರು. ಆದರೆ, ಅಂತಿಮವಾಗಿ ಸರ್ಕಾರವು ಮೇಲುಗೈ ಸಾಧಿಸಿತು ಎಂದರು. ಕುಟುಂಬದಿಂದ ಯಾರಾದರೂ ಮುಂದೆ ಬಂದು ತನ್ನ ಹತ್ತಿರದ ಸಂಬಂಧಿ ಭಯೋತ್ಪಾದಕ ಸಂಘಟನೆಗೆ ಸೇರಿದ್ದಾರೆ ಎಂದು ಅಧಿಕಾರಿಗಳಿಗೆ ತಿಳಿಸಿದರೆ ಸರ್ಕಾರವು ವಿನಾಯಿತಿ ನೀಡುತ್ತದೆ ಎಂದು ಗೃಹ ಸಚಿವರು ಹೇಳಿದರು. ಅಂತಹ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು ಎಂದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿ

ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್ ಮನವಿ

ಮೈಸೂರು, ಮೇ 27(ಎಂಟಿವೈ)- ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಮನವಿ ಮಾಡಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರ ಉತ್ತಮ ಆಡಳಿತ ನಡೆಸುತ್ತಿದ್ದು, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಪ್ರಾಮುಖ್ಯತೆ ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಚುನಾವಣೆಯಲ್ಲಿ ಮತದಾರರು ಪಕ್ಷಾತೀತ, ಜಾತ್ಯಾತೀತವಾಗಿ ಅಭಿವೃದ್ಧಿಗಾಗಿ ಕಾಂಗ್ರೆಸ್‌ಗೆ ಮತ ನೀಡಬೇಕು. ಹೊಸ ಪಿಂಚಣಿ ಪದ್ಧತಿ ರದ್ದು, ಮಾಡಿ ಹಳೆಯ ಪಿಂಚಣಿ ವ್ಯವಸ್ಥೆ ಮರು ಜಾರಿಗೊಳಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಶಿಕ್ಷಕರು ಮತ್ತು ಪದವೀಧರರ ಸಮಸ್ಯೆ ಇತ್ಯರ್ಥಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಕುಮಾರ ನಾಯಕ್ ಅವರ ವರದಿ ಅನುಷ್ಠಾನ ಮಾಡಬೇಕಾಗಿದೆ. ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಬದ್ಧವಾಗಿದೆ. ಶಿಕ್ಷಕರು, ಪದವೀಧರರು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೇ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಬೇಕು ಎಂದು ಕೋರಿದರು.

ಮರಿತಿಬ್ಬೇಗೌಡ ಅವರನ್ನು ಬೆಂಬಲಿಸಿ: ಶಿಕ್ಷಕರ ಕ್ಷೇತ್ರದಿಂದ ನಾಲ್ಕು ಬಾರಿ ಜಯಗಳಿಸಿ ಐದನೇ ಬಾರಿಗೆ ಸ್ಪರ್ಧಿಸಿರುವ ಮರಿತಿಬ್ಬೇಗೌಡ ಅವರನ್ನು ಭಾರಿ ಮತಗಳ ಅಂತರದಿಂದ ಗೆಲ್ಲಿಸಬೇಕು. ಈ ಹಿಂದೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದಾಗಲೂ ವಿರೋಧ ಪಕ್ಷದಲ್ಲಿದ್ದರು. ಆಡಳಿತ ಪಕ್ಷದಲ್ಲಿಲ್ಲದಿದ್ದರೂ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಈ ಬಾರಿ ಅವರದೇ ಪಕ್ಷ ಅಧಿಕಾರದಲ್ಲಿದ್ದು, ಶಿಕ್ಷಕರ ಪರವಾಗಿ ಉತ್ತಮ ಕೆಲಸ ಮಾಡಲಿದ್ದಾರೆ. ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸಿದ ಬಿಜೆಪಿ ಸರ್ಕಾರಗಳು ವಿದ್ಯಾವಂತರಿಗೆ ಉದ್ಯೋಗ ಕೊಡಲು ವಿಫಲವಾಗಿದೆ. ಕಾಂಗ್ರೆಸ್ ಸರ್ಕಾರ ಉದ್ಯೋಗ ಕೊಡಲು ಬದ್ಧವಾಗಿದ್ದು, ಪದವೀಧರರು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಬೇಕು ಎಂದು ತಿಳಿಸಿದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 20 ಸಾವಿರಕ್ಕೂ ಅಧಿಕ ಮತದಾರರಿದ್ದು, ಮಹಿಳಾ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರ ಸಮಸ್ಯೆಗಳ ಬಗ್ಗೆ ನಮಗೇ ಅರಿವಿದೆ. ಪಂಚ ಗ್ಯಾರಂಟಿಗಳಿಂದ ಜನ ಸಾಮಾನ್ಯರಿಗೆ ಅನುಕೂಲವಾಗಿದೆ ಎಂದು ಪ್ರಚಾರದ ವೇಳೆ ಶಿಕ್ಷಕಿಯರು ತಿಳಿಸಿದ್ದಾರೆ. ಜನ ಸಾಮಾನ್ಯರ ಪರವಾಗಿ ಕೆಲಸ ಮಾಡಲು ಅವಕಾಶ ನೀಡುವಂತೆ ಹೇಳಿದರು.

ಮೀಸಲಾತಿಯಿಂದ ಮಾತ್ರ ಅವಕಾಶ ಸಿಕ್ಕಿದೆ: ಮೀಸಲಾತಿ ಇಲ್ಲದಿದ್ದರೆ ಮಹಿಳೆಯರಿಗೆ ರಾಜಕೀಯದಲ್ಲಿ ಅವಕಾಶವೇ ಸಿಗುತ್ತಿರಲಿಲ್ಲ. ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲು ನೂರಾರು ಆಕಾಂಕ್ಷಿಗಳಿದ್ದಾರೆ. ನನಗೆ ಅವಕಾಶ ಸಿಗುವ ಭರವಸೆ ಇದೆ. ನಾನು ಮಾಡಿದ ಕೆಲಸವನ್ನು ಹೈಕಮಾಂಡ್ ಪರಿಗಣಿಸುವ ವಿಶ್ವಾಸವಿದೆ. ಮೀಸಲಾತಿ ಕಾರಣದಿಂದ ನಾನು ಜಿ.ಪಂ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಯಿತು. ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ದಲಿತ ಎಡಗೈ ಸಮುದಾಯದವರಿಗೆ ಟಿಕೆಟ್ ನೀಡಿದ್ದರಿಂದ ನನಗೆ ಅವಕಾಶ ತಪ್ಪಿತು. ಮಹಿಳೆಯರಿಗೆ ಅವಕಾಶ ನೀಡುವಾಗ ಜಾತಿ ನೋಡಬಾರದು ಎಂದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ಪುಷ್ಪವಲ್ಲಿ, ಮಾಜಿ ಮೇಯರ್‌ಗಳಾದ ಪುಷ್ಪಾಲತಾ ಚಿಕ್ಕಣ್ಣ, ಪುಷ್ಪಲತಾ ಜಗನ್ನಾಥ್, ಮೋದಾಮಣಿ, ರಾಜೇಶ್ವರಿ ಪುಟ್ಟಸ್ವಾಮಿ, ಮುಖಂಡರಾದ ಲತಾ ಸಿದ್ದಶೆಟ್ಟಿ, ಲತಾ ಮೋಹನ್ ಇದ್ದರು.



ಅಂಬಾರಿ ಆನೆ 'ಅರ್ಜುನ'ನ ಸ್ಮಾರಕ ನಿರ್ಮಾಣ ಹೆಸರಲ್ಲಿ ವಸೂಲಿ ದಂಧೆ

● ಮೈಸೂರು ಮೂಲದ ನವೀನ್ ಬೆಳ್ಳಿ ವಾಟ್ಸಪ್ ಗ್ರೂಪ್ ಮೂಲಕ ಹಣ ಸಂಗ್ರಹ ಆರೋಪ; ಅರಣ್ಯ ಇಲಾಖೆಗೆ ದೂರು ● ಅರ್ಜುನನ ಹೆಸರಲ್ಲಿ ಚೆಲ್ಲಾಟಕ್ಕೆ ವನ್ಯಜೀವಿ ಪ್ರೇಮಿಗಳಿಂದ ಆಕ್ರೋಶ

ಮೈಸೂರು,ಮೇ 27(ಎಂಟಿವೈ)– ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದವೇರಿದ ಸಲಗ ನಡೆಸಿದ ದಾಳಿಗೆ ತುತ್ತಾಗಿ ವೀರಮರಣವನ್ನಪ್ಪಿದ ದಸರಾ ಆನೆ 'ಅರ್ಜುನ'ನ ಸ್ಮಾರಕ ನಿರ್ಮಾಣ ಮಾಡುವುದಾಗಿ ಮೈಸೂರು ಮೂಲದ ಯುವಕನೊಬ್ಬ ವಾಟ್ಸಪ್ ಗ್ರೂಪ್ ಮೂಲಕ ಹಣ ಸಂಗ್ರಹಿಸಿ, ದುರುಪಯೋಗ ಮಾಡಿಕೊಂಡಿದ್ದಾನೆ ಎಂದು ಪರಿಸರ ಪ್ರೇಮಿಗಳು ಆರೋಪಿಸಿದ್ದು, ಈ ಸಂಬಂಧ ಅರಣ್ಯ ಇಲಾಖೆಗೆ ದೂರು ನೀಡಿದ್ದಾರೆ.

ನಾಡಹಬ್ಬ ದಸರಾ ಮಹೋತ್ಸವದಲ್ಲಿ ಸತತ ಎಂಟು ಬಾರಿ ಅಂಬಾರಿ ಹೊತ್ತಿದ್ದ ಅರ್ಜುನ 2023ರ ಡಿಸೆಂಬರ್‌ನಲ್ಲಿ ಹಾಸನದ ಯಸಳೂರು ವಲಯದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಮದವೇರಿದ ಒಂಟಿ ಸಲಗವೊಂದು ದಾಳಿ ನಡೆಸಿತ್ತು. ಗಂಭೀರ ಗಾಯಗೊಂಡಿದ್ದ ಅರ್ಜುನ ಸ್ಥಳದಲ್ಲೇ ಮೃತಪಟ್ಟಿತ್ತು. ಸತತ 8 ಬಾರಿ ಹಾಗೂ ಈ ಹಿಂದೆ ಒಂದು ಬಾರಿ ಸೇರಿದಂತೆ ಒಟ್ಟು 9 ಬಾರಿ ಚಿನ್ನದ ಅಂಬಾರಿ ಹೊತ್ತು ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದ ಅರ್ಜುನನ ಸಾವು, ಪ್ರಾಣಿ ಪ್ರಿಯರು ಮಾತ್ರವಲ್ಲದೆ, ರಾಜ್ಯದ ಜನರಿಗೆ ಅತೀವ ನೋವುಂಟು ಮಾಡಿತ್ತು.

ಅರ್ಜುನನ ಸ್ಮಾರಕ ನಿರ್ಮಾಣ ವಿಚಾರವನ್ನು ಕೆಲವರು ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಳ್ಳಲು ಮುಂದಾಗಿದ್ದು, ನಟ ದರ್ಶನ್ ಹೆಸರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಅರ್ಜುನನ ಸ್ಮಾರಕವನ್ನು ಹಾಸನದ ಯಸಳೂರಿನ ಮೀಸಲು ಅರಣ್ಯ ಪ್ರದೇಶ ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ಬಳ್ಳೆ ಶಿಬಿರದ ಬಳಿಯೂ ನಿರ್ಮಾಣ ಮಾಡಬೇಕೆಂಬ ಕೂಗು ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ಸರ್ಕಾರ ಸ್ಮಾರಕ ನಿರ್ಮಾಣಕ್ಕೆ ಬದ್ಧವಾಗಿರುವುದಾಗಿ ಪ್ರಕಟಿಸಿತ್ತು. ಕಳೆದ 15 ದಿನದ ಹಿಂದಷ್ಟೇ ನಟ ದರ್ಶನ್ ಟ್ವೀಟ್ ಮಾಡಿ, ಅರ್ಜುನನ ಸ್ಮಾರಕ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆಸುವಂತೆಯೂ, ಅಂತ್ಯಕ್ರಿಯೆ ಮಾಡಿದ ಸ್ಥಳದಲ್ಲಿ ಮಳೆಗಾಲದಿಂದ ಕುರುಹುಗಳು ಹಾಳಾಗದಂತೆ ಎಚ್ಚರ ವಹಿಸಬೇಕು ಎಂದು ಮನವಿ ಮಾಡಿದರು.



ಹಾಸನದ ಯಸಳೂರು ವಲಯದಲ್ಲಿ ದಸರಾ ಆನೆ ಅರ್ಜುನ ಮೃತಪಟ್ಟ ಸ್ಥಳದಲ್ಲಿ ಸಮಾಧಿಗೆ ತಡೆಗೋಡೆ ನಿರ್ಮಿಸಿರುವುದು

ಅರ್ಜುನ ಪಡೆ ವಾಟ್ಸಪ್ ಗ್ರೂಪ್ ರಚನೆ: ಒಂದೆಡೆ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಟ್ವೀಟ್ ಮಾಡುತ್ತಿದ್ದಂತೆ ಮೈಸೂರು ಮೂಲದ ನವೀನ್ ಹೆಚ್.ಎನ್ (ನವೀನ್ ಬೆಳ್ಳಿ) ಎಂಬಾತ ವನ್ಯಜೀವಿ ಪ್ರೇಮಿಗಳು, ವನ್ಯಜೀವಿ ಛಾಯಾಗ್ರಾಹಕರು, ಅರ್ಜುನನ ಅಭಿಮಾನಿಗಳು ಸೇರಿದಂತೆ ಆಸಕ್ತರ ವಾಟ್ಸಪ್ ಗ್ರೂಪ್‌ವೊಂದನ್ನು ರಚಿಸಿ, ಅರ್ಜುನನ ಸ್ಮಾರಕ ನಿರ್ಮಾಣ ಮಾಡಲು ಆಸಕ್ತರು ಹಣಕಾಸಿನ ನೆರವು ನೀಡಬಹುದು ಎಂದು 'ಅರ್ಜುನ ಪಡೆ' ಗ್ರೂಪ್‌ನಲ್ಲಿ ಸಂದೇಶ ಕಳುಹಿಸಿದ್ದಾನೆ. ಇದರಿಂದ ಗ್ರೂಪ್ ಸದಸ್ಯರು 101 ರೂ. ನಿಂದ 1001 ರೂ.ವರೆಗೂ ನವೀನ್‌ಗೆ ಗೂಗಲ್ ಪೇ, ಫೋನ್ ಪೇ ಮೂಲಕ ಹಣ ಸಂದಾಯ ಮಾಡಿದ್ದಾರೆ.

ಕಡಪ ಕಲ್ಲು ಕೊಡುಗೆ: ಅರ್ಜುನನ ಅಂತ್ಯಕ್ರಿಯ ಮಾಡಿದ ಸ್ಥಳದಲ್ಲಿ ಸುತ್ತಲೂ ತಡೆಗೋಡೆಯಂತೆ ಅಳವಡಿಸಲು ನಟ ದರ್ಶನ್ ತಮ್ಮ ಸ್ನೇಹಿತರ ಮೂಲಕ ಕಡಪ ಕಲ್ಲನ್ನು ಕೊಡುಗೆ ನೀಡಿದ್ದಾರೆ. ಅದನ್ನು ಹಾಸನದ ಯಸಳೂರು ವಲಯದ ಅರ್ಜುನನ ಅಂತ್ಯಕ್ರಿಯೆ ಮಾಡಿದ ಸ್ಥಳಕ್ಕೆ ತಂದು, ಸಮಾಧಿ ಸುತ್ತಲೂ ಅಳವಡಿಸಲು ಮುಂದಾದಾಗ ಅರಣ್ಯ ಇಲಾಖೆ ಸಿಬ್ಬಂದಿ ತಡೆಯೊಡ್ಡಿದ್ದಾರೆ.

ಮೀಸಲು ಅರಣ್ಯ ಪ್ರದೇಶ: ದಸರಾ ಆನೆ ಅರ್ಜುನ ಮೃತಪಟ್ಟ ಜಾಗ ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಅಲ್ಲಿ ಸ್ಮಾರಕ ನಿರ್ಮಿಸಲು ಅನುಮತಿ ಬೇಕಾಗಿದೆ. ಮಾವುತ ವಿನು ಹಾಗೂ ನವೀನ್ ಎಂಬುವವರು ಯಸಳೂರು ವ್ಯಾಪ್ತಿಯ ಎಸಿಎಫ್ ಅನುಮತಿ ಪಡೆದು ಕಲ್ಲನ್ನು ತೆಗೆದುಕೊಂಡು ಹೋಗಿರುವುದಾಗಿ ಹೇಳಿದ್ದಾರೆ. ಆದರೆ, ಸ್ಥಳಕ್ಕೆ ಬಂದ ಆರ್‌ಎಫ್‌ಓ, ಸ್ಮಾರಕವನ್ನು ಇಲಾಖೆ ನಿರ್ಮಿಸುತ್ತದೆ ಎಂದು ಹೇಳಿದ್ದಾರೆ. ಅಲ್ಲದೆ, ಕಲ್ಲು ತಂದಿದ್ದಕ್ಕೆ 30 ಸಾವಿರ ರೂ. ಅನ್ನು ಅರಣ್ಯ ಸಿಬ್ಬಂದಿ ನವೀನ್ ಎಂಬಾತನ ನಂಬರ್‌ಗೆ ಆನ್‌ಲೈನ್ ಮೂಲಕ ನೀಡಿದ್ದಾರೆ.



ಸ್ಕ್ಯಾನರ್ ಬಳಕೆ

ಈ ಕುರಿತು ಮಲೆನಾಡು ರಕ್ಷಣಾ ವೇದಿಕೆಯ ಅಧ್ಯಕ್ಷ ಸಾಗರ್ ಜಾನೇಕೆರೆ ಪತ್ರಕರ್ತರೊಂದಿಗೆ ಮಾತನಾಡಿ, ಅರ್ಜುನನ ಸ್ಮಾರಕ ನಿರ್ಮಾಣ ಮಾಡುತ್ತಿರುವುದಾಗಿ ನಟ ದರ್ಶನ್ ಬೆಂಬಲಿಗರು ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಿಕೊಂಡಿದ್ದರು. ಸ್ಥಳೀಯರಾಗಿ ನಾವು ನೆರವು ನೀಡುವುದಕ್ಕೆ ಬಯಸಿ ಸ್ಮಾರಕದ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ನವೀನ್ ಎಂಬಾತ ಸ್ಮಾರಕ ನಿರ್ಮಿಸುತ್ತಿದ್ದಾನೆ ಎಂಬ ಮಾಹಿತಿ ತಿಳಿಯಿತು. ಆತನ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿದಾಗ ವಾಟ್ಸಪ್ ಗ್ರೂಪ್ ಮೂಲಕ ಲಕ್ಷಾಂತರ ರೂ. ಸಂಗ್ರಹಿಸಿದ್ದಲ್ಲದೆ, ನಟ ದರ್ಶನ್ ಅವರ ಹೆಸರನ್ನು ದುರುಪಯೋಗ ಮಾಡಿಕೊಂಡಿರುವುದು ತಿಳಿಯಿತು. ಅರ್ಜುನನ ಫೋಟೋ ಕೆಳಗೆ ಅವನ ವೈಯಕ್ತಿಕ ಬ್ಯಾಂಕ್ ಖಾತೆಯ ಸ್ಕ್ಯಾನರ್ ಹಾಕಿದ್ದಾನೆ. ಅಲ್ಲದೆ, ನಟ ದರ್ಶನ್ ಆಪ್ತರಿಂದ ಪಡೆದು ತಂದ ಕಡಪ ಕಲ್ಲಿನ ಸ್ಲಾಬ್‌ಗೆ ಅರಣ್ಯ ಇಲಾಖೆಯಿಂದ 30 ಸಾವಿರ ಪಡೆದಿದ್ದಾನೆ. ಸಾರ್ವಜನಿಕರಿಂದ ಹಣ ಸಂಗ್ರಹಿಸುವ ಹಕ್ಕು ನವೀನ್ ಎಂಬಾತನಿಗೆ ನೀಡಿದ್ದು ಯಾರು. ಸಂಗ್ರಹವಾದ ಹಣವನ್ನು ಸರ್ಕಾರ ವಶಕ್ಕೆ ಪಡೆಯಬೇಕು. ಇನ್ಸ್ಟಾಗ್ರಾಂನಲ್ಲಿ ನಿರ್ಮಿಸಿಕೊಂಡ ಮಾತ್ರಕ್ಕೆ ಆತ ವನ್ಯಜೀವಿ ಸಂರಕ್ಷಕನಲ್ಲ. ಸೋ ಕಾಲ್ಡ್ ಹೋರಾಟಗಾರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಎಸಿಎಫ್ ಮಹದೇವಯ್ಯ ಅವರಿಗೆ ದೂರು ನೀಡಿದ್ದೇನೆ ಎಂದು ತಿಳಿಸಿದ್ದಾರೆ.

ಎರಡು ದೂರು ಸಲ್ಲಿಕೆ: ಮಲೆನಾಡು ರಕ್ಷಣಾ ವೇದಿಕೆಯ ಅಧ್ಯಕ್ಷ ಸಾಗರ್ ಜಾನೇಕೆರೆ ಹಾಗೂ ಪ್ರವೀಣ್ ಶೆಟ್ಟಿ ಬಣದ ಕರ್ನಾಟಕ ರಕ್ಷಣಾ ವೇದಿಕೆಯ ಸಕಲೇಶಪುರ ತಾಲೂಕು ಘಟಕದ ಅಧ್ಯಕ್ಷ ಎಸ್.ರಮೇಶ್ ಅವರು ಸ್ಮಾರಕ ನಿರ್ಮಾಣಕ್ಕಾಗಿ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ವಂಚಿಸುತ್ತಿದ್ದಾರೆ ಎಂದು ಆರೋಪಿಸಿ ಪ್ರತ್ಯೇಕವಾಗಿ ಅರಣ್ಯ ಇಲಾಖೆಗೆ ದೂರು ನೀಡಿದ್ದಾರೆ.

ಬಲವಂತ ಮಾಡಿಲ್ಲ: ವಾಹಿನಿಯೊಂದಕ್ಕೆ ಪ್ರತಿಕ್ರಿಯೆ ನೀಡಿದ ನವೀನ್, ನಾನು ಯಾರಿಂದಲೂ ಬಲವಂತವಾಗಿ ಹಣ ಸಂಗ್ರಹಿಸಿಲ್ಲ. ವಾಟ್ಸಪ್ ಗ್ರೂಪ್‌ನಲ್ಲಿ ಚರ್ಚಿಸಿದಾಗ ಸ್ವಯಂ ಪ್ರೇರಣೆಯಿಂದ ಕೆಲವರು ಹಣ ಕಳುಹಿಸಿದ್ದಾರೆ. ಎಲ್ಲಾ ಲೆಕ್ಕವನ್ನು ವಾಟ್ಸಪ್ ಗ್ರೂಪ್ ಸದಸ್ಯರಿಗೆ ತಿಳಿಸಿದ್ದೇನೆ. ಸ್ಮಾರಕ ನಿರ್ಮಾಣಕ್ಕಾಗಿ ಎಸಿಎಫ್ ಅವರಿಂದ ಅನುಮತಿ ಪಡೆದಿದ್ದೆವು. ಮಳೆ ಬರುತ್ತಿರುವ ಕಾರಣದಿಂದ ಸಮಾಧಿ ಸ್ಥಳದಲ್ಲಿ ಹಾನಿಯಾಗಬಾರದು ಎಂಬ ಕಾರಣದಿಂದ ತಡೆಗೋಡೆ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅಲ್ಲದೆ, ನಟ ದರ್ಶನ್ ಅವರ ಆಪ್ತ ಸಂಪತ್ ಎಂಬುವರು ಕಲ್ಲನ್ನು ಕೊಡಿಸಿದರು. ಅದನ್ನು ತೆಗೆದುಕೊಂಡು ಹೋಗಿದ್ದೇವೆ. ಕಾಂಕ್ರಿಟ್ ಬಳಸದೆ ಕೆಲಸ ಆರಂಭಿಸುವಾಗ ಕೆಲವರ ಪಿತೂರಿಯಿಂದ ಅರಣ್ಯ ಸಿಬ್ಬಂದಿ ತಡೆಯೊಡ್ಡಿದರು. ಕಲ್ಲು ತಂದಿದ್ದಕ್ಕೆ ಬೇಡ ಎಂದರೂ ನನ್ನ ಖಾತೆಗೆ ಅರಣ್ಯ ಇಲಾಖೆ 30 ಸಾವಿರ ರೂ. ಹಾಕಿದ್ದಾರೆ. ಇದನ್ನು ಸಂಪತ್ ಅವರಿಗೂ ತಿಳಿಸಿದ್ದೇನೆ. ಎಲ್ಲದಕ್ಕೂ ದಾಖಲೆ ಇಟ್ಟಿದ್ದೇನೆ. ನಟ ದರ್ಶನ್ ಹೆಸರನ್ನು ನಾನು ದುರ್ಬಳಕೆ ಮಾಡಿಕೊಂಡಿಲ್ಲ. ಅವರನ್ನು ಭೇಟಿ ಮಾಡಿಲ್ಲ. ಇದುವರೆಗೂ ಗ್ರೂಪ್‌ನಲ್ಲಿ 40 ಸಾವಿರದಷ್ಟು ಮಾತ್ರ ಸಂಗ್ರಹವಾಗಿ. ಅದನ್ನು ಏನ್ ಮಾಡಬೇಕೆಂದು ಗ್ರೂಪ್ ಸದಸ್ಯರನ್ನು ಕೇಳಿದ್ದೇನೆ. ಸದಸ್ಯರು ಅರ್ಜುನನ ಹೆಸರಲ್ಲಿ ಸಂಘವೊಂದನ್ನು ಸ್ಥಾಪಿಸಿ, ಅದರ ಖಾತೆಯಲ್ಲಿಡುವಂತೆ ಸೂಚಿಸಿದ್ದಾರೆ ಎಂದು ತಿಳಿಸಿದ್ದಾರೆ.

ಬದುಕಿರುವ ವ್ಯಕ್ತಿಗೆ ಮರಣ ಪ್ರಮಾಣ ಪತ್ರ ನೀಡಿದ ಕಂದಾಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಪೊಲೀಸರ ಕ್ರಮಕ್ಕೆ ಕಂದಾಯ ಆಡಳಿತ ಅಧಿಕಾರಿಗಳ ಸಂಘ ಅಸಮಾಧಾನ

ಮೈಸೂರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ

ಮೈಸೂರು, ಮೇ 27(ಎಸ್‌ಪಿಎನ್)– ಬದುಕಿರುವ ವ್ಯಕ್ತಿಗೆ ಮರಣ ಪ್ರಮಾಣ ಪತ್ರ ನೀಡಿದ್ದ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದ ಪೊಲೀಸರ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿ ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಸೋಮವಾರ ಮೈಸೂರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ನಂಜನಗೂಡು ತಾಲೂಕು ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಸಂಖ್ಯೆ:0063/2024, ದಿನಾಂಕ: 23.05.2024 ರಂದು ಕಂದಾಯ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ. ಆದರೆ, ಪ್ರಕರಣ ದಾಖಲಿಸುವ ಮುನ್ನ ಸರ್ಕಾರಿ ಸುತ್ತೋಲೆ 114/2017–18ರಂತೆ ಹಿರಿಯ ಅಧಿಕಾರಿಗಳ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ, ಈ ಮೇಲ್ಕಂಡ ಪ್ರಕರಣದಲ್ಲಿ ನಿಯಮಗಳನ್ನು ಪಾಲಿಸದೇ ಇರುವುದು ಕಂಡು ಬಂದಿದೆ. ಪೊಲೀಸರು ಈ ಪ್ರಕರಣ ಸಂಬಂಧ ಇಲಾಖಾ ಮುಖ್ಯಸ್ಥರು ಅಥವಾ ಮೇಲಾಧಿಕಾರಿಗಳಿಂದ ಮಾಹಿತಿ ಪಡೆದಿದ್ದರೆ ಪ್ರಕರಣದ ಸತ್ಯಾ ಸತ್ಯತೆ ತಿಳಿದಿರುತ್ತಿತ್ತು ಎಂದು ಮನವಿಯಲ್ಲಿ ಹೇಳಲಾಗಿದೆ.

ಕಂದಾಯ ಇಲಾಖೆ ದಾಖಲೆಗಳ ಬಗ್ಗೆ ಪೊಲೀಸ್ ಇಲಾಖೆ ಸಿಬ್ಬಂದಿಗಳಿಗೆ ಮಾಹಿತಿ ಕೊರತೆ ಇರುವುದು ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಹಾಗಾಗಿ ಈ ರೀತಿಯ ಪ್ರಕರಣಗಳಿಂದ ಕಂದಾಯ ಇಲಾಖೆಯಲ್ಲಿ ನೌಕರರು ನಿರ್ಭೀತಿಯಿಂದ ಹಾಗೂ ಮುಕ್ತವಾಗಿ ಕರ್ತವ್ಯ ನಿರ್ವಹಿಸಲು ಕಷ್ಟಕರವಾಗುತ್ತಿದೆ ಹಾಗೂ ನೌಕರರ ಆತ್ಮಸ್ಥೈರ್ಯ ಕುಗ್ಗಿಸುವಂತಹ ವಾತಾವರಣ ಉಂಟಾಗುತ್ತಿದೆ. ಈ ಸಂಬಂಧ ಪೊಲೀಸ್ ಇಲಾಖಾ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಮತ್ತು ಈ ರೀತಿಯ ಪ್ರಕರಣಗಳು ನಡೆಯದಂತೆ ಕ್ರಮಕೈಗೊಳ್ಳುವಂತೆ ಎಡಿಸಿ ಶಿವರಾಜ್ ಅವರಲ್ಲಿ ಸಂಘದ ಅಧ್ಯಕ್ಷ ನಾಗೇಶ್ ಮನವಿ ಮಾಡಿದ್ದಾರೆ.



ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಸೋಮವಾರ ಮೈಸೂರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸಂಸ್ಕೃತ ಭಾಷೆ ಭಾರತ ಸಾರಸ್ವತ ಲೋಕದ ಹೃದಯ: ಪ್ರೊ.ಟಿ.ಎನ್. ಪ್ರಭಾಕರ



ಮೈಸೂರು, ಮೇ 27(ಎಸ್‌ಪಿಎನ್)– ಸಂಸ್ಕೃತ ಭಾಷೆ ಭಾರತ ಸಾರಸ್ವತ ಲೋಕದ ಹೃದಯ. ಈ ಭಾಷೆಯನ್ನು ಕಲಿಯಲು ಎಲ್ಲರೂ ಪ್ರಯತ್ನಿಸಬೇಕು ಎಂದು ಕಾಲೇಜು ಶಿಕ್ಷಣ ವಿಭಾಗದ ನಿವೃತ್ತ ಹೆಚ್ಚುವರಿ ನಿರ್ದೇಶಕ ಪ್ರೊ.ಟಿ.ಎನ್. ಪ್ರಭಾಕರ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಇಂದು ಸಂಸ್ಕೃತ ವಿಭಾಗ ಆಯೋಜಿಸಿದ್ದ ಸಂಸ್ಕೃತ–ಕನ್ನಡ ಅನುವಾದ ಪರಂಪರೆ ಕುರಿತ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

ಸಂಸ್ಕೃತದಿಂದ ಹಲವು ಸಾಹಿತ್ಯಗಳು ಕನ್ನಡ ಸೇರಿದಂತೆ ಇತರೆ ಭಾಷೆಗಳಿಗೆ ಅನುವಾದವಾಗಿದೆ. ವೇದ, ಉಪನಿಷತ್, ರಾಮಾಯಣ, ಮಹಾಭಾರತ ಸೇರಿದಂತೆ ಇತರೆ ಮಹಾಕಾವ್ಯಗಳು ಬೇರೆಬೇರೆ ಭಾಷೆಗಳಿಗೆ ಅನುವಾದಗೊಂಡಿವೆ ಅಲ್ಲದೆ ಇತ್ತೀಚಿಗೆ ಸಂಸ್ಕೃತ ವಿದ್ವಾಂಸರಿಬ್ಬರಿಗೆ ಜ್ಞಾನಪೀಠ ಪ್ರಶಸ್ತಿ ನೀಡಿ, ಕೇಂದ್ರ ಸರ್ಕಾರ ಗೌರವಿಸಿರುವುದು ಹೆಮ್ಮೆಯ ವಿಷಯ ಎಂದರು.

ಕಾಲೇಜು ವಿದ್ಯಾರ್ಥಿಗಳಿಗೆ ಸಾಹಿತ್ಯ ಅನುವಾದ ಮಾಡುವ ಕಮ್ಮಟಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಬೇಕು. ಉಪನ್ಯಾಸಕರು ಕೇವಲ ಪುಸ್ತಕಕ್ಕೆ ಸೀಮಿತವಾಗಿ ಯೋಚಿಸದೇ ಅನುವಾದಕ್ಕೆ ವಿದ್ಯಾರ್ಥಿ ದಿಸೆಯಲ್ಲೇ ಒತ್ತು ನೀಡಬೇಕು ಎಂದರು.

ಕನ್ನಡದಿಂದ ಇಂಗ್ಲಿಷ್‌ಗೆ, ಇಂಗ್ಲಿಷ್‌ನಿಂದ ಸಂಸ್ಕೃತಕ್ಕೆ ಹೀಗೆ ಒಂದು ಕಥೆ, ಕವಿತೆ ಅಥವಾ ಕಾದಂಬರಿ ಸೇರಿದಂತೆ ಇತರೆ ಸಾಹಿತ್ಯವನ್ನು ಬೇರೆ ಭಾಷೆ ಅನುವಾದ ಮಾಡಬೇಕಾದರೆ, ಅನುವಾದ ಮಾಡುವವರಲ್ಲಿ ಮೂಲ ಸಾಹಿತ್ಯದ ಅರಿವು ಇರಬೇಕು. ಹಾಗಾಗಿ ವಿದ್ಯಾರ್ಥಿಗಳಿಗೆ ಚಿಕ್ಕವಯಸ್ಸಿನಿಂದಲೇ ಪುಸ್ತಕ ಓದುವ ಹವ್ಯಾಸ ಬೆಳೆಸಲು ಮನೆಯಲ್ಲಿ ಕಿರು ಗ್ರಂಥಾಲಯ ಇರಬೇಕು ಎಂದು ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮೂಗೇಶಪ್ಪ, ಜೆಎಸ್‌ಎಸ್ ಪ್ರಾಂಶುಪಾಲರಾದ ಡಾ.ಎಂ. ಪೂರ್ಣಿಮಾ, ಶೈಕ್ಷಣಿಕ ಡೀನ್ ಡಾ.ರೇಚಣ್ಣ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ.ಬಿ.ಪಿ. ಷಡಕ್ಷರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಮೈಸೂರು ನೋಡ ಬಾರಾ....! ಆದರೆ ಎಲ್ಲಿಯೂ ನಿಲ್ಲಬೇಡವೋ ಅರಮನೆ ನಗರಿ ಅಭಿಮಾನಿ ; ಸ್ವಚ್ಛ ನಗರಿಯಲ್ಲಿ ಅಶುಚಿತ್ವ ತಾಂಡವ



ಧನ್ವಂತರಿ ರಸ್ತೆಯಲ್ಲಿ ಕೆಆರ್ ಆಸ್ಪತ್ರೆ ಕಾಂಪೌಂಡ್ ಪಕ್ಕದ ಫುಟ್‌ಪಾತ್‌ನಲ್ಲಿ ಕೊಂಬೆಗಳನ್ನು ತೆರವುಗೊಳಿಸದೇ ಬಿಟ್ಟಿರುವುದು.



ತಾಜ್ಯ ಬಿಸಾಡಿರುವ ಜೊತೆಗೆ ಮೂತ್ರ ವಿಸರ್ಜನೆಯಿಂದ ದುರ್ವಾಸನೆ ಬೀರುತ್ತಿರುವ ಕೆಆರ್ ಆಸ್ಪತ್ರೆಗೆ ಹೊಂದುಕೊಂಡಿರುವ ಫುಟ್‌ಪಾತ್ (ಸಯ್ಯಾಜಿರಾವ್ ರಸ್ತೆ).



ಶೇಷಾದ್ರಿ ಅಯ್ಯರ್ ರಸ್ತೆಯ ಚರಂಡಿಯಲ್ಲಿ ಕೊಳಚೆ ನೀರು ಮುಂದೆ ಸಾಗಿ ಹೋಗದೇ ನಿಂತಿರುವುದು.

ಮೈಸೂರು,ಮೇ 27(ಪಿಎಂ)– ಮಳೆ ಬಂದಾಗ, ಹಳ್ಳಕೊಳ್ಳಗಳಲ್ಲಿ ನೀರು ನಿಂತಾಗ, ಪಾಲಿಕೆ ಕಣ್ಮುಚ್ಚಿ ಕುಳಿತಾಗ ಸಾಂಕ್ರಾಮಿಕ ರೋಗ ಸ್ಫೋಟಗೊಳ್ಳುವ ಆತಂಕ ಎದುರಾಗದೇ ಇರುವುದೇ? ಹೌದು, ಮೈಸೂರಲ್ಲಿ ಈಗ ಸಾಂಕ್ರಾಮಿಕ ರೋಗ ಭೀತಿ ಎದುರಾಗಿದೆ. ಅಸಂಖ್ಯೆ ಅನೈರ್ಮಲ್ಯ ತಾಣಗಳಿದ್ದರೂ ಸ್ವಚ್ಛತೆ ಕೈಗೊಳ್ಳದೇ ಪಾಲಿಕೆ ಗಾಢ ನಿದ್ರೆಗೆ ಜಾರಿದಂತಿದೆ.


ಜಿಲ್ಲೆಯ ನಂಜನಗೂಡು ತಾಲೂಕಿನ ತಗಡೂರು ಹಾಗೂ ಮೈಸೂರು ತಾಲೂಕಿನ ಕೆ.ಸಾಲುಂಡಿಯಲ್ಲಿ ಕಾಲರಾ ಸೋಂಕು ಹಲವರಲ್ಲಿ ದೃಢಪಟ್ಟಿತ್ತು. ಜೊತೆಗೆ ಕರುಳು ಬೇನೆಯೂ (ವಾಂತಿ–ಭೇದಿ) ಸಾಕಷ್ಟು ಜನರನ್ನು ನರಳುವಂತೆ ಮಾಡಿತು. ಈಗಲೂ ಅದು ಸಂಪೂರ್ಣ ಮುಕ್ತ ಎಂದು ಹೇಳುವ ಪರಿಸ್ಥಿತಿ ಇಲ್ಲ. ಮೈಸೂರು ನಗರದಲ್ಲೂ ಕಾಲರಾ ಪ್ರಕರಣವೊಂದು ದೃಢಪಟ್ಟಿತ್ತು. ಅಶುಚಿತ್ವದ ಆಹಾರ ಮತ್ತು ನೀರು ಸೇವನೆಯೇ ಈ ಜಾಡ್ಯಕ್ಕೆ ಕಾರಣ.

ಇನ್ನು ರಸ್ತುಬದಿ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಹಳ್ಳಕೊಳ್ಳಗಳಲ್ಲಿ ನಿಲ್ಲುವ ಮಳೆ ನೀರು ಅನೇಕ ರೀತಿಯ ಸೊಳ್ಳೆಗಳ ಉತ್ಪತ್ತಿಯ ತಾಣವಾಗಿ ಡೆಂಗ್ಯೂ, ಚಿಕನ್‌ಗುನ್ಯ ಸೇರಿದಂತೆ ಇನ್ನಿತರೆ ಮಾರಕ ರೋಗಗಳು ಹರಡುತ್ತವೆ. ಅಲ್ಲದೆ, ಅನೈರ್ಮಲ್ಯವು ಇನ್ನು ಅನೇಕ ವಿಧದ ಸಾಂಕ್ರಾಮಿಕ ರೋಗ ಹರಡಲು ಕಾರಣವಾಗುವುದನ್ನೂ ತಳ್ಳಿ ಹಾಕಲಾಗದು. ನಗರದಲ್ಲಿ ಇಂತಹ ಪರಿಸ್ಥಿತಿ ಇದ್ದರೂ ಪಾಲಿಕೆಯ ಈ ಪರಿ ನಿರ್ಲಕ್ಷ್ಯ ಸರಿಯೇ ಎಂದು ನಾಗರಿಕರು ಕಿಡಿಕಾರಿದ್ದಾರೆ.

ಹಿಂದೊಮ್ಮೆ ಸ್ವಚ್ಛನಗರ ಪುರಸ್ಕಾರಕ್ಕೆ ಭಾಜನವಾಗಿದ್ದ ಮೈಸೂರು ಇದೀಗ ಅದಕ್ಕೆ ತದ್ವಿರುದ್ಧವಾಗಿ ಅಶುಚಿತ್ವದ ಪರಿಸರವನ್ನು ಹೊದ್ದು ಕುಳಿತಿದೆ. ನಗರದ ಬಹುತೇಕ ಕಡೆ ಪ್ಲಾಸ್ಟಿಕ್ ಸೇರಿದಂತೆ ನಾನಾ ರೀತಿಯ ತ್ಯಾಜ್ಯಗಳು ಹಾಸಿದಂತಿದ್ದು, ಗಬ್ಬುನಾರುವಂತಾಗಿದೆ. ಅದರಲ್ಲೂ ನಗರದ ಹೃದಯಭಾಗದಲ್ಲೇ ಹಲವು ಸ್ಥಳಗಳು ಅಶುಚಿತ್ವದ ತಾಣವಾಗಿ ಪರಿಣಮಿಸಿವೆ. ಅದಾಗ್ಯೂ ಮೈಸೂರು ಮಹಾನಗರ ಪಾಲಿಕೆ ಕಣ್ಮುಚ್ಚಿ ಕುಳಿತಿದ್ದು, ರೋಗ ರುಜಿನದ ಆತಂಕ ಎದುರಾಗಿದೆ.

ಬಣ್ಣದ ಚಿತ್ತಾರದ ನಡುವೆ ಅನೈರ್ಮಲ್ಯ!: ನಗರದ ಧನ್ವಂತರಿ ರಸ್ತೆಯಲ್ಲಿ ಕೆಆರ್ ಆಸ್ಪತ್ರೆ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಫುಟ್‌ಪಾತ್‌ನಲ್ಲಿ ಮರಗಳ ರೆಂಬೆಕೊಂಬೆಗಳು ಮಳೆ ನೀರಲ್ಲಿ ಕೊಳೆತು ನಾರುತ್ತಿವೆ. ಅವುಗಳಿಗೆ ನಾನಾ ರೀತಿಯ ತ್ಯಾಜ್ಯಗಳು ಸೇರಿ ಬಾರೀ ದುರ್ನಾತ ಸೂಸುವಂತಾಗಿದೆ. ಸದರಿ ಕಾಂಪೌಂಡ್‌ನಲ್ಲಿ ಬಗೆಬಗೆಯ ಬಣ್ಣಗಳಿಂದ ಚಿತ್ತಾರ ಮೂಡಿಸಿ ಕಲ್ಲು ಬೆಂಚು ಸಹ ಹಾಕಲಾಗಿದೆ. ದುರಂತವೆಂದರೆ ಅಲ್ಲಿ ಯಾರೂ ಕೂತು ವಿಶ್ರಾಂತಿ ಪಡೆಯುವ ಪರಿಸರ ಮಾತ್ರ ಇಲ್ಲವೇ ಇಲ್ಲ. ಕಾರಣ ಅನೈರ್ಮಲ್ಯ, ಬಣ್ಣದ ಚಿತ್ತಾರ, ಕಲ್ಲಿನ ಬೆಂಚು ಎಲ್ಲವೂ ಇದ್ದು ನಿರರ್ಥಕವಾಗಿವೆ.

ಎಂದೂ ಬತ್ತದ ನೀರು!: ಇಲ್ಲಿ ಎಂದೂ ನೀರು ಬತ್ತದು ಎಂದರೂ ತಪ್ಪಿಲ್ಲ. ಹಾಗೆಂದು ಈ ನೀರು ಕುಡಿಯಲು, ಇನ್ನಾವುದೇ ಕಾರ್ಯಕ್ಕೆ ಬಳಸಲು ಯೋಗ್ಯವಲ್ಲ. ಕಾರಣ ಇಲ್ಲಿ ನಿಂತಿರುವುದು ಮಲೀನ ನೀರು. ಇದು ರೋಗ ಹರಡುವ ಸೊಳ್ಳೆಗಳ ಜನ್ಮಸ್ಥಳವಾಗಿ ಪರಿಣಮಿಸಿದೆ. ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಖಾಸಗಿ ಬಸ್ ನಿಲ್ದಾಣದ ಹಿಂಭಾಗ ಇರುವ ಮಳೆ ನೀರು ಚರಂಡಿಯ ಕಥೆ ಇದು. ಮಳೆ ಸುರಿದು ಎಷ್ಟೋ ದಿನಗಳಾದರೂ ಇಲ್ಲಿ ನಿಲ್ಲುವ ನೀರು ಮಾತ್ರ ಬತ್ತುವುದಿಲ್ಲ. ಆ ಮೂಲಕ ಸೊಳ್ಳೆಗಳ ಸಂತಾನೋತ್ಪತ್ತಿಗೆ ಹೇಳಿ ಮಾಡಿಸಿದಂತೆ ಈ ವಾತಾವರಣ. ಮುಂದೆ ಸಾಗಲು ಅವಕಾಶವಿಲ್ಲದೆ ನೀರು ನಿಂತಲೇ ನಿಂತಿದೆ.



ಕೇಂದ್ರೀಯ ಬಸ್ ನಿಲ್ದಾಣದ ಎದುರು ನಗರ ಬಸ್ ತಂಗುದಾಣ ಸಮೀಪ ಕೊಳಚೆ ನೀರು ನಿಂತಿರುವುದು. ಜೊತೆಗೆ ಪ್ಲಾಸ್ಟಿಕ್ ಕವರ್‌ಗಳನ್ನು ಕಾಣಬಹುದು.

ಈ ಹಿಂದಿದ್ದ ಕಸದ ಕಂಟೈನರ್ ವ್ಯವಸ್ಥೆ ಕೂಡ ಈಗ ಇಲ್ಲ. ಹಾಗಾಗಿ ಕೆಲವರು ರಸ್ತೆ ಬದಿಗಳನ್ನೇ ಕಸದ ತೊಟ್ಟಿ ಮಾಡಿಕೊಂಡಿದ್ದಾರೆ. ಈ ಸ್ಥಳಗಳನ್ನು ಶುಚಿಗೊಳಿಸಲೂ ಪಾಲಿಕೆ ಮುಂದಾಗುತ್ತಿಲ್ಲ ಜೊತೆಗೆ ಇವು ಮೂತ್ರ ವಿಸರ್ಜನೆಯ ತಾಣಗಳೂ ಆಗುತ್ತಿವೆ. ಕೆಆರ್ ಆಸ್ಪತ್ರೆಯ ಕಾಂಪೌಂಡ್ ಇಂತಹ ಸನ್ನಿವೇಶಕ್ಕೆ ಕೇವಲ ಒಂದು ಉದಾರಣೆ ಮಾತ್ರ, ಸಯ್ಯಾಜಿರಾವ್ ರಸ್ತೆಯಲ್ಲೇ ಇಂತಹ ಗಬ್ಬೆದ್ದುನಾರುವ ಸನ್ನಿವೇಶ ಸೃಷ್ಟಿಯಾಗಿದೆ. ಜೊತೆಗೆ ಇಲ್ಲಿ ಮಲೀನ ನೀರು ನಿಂತು ಸೊಳ್ಳೆಗಳ ತಾಣವಾಗಿದೆ. ನಗರದ ಹೃದಯಭಾಗದ ಈ ಸ್ಥಳದ್ದೇ ಈ ಕಥೆಯಾದರೆ, ವಿವಿಧ ಬಡಾವಣೆಗಳಲ್ಲಿ ಇಂತಹವು ಅದೆಷ್ಟೋ. ಈ ರೀತಿಯ ಸ್ಥಳಗಳು ನಗರದಲ್ಲಿ ಅಸಂಖ್ಯಾ ಎನ್ನುತ್ತಾರೆ ನಾಗರಿಕರು.



ಮಲೆಮಹದೇಶ್ವರ ರಸ್ತೆಯಲ್ಲಿ ನಗರ ಕೇಂದ್ರ ಗ್ರಂಥಾಲಯ ಕಾಂಪೌಂಡ್‌ಗೆ ಹೊಂದುಕೊಂಡಿರುವ ಫುಟ್‌ಪಾತ್‌ನಲ್ಲಿ ಉದ್ದಕ್ಕೂ ಬಿದ್ದಿರುವ ತ್ಯಾಜ್ಯದ ಪೈಕಿ ಮದ್ಯದ ಪೊಟ್ಟಣಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಕಟ್ಟಿ ಎಸೆದಿರುವುದು.

ಉದ್ದಕ್ಕೂ ಬಿದ್ದಿವೆ ತ್ಯಾಜ್ಯ: ಕೇಂದ್ರೀಯ ಬಸ್ ನಿಲ್ದಾಣ (ಸಬ್‌ಅರ್ಬನ್ ಬಸ್ ನಿಲ್ದಾಣ) ಸಮೀಪದ ಮಲೆಮಹದೇಶ್ವರ ರಸ್ತೆಯ ಒಂದು ಬದಿಯಂತೂ ಅನೈರ್ಮಲ್ಯದ ತಾಣವಾಗಿ ಪರಿಣಮಿಸಿದೆ. ಇಲ್ಲಿನ ದೊಡ್ಡ ಚರಂಡಿಯ ಹೂಳು ತೆಗೆದಿದ್ದರೂ ಅಲ್ಲೇ ಪಕ್ಕದಲ್ಲಿ ಹಾಕಿದ್ದು, ಇದು ನಗರದ ಪ್ರಮುಖ ರಸ್ತೆಯ ಸೌಂದರ್ಯವನ್ನು ವಿರೂಪಗೊಳಿಸಿದಂತಾಗಿದೆ.

ಜೊತೆಗೆ ನೈರ್ಮಲ್ಯಕ್ಕೂ ಅವಕಾಶವಿಲ್ಲದಂತಾಗಿದೆ. ಇಲ್ಲಿನ ನಗರ ಕೇಂದ್ರ ಗ್ರಂಥಾಲಯದ ಕಾಂಪೌಂಡ್ ಹೊಂದಿಕೊಂಡಿರುವ ಫುಟ್‌ಪಾತ್ ಇದ್ದೂ ಪ್ರಯೋಜನಕ್ಕೆ ಬಾರದಂತಿದೆ. ಪಾದಚಾರಿಗಳು ಸಾಗಲೂ ಸೂಕ್ತವಾಗಿಲ್ಲ ಎನ್ನುವುದು ಒಂದೆಡೆ ಇರಲಿ. ನಾನಾ ಬಗೆಯ ತ್ಯಾಜ್ಯಗಳು ಇಲ್ಲಿ ಎಲ್ಲೆಂದರಲ್ಲಿ ಬಿದ್ದಿದ್ದು, ಪರಿಸರ ಮಾಲಿನ್ಯ ಉಂಟಾಗಿದೆ. ಮದ್ಯದ ಪೊಟ್ಟಣಗಳನ್ನು ದೊಡ್ಡ ಪ್ಲಾಸ್ಟಿಕ್ ಕವರ್‌ಗೆ ತುಂಬಿ ಎಸೆದಿರುವುದೂ ಸೇರಿದಂತೆ ನಾನಾ ರೀತಿಯ ತ್ಯಾಜ್ಯಗಳನ್ನು ಇಲ್ಲಿ ಉದ್ದಕ್ಕೂ ಹಾಕಲಾಗಿದೆ. ಇದನ್ನು ತಡೆಗಟ್ಟಿ ಮತ್ತೆ ಆ ರೀತಿಯಾಗದಂತೆ ಕ್ರಮ ವಹಿಸಲು ಪಾಲಿಕೆಗೆ ಸಾಧ್ಯವಾಗಿಲ್ಲ.

ಇಲ್ಲಿಗೆ ಸಮೀಪದ ಸರ್ಕಾರಿ ಅತಿಥಿಗೃಹದ ರಸ್ತೆಯ ಹುತಾತ್ಮ ಹೇಮಚಂದ್ರ ವೃತ್ತದ ಒಂದು ಭಾಗದಲ್ಲಿ ಮಳೆ ಬಂದರೆ ಹೊಂಡವೇ ನಿರ್ಮಾಣವಾಗಲಿದ್ದು, ಇದನ್ನು ತಪ್ಪಿಸಲು ಪಾಲಿಕೆಗೆ ಸಾಧ್ಯವಾಗಿಲ್ಲ. ಇಲ್ಲಿಯೇ ಕುಪ್ಪಣ್ಣ ಪಾರ್ಕ್ ಇದ್ದು, ಇಲ್ಲಿ ನಡೆದ ಮಾವು ಮೇಳ ಘಮಲು ಸೂಸಿದೆಯೋ ಇಲ್ಲವೋ ಆದರೆ ಪಾರ್ಕಿನ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಚರಂಡಿಯ ದುರ್ನಾತ ಸೂಸುತ್ತಿರುವುದು ಮಾತ್ರ ಸುಳ್ಳಲ್ಲ. ಜೊತೆಗೆ ಚರಂಡಿಯಲ್ಲಿ ಗಿಡಗಂಟಿಗಳು ಬೆಳೆಯುತ್ತಿದ್ದು, ಅವುಗಳು ನೀರು ಸಾರಾಗವಾಗಿ ಮುಂದೆ ಸಾಗುವುದನ್ನು ತಡೆಯುವ ಜೊತೆಗೆ ಕಾಂಕ್ರಿಟ್ ಚರಂಡಿ ಹಾಗೂ ಕಾಂಪೌಂಡ್‌ಗೆ ಹಾನಿಯುಂಟು ಮಾಡುವಂತಾಗಿದೆ. ಈ ಗಿಡಗಂಟಿ ತೆರವಿಗೂ ಪಾಲಿಕೆ ಮುಂದಾಗಿಲ್ಲ.


ಕಾಯಿಲೆ ಹರಡಲು ಇಷ್ಟು ಸಾಲದೇ?: ಮೊನ್ನೆ ಮೊನ್ನೆಯಷ್ಟೇ ಹಳ್ಳಕೊಳ್ಳಗಳಿಂದ ಕೂಡಿದ್ದ ಕೇಂದ್ರೀಯ ಬಸ್ ನಿಲ್ದಾಣ ಎದುರಿನ ಬೆಂಗಳೂರು– ನೀಲಗಿರಿ ರಸ್ತೆಗೆ ಇದೀಗ ಜಲ್ಲಿಕಲ್ಲು ಹಾಕಿ ಕೈತೊಳೆದುಕೊಳ್ಳಲಾಗಿದೆ. ಮೊನ್ನೆವರೆಗೂ ಇಲ್ಲಿನ ಗುಂಡಿಗಳಲ್ಲಿ ಮಳೆ ಬಂದಾಗ ಮೊಣಕಾಲುದ್ದ ನೀರು ನಿಲ್ಲುವಂತಿತ್ತು. ಬಸ್ ನಿಲ್ದಾಣದ ಮುಂಭಾಗ ನಗರದ ವಿವಿಧೆಡೆಗೆ ಬಸ್‌ಗಳಿಗಾಗಿ ಕಾದು ನಿಲ್ಲುವ ಸ್ಥಳದಲ್ಲಿ ಕೊಳಚೆ ನೀರು ನಿಂತಿದ್ದು, ಅಷ್ಟು ಮಾತ್ರವಲ್ಲದೆ, ಪ್ಲಾಸ್ಟಿಕ್ ಸೇರಿದಂತೆ ನಾನಾ ರೀತಿಯ ತ್ಯಾಜ್ಯಗಳು ಸೇರಿ ಗಬ್ಬು ವಾಸನೆ ಸೂಸುವಂತಾಗಿದೆ. ಕಾಯಿಲೆ ಹರಡಲು ಇಷ್ಟು ಸಾಲದೇ?

ಮಳೆ ಬಾರದಿದ್ದರೂ ಇಲ್ಲಿ ನಿಂತಿದೆ ಮಳೆ ನೀರು!: ಇನ್ನು ಬನ್ನಿಮಂಟಪದ ಬೆಂಗಳೂರು ರಸ್ತೆಯ ನಗರ ಬಸ್ ತಂಗುದಾಣದ ಎದುರು ರಸ್ತೆ ಬದಿಯಲ್ಲಿ ಭಾರೀ ಪ್ರಮಾಣದಲ್ಲಿ ನೀರು ನಿಂತಿದೆ. ಸ್ಥಳೀಯರ ಪ್ರಕಾರ ಹೀಗೆ ನಿಂತಿರುವುದು ಮಳೆ ನೀರು. ಇಲ್ಲಿ ಚರಂಡಿಯಲ್ಲೂ ಮಲೀನ ನೀರು ನಿಂತು ಅನೈರ್ಮಲ್ಯ ತಾಂಡವವಾಡುತಿದೆ. ಇಷ್ಟಾದರೂ ಪಾಲಿಕೆ ಮಾತ್ರ ಕೈಕಟ್ಟಿ ಕುಳಿತಿದೆ.

ಮಳೆ ಬಂದು ಮೂರ್ನಾಲ್ಕು ದಿನವೇ ಆಗಿದೆ. ಪಾಲಿಕೆ ತನ್ನಲ್ಲಿರುವ ಸಂಪನ್ಮೂಲ ಬಳಸಿಕೊಂಡು ಕೇವಲ ಅರ್ಧ ಗಂಟೆಯಲ್ಲಿ ಈ ನೀರನ್ನು ಖಾಲಿ ಮಾಡಬಹುದು. ಆದರೆ ಪಾಲಿಕೆ ನಿರ್ಲಕ್ಷ್ಯದಿಂದ ಜನ ಹೇಸಿಗೆ ಪಡುವಂತಾಗಿದೆ ಎಂದು ನಾಗರಿಕರೊಬ್ಬರು ಬೇಸರ ವ್ಯಕ್ತಪಡಿಸಿದರು. ಹುಡುಕುತ್ತಾ ಹೊರಟರೇ ಇಂತಹ ಸಮಸ್ಯೆಗಳ ಸಾಗರವೇ ನಗರದಲ್ಲಿ ಕಾಣ ಸಿಗಲಿವೆ. ಹೀಗಿದ್ದರೂ ಅದೇಕೋ ಪಾಲಿಕೆ ಮಾತ್ರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಮಾತು ವ್ಯಾಪಕವಾಗಿ ಕೇಳಿ ಬರುತ್ತಿದೆ.



ಬನ್ನಿಮಂಟಪದ ಬೆಂಗಳೂರು ರಸ್ತೆಯಲ್ಲಿ ಪ್ರಯಾಣಿಕರ ತಂಗುದಾಣದ ಎದುರು ರಸ್ತೆಬದಿಯಲ್ಲಿ ಮಳೆ ನೀರು ನಿಂತಿರುವುದು.



ಕುಪ್ಪಣ್ಣ ಪಾರ್ಕ್‌ನ ಕಾಂಪೌಂಡ್ ಪಕ್ಕದ ಚರಂಡಿಯಲ್ಲಿ ಕೊಳಚೆ ನೀರು ನಿಂತಿರುವ ಜೊತೆಗೆ ಚರಂಡಿಯಲ್ಲಿ ಗಿಡಗಂಟಿ ಬೆಳೆದಿರುವುದು

ಮೈಸೂರು ಮಿತ್ರ
ಮಂಗಳವಾರ 28 ಮೇ 2024

ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಗೆಲುವು ಖಚಿತ

ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ವಿಶ್ವಾಸ



ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಮಿರ್ಲೆ ಶ್ರೀನಿವಾಸ್‌ಗೌಡ ಪ್ರಚಾರ ನಡೆಸಿದರು.

ಕೆ.ಆರ್.ನಗರ, ಮೇ 27– ಕಾಂಗ್ರೆಸ್ ಸರ್ಕಾರದ ವಿರುದ್ಧದ ಜನಾಕ್ರೋಶ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಮೇಲೆಯೂ ಪ್ರಭಾವ ಬೀರಲಿದ್ದು, ಈ ಬಾರಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಗೆಲುವು ಖಚಿತ ಎಂದು ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಪ್ರಚಾರ ನಡೆಸಿ ಮಾತನಾಡಿದ ಅವರು, ಈಗಾಗಲೇ ಬಿಜೆಪಿ, ಜೆಡಿಎಸ್ ಪಕ್ಷಗಳ ಮುಖಂಡರು ಮೈಸೂರು, ಹಾಸನ, ಮಂಡ್ಯ ಸೇರಿದಂತೆ ಎಲ್ಲಾ ತಾಲೂಕುಗಳಲ್ಲಿಯೂ ಅಭ್ಯರ್ಥಿ ವಿವೇಕಾನಂದರ ಜೊತೆಗೂಡಿ ಶಿಕ್ಷಕ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿದ್ದಾರೆ. ಈ ವೇಳೆ ಮತದಾರರು ವಿವೇಕಾನಂದ ಪರ ಒಲವು ವ್ಯಕ್ತಪಡಿಸಿದ್ದು, ಇದು ಅವರ ಗೆಲುವಿಗೆ ಸಹಕಾರಿಯಾಗಲಿದೆ ಎಂದರು. ಈಗಾಗಲೇ ಕಾಂಗ್ರೆಸ್ ಒಡೆದ ಮನೆಯಾಗಿದ್ದು, ರಾಜ್ಯದ ಕಾಂಗ್ರೆಸ್ ನಾಯಕತ್ವಕ್ಕಾಗಿ ಬಣ ರಾಜಕೀಯ ಪ್ರಾರಂಭವಾಗಿದೆ. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡದೆ ಬರ ಪರಿಹಾರ ಸೇರಿದಂತೆ ರೈತರ, ಬಡವರ ಪರ ಕೆಲಸ ಮಾಡದೆ ಕೇವಲ ಗ್ಯಾರಂಟಿ ಘೋಷಣೆಗಳೊಂದಿಗೆ ಕಾಲಹರಣ ಮಾಡುತ್ತಿದೆ ಎಂದು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ತಮ್ಮ ಅಧಿಕಾರವಧಿಯಲ್ಲಿ ಸದನದ ಒಳಗೆ ಹೊರಗೆ ಶಿಕ್ಷಕರ ಸಮಸ್ಯೆಗೆ ಸ್ಪಂದಿಸದೆ ಅಧಿಕಾರ ದಾಹದಿಂದ ಪಕ್ಷಾಂತರ ಮಾಡಿದ್ದಾರೆ. ಹೀಗಾಗಿ ಇವರಿಗೆ ಚುನಾವಣೆಯಲ್ಲಿ ಮತದಾರರು ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ, ಹಣಕಾಸು ಸಚಿವರಾಗಿದ್ದ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ರಾಜ್ಯದಲ್ಲಿ ಅತಿ ಹೆಚ್ಚು ಕಾಲೇಜುಗಳನ್ನು ಪ್ರಾರಂಭಿಸುವ ಜೊತೆಗೆ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಯಿತು. ಬಿಜೆಪಿ ಮತ್ತು ಜೆಡಿಎಸ್ ಸರ್ಕಾರದ ವೇಳೆ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಲಾಗಿದೆ. ಕಾಂಗ್ರೆಸ್ ಅಧಿಕಾರವಧಿಯಲ್ಲಿ ಯಾವುದೇ ಕಾಲೇಜು ತೆರೆಯದೇ, ಶಿಕ್ಷಕರ ನೇಮಕಾತಿ ಮಾಡಿಕೊಳ್ಳದೆ ಶಿಕ್ಷಕರಿಗೆ ದ್ರೋಹ ಮಾಡಲಾಗಿದೆ ಎಂದರು. ಈ ಬಾರಿ ಬದಲಾವಣೆ ಗಾಳಿ ಬೀಸುತ್ತಿದ್ದು, ಅದರಂತೆ ಮೈತ್ರಿ ಅಭ್ಯರ್ಥಿ ವಿವೇಕಾನಂದ ಅವರನ್ನು ಗೆಲ್ಲಿಸುವ ಮೂಲಕ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ ಅವರ ಕೈ ಬಲಪಡಿಸಬೇಕಿದೆ ಎಂದರು.

ಈ ವೇಳೆ ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಪ್ರಭಾಕರ್ ಜೈನ್, ಮಿರ್ಲೆ ಪದವೀಧರ ಸಹಕಾರ ಸಂಘದ ಮಾಜಿ ಕಾರ್ಯದರ್ಶಿ ರಾಧಾಕೃಷ್ಣ, ಪ್ರಾಂಶುಪಾಲ ಚಂದ್ರಶೇಖರ್, ಶಿಕ್ಷಕ ಧನಂಜಯ ಸೇರಿದಂತೆ ಇನ್ನಿತರರಿದ್ದರು.

ಡಾ.ಯತೀಂದ್ರರನ್ನು ಎಂಎಲ್‌ಸಿ ಮಾಡುವಂತೆ ಮನವಿ



ತಿ.ನರಸೀಪುರ, ಮೇ 27– ಸಿದ್ದರಾಮಯ್ಯ ಅವರಿಗೆ ವರುಣ ಕ್ಷೇತ್ರ ಬಿಟ್ಟು ಕೊಟ್ಟು ಅವರು ಮುಖ್ಯಮಂತ್ರಿಯಾಗಲು ಸಹಕರಿಸಿದ ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಬೇಕು ಎಂದು ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್ ಮನವಿ ಮಾಡಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಪರಿಷತ್‌ನಲ್ಲಿ ಡಾ.ಯತೀಂದ್ರ ಅವರಿಗೆ ಸ್ಥಾನ ಕಲ್ಪಿಸಿದರೆ ಮೈಸೂರು, ಚಾಮರಾಜನಗರ ಜಿಲ್ಲೆಗಳು ಅಭಿವೃದ್ಧಿ ಹೊಂದುವ ಜೊತೆಗೆ ಪಕ್ಷ ಸಂಘಟನೆಗೆ ಸಹಕಾರಿಯಾಗಲಿದೆ ಎಂದರು. ವರುಣ ಕ್ಷೇತ್ರದ ಶಾಸಕರಾಗಿ ಡಾ.ಯತೀಂದ್ರ ಅವರು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ ವರುಣ ಮಾತ್ರವಲ್ಲದೇ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಘಟನೆಯಲ್ಲಿ ಅವರ ಪಾತ್ರ ಪ್ರಮುಖವಾಗಿದೆ. ಪಕ್ಷದ ಕಾರ್ಯಕರ್ತರು ಹಾಗೂ ಜನರ ಕಷ್ಟ ಸುಖಗಳಿಗೆ ಸದಾ ಸ್ಪಂದಿಸುತ್ತಾ ಬಂದಿದ್ದಾರೆ. ಇವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಿದರೆ ಜನಸೇವೆಗೆ ಮತ್ತಷ್ಟು ಶಕ್ತಿ ತುಂಬಿದಂತಾಗುತ್ತದೆ ಎಂದರು.

ವರುಣ ಕ್ಷೇತ್ರವನ್ನೇ ತ್ಯಾಗ ಮಾಡಿ ತಮ್ಮ ತಂದೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಲ್ಲದೆ ರಾಜ್ಯಾದ್ಯಂತ ಸಂಚರಿಸಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತಯಾಚನೆ ಮಾಡಿ ಅವರ ಗೆಲುವಿಗೆ ಶ್ರಮಿಸಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಮ್ಮ ಮನವಿ ಪರಿಗಣಿಸಿ ಡಾ.ಯತೀಂದ್ರ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ವಿಜಯ್ ಕುಮಾರ್‌ಗೆ ಎಂಎಲ್‌ಸಿ ಟಿಕೆಟ್ ನೀಡಲು ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರು ಮಾತನಾಡಿದರು.

ಪಿರಿಯಾಪಟ್ಟಣ, ಮೇ 27– ಜೂನ್‌ನಲ್ಲಿ ನಡೆಯುವ ವಿಧಾನ ಪರಿಷತ್ ಚುನಾವಣೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಅವರಿಗೆ ಪಕ್ಷದ ಟಿಕೆಟ್ ನೀಡಬೇಕು ಎಂದು ತಾಲೂಕಿನ ಕಾಂಗ್ರೆಸ್ ಮುಖಂಡರು ಒತ್ತಾಯಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, ಡಾ.ಬಿ.ಜೆ.ವಿಜಯ್ ಕುಮಾರ್ ಅವರು ವಿದ್ಯಾರ್ಥಿ ಚಳವಳಿಯಲ್ಲಿ ಬೆಳೆದು ಬಂದಿದು 1997 ರಿಂದ 2024ರವರೆಗೆ ವಿದ್ಯಾರ್ಥಿ ಸೆನೆಟ್ ಸದಸ್ಯರಾಗಿ, ಮೈಸೂರು ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕಳೆದ 10 ವರ್ಷದಿಂದ ಪಕ್ಷವನ್ನು ಮುನ್ನಡೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇವರ ಅವಧಿಯಲ್ಲಿ ನಡೆದ ವಿಧಾನಸಭಾ ಚುನಾವಣೆ, ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ, ವಿಧಾನ ಪರಿಷತ್ ಚುನಾವಣೆ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ 42 ವರ್ಷಗಳ ನಂತರ ಶೇ.60 ಕಾಂಗ್ರೆಸ್ ಮತದಾನವಾಗಿರುವುದು ಇವರ ಆಡಳಿತ ವೈಖರಿಗೆ ಸಾಕ್ಷಿಯಾಗಿದೆ ಎಂದರು.

ಕಳೆದ ವಿಧಾನಸಭೆ, ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ವಂಚಿತರಾಗಿರುವ ವಿಜಯಕುಮಾರ್ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ಅವರಿಗೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮದ್ ಜಾನ್ ಬಾಬು, ಡಿ.ಟಿ.ಸ್ವಾಮಿ, ಮುಖಂಡರಾದ ಹೊಲದಪ್ಪ, ಬಿ.ಎನ್. ಕರಿಗೌಡ, ವಿಷಕಂಠಯ್ಯ, ಅಶೋಕ್ ಕುಮಾರ್, ಪಿ.ಪಿ.ಮಹದೇವ್, ಅನಿಲ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಗಾವಡಗೆರೆಯಲ್ಲಿ ಹೃದಯ ತಪಾಸಣಾ ಉಚಿತ ಶಿಬಿರ



ಗಾವಡಗೆರೆ, ಮೇ 27– ಗ್ರಾಮೀಣ ಬಡ ಜನರಿಗೆ ಆರೋಗ್ಯ ಸೇವೆ ಒದಗಿಸುವುದು ಪುಣ್ಯದ ಕೆಲಸವಾಗಿದ್ದು, ಇಂತಹ ಸಾರ್ಥಕ ಸೇವೆಯಲ್ಲಿ ಸದಾ ಮುಂಚೂಣಿಯಲ್ಲಿರುವ ಹೃದಯ ತಜ್ಞ ಡಾ.ಮುರಳೀರಾವ್ ಹೃದಯ ತಪಾಸಣೆ ಉಚಿತ ಶಿಬಿರ ಆಯೋಜಿಸಿರುವುದು ಶ್ಲಾಘನೀಯ ಎಂದು ಕೆ.ಆರ್.ನಗರ ತಾಲೂಕು ಆರೋಗ್ಯಾಧಿಕಾರಿ ಡಾ.ನಟರಾಜ್ ತಿಳಿಸಿದರು.


ಗ್ರಾಮದ ಮರಾಠ ಸಮುದಾಯ ಭವನದಲ್ಲಿ ನಡೆದ ಡಾ.ಮುರಳೀರಾವ್ ಎಂಡಿ, ಡಿಎಂ, ಹೃದ್ರೋಗ ತಜ್ಞರು ಮುಕ್ತಾ ಹೃದ್ರೋಗ ಕೇಂದ್ರ ರಾಯಚೂರು, ಭಾರತೀಯ ವೈದ್ಯಕೀಯ ಸಂಘ (ಐಎಂಎ) ಕೃಷ್ಣರಾಜನಗರ, ಶ್ರೀಶಿವಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ ಗಾವಡಗೆರೆ, ಮರಾಠ ಮಾಜಿ ಸೈನಿಕರು ಹಾಗೂ ಎಎಒ ಚಾರಿಟಬಲ್ ಟ್ರಸ್ಟ್ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ನಡೆದ ತಜ್ಞ ವೈದ್ಯರಿಂದ ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಹೃದಯ ತಜ್ಞ ಡಾ.ಮುರಳಿ ಅವರು ಆಯೋಜಿಸಿರುವ ಶಿಬಿರವನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ರಾಜ್ಯ ಸಹಕಾರ ಸಂಘಗಳ ಅಡಿಷನಲ್ ಡೈರೆಕ್ಟರ್ ಪ್ರಕಾಶ್ ರಾವ್ ಮಾತನಾಡಿ, ಡಾ.ಮುರಳೀರಾವ್ ಸರಳ ವ್ಯಕ್ತಿತ್ವದ ವೈದ್ಯರಾಗಿದ್ದು ಅವರ ಮಾರ್ಗದರ್ಶನ ಯುವಕರಿಗೆ ಅಗತ್ಯ ಎಂದರು.

ಹೃದಯ ತಜ್ಞ ಡಾ.ಮುರಳೀರಾವ್ ಮಾತನಾಡಿ, ಹೃದಯ ಸಂಬಂಧಿ ಸಮಸ್ಯೆಗಳಿಗೆ ಸದಾ ಕಾಲ ನಾನು ನಿಮ್ಮೊಂದಿಗೆ ಇದ್ದು ಸಲಹೆ, ಸಹಕಾರ ನೀಡುವುದಾಗಿ ತಿಳಿಸಿದ ಅವರು, ಮರಾಠ ಭವನ ಶೀಘ್ರ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿ ಎಂದು ಶುಭ ಹಾರೈಸಿ ಈಗಾಗಲೇ 1ಲಕ್ಷ ನೀಡಿದ್ದು, ಹೆಚ್ಚುವರಿಯಾಗಿ ಮತ್ತೆ 1 ಲಕ್ಷ ನೀಡುವುದಾಗಿ ಭರವಸೆ ನೀಡಿದರು.

ಶಿಬಿರದಲ್ಲಿ ಬಿಪಿ, ಶುಗರ್, ಇಸಿಜಿ, ಕೊಲೆಸ್ಟ್ರಾಲ್, ಎಕೋ ಪರೀಕ್ಷಿಸಿ ಚಿಕಿತ್ಸೆ ಮತ್ತು ಔಷಧ, ಮಾತ್ರೆಗಳನ್ನು ಉಚಿತವಾಗಿ ನೀಡಲಾಯಿತು. 300ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಗಾದರು. ಸಭೆಯಲ್ಲಿ ಡಾ.ಕಿರಣ್ ಕುಮಾರ್, ಡಾ.ಶ್ರೀಕಾಂತ್, ಪ್ರಕಾಶ್‌ರಾವ್, ಹೊನ್ನಪ್ಪರಾವ್ ಕಾಳಿಂಗೆ, ಸತ್ಯಪ್ಪ, ಲೋಕನಾಥ್ ರಾವ್ ಕದಂ, ಜಿ.ವಿ.ಶ್ರೀನಾಥ್, ಹನುಮಂತು, ಶಿನು, ಪಾಪು ಶಿಂಧೆ, ಪ್ರಮೋದ್, ತುಕಾರಾಂ ಕದಂ, ನಾರಾಯಣ್ ಇತರರಿದ್ದರು.

ವಿಜೃಂಭಣೆಯ ಬಳ್ಳೆ ಮಾಸ್ತಮ್ಮನ ಜಾತ್ರಾ ಮಹೋತ್ಸವ



ಹೆಚ್.ಡಿ.ಕೋಟೆ, ಮೇ 27– ತಾಲೂಕಿನ ಬಳ್ಳೆ ಮಾಸ್ತಮ್ಮನ ಜಾತ್ರಾ ಮಹೋತ್ಸವ ಸೋಮವಾರ ವಿಜೃಂಭಣೆಯಿಂದ ನೆರವೇರಿತು. ಜಾತ್ರಾ ಮಹೋತ್ಸವ ಅಂಗವಾಗಿ ಮುಂಜಾನೆಯಿಂದಲೇ ದೇವಾಲಯದಲ್ಲಿ ಬಳ್ಳೆ ಮಾಸ್ತಮ್ಮ ದೇವಿಗೆ ಹೋಮ ಹಾಗೂ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ಬಳಿಕ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ ಸಾವಿರಾರು ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಅಲ್ಲದೇ ಭಕ್ತರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಅರ್ಚಕ ಮಾದಪ್ಪ ಮಾತನಾಡಿ, ಬಳ್ಳೆ ಮಾಸ್ತಮ್ಮ ಶಕ್ತಿ ದೇವತೆಯಾಗಿದ್ದು, ಕಾಡಂಚಿನಲ್ಲಿ ವಾಸಿಸುವ ಎಲ್ಲಾ ಆದಿವಾಸಿಗಳು ಹಾಗೂ ಇತರ ಜನಾಂಗದವರು ದೇವಿ ಕೃಪೆಯಿಂದಲೇ ಧೈರ್ಯದಿಂದ ಜೀವನ ನಡೆಸುತ್ತಿದ್ದಾರೆ ಎಂದ ಅವರು ತಾಯಿ ಮಾಸ್ತಮ್ಮನ ದೇವಾಲಯ ಮೊದಲು ಕಬಿನಿ ಹಿನ್ನೀರಿನಲ್ಲಿತ್ತು. ಅದನ್ನು ಸ್ಥಳಾಂತರಗೊಳಿಸಿ ಬಳ್ಳೆ ಶಿಬಿರ ಸಮೀಪ ದೇವಾಲಯ ನಿರ್ಮಿಸಿದ್ದು, ದೇವಾಲಯದ ಪಕ್ಕದಲ್ಲಿ ತಾಯಿ ಮಾಸ್ತಮ್ಮ ಉದ್ಭವ ಮೂರ್ತಿಯಾಗಿದ್ದಾಳೆ ಎಂದರು. ವರನಟ ಡಾ.ರಾಜಕುಮಾರ್, ವಿಷ್ಣುವರ್ಧನ್ ಸೇರಿದಂತೆ ಇನ್ನೂ ಹಲವು ನಟ ನಟಿಯರು ಚಿತ್ರೀಕರಣಕ್ಕೆ ಆಗಮಿಸಿದ ವೇಳೆ ತಾಯಿ ಮಾಸ್ತಮ್ಮನ ದರ್ಶನ ಪಡೆದು, ನಂತರ ಚಿತ್ರೀಕರಣ ಆರಂಭಿಸುತ್ತಿದ್ದರು ಎಂದರು.

ಎಸಿ ಮಹಮದ್ ಹ್ಯಾರೀಸ್ ಸುಮೇರ್‌ಗೆ ಸನ್ಮಾನ



ಹುಣಸೂರು, ಮೇ 27– ನಗರದ ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ಕನ್ನಡ ವಿಭಾಗದ ವತಿಯಿಂದ ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆಯಲ್ಲಿ ಉಪವಿಭಾಧಿಕಾರಿ ಮಹಮದ್ ಹ್ಯಾರೀಸ್ ಸುಮೇರ್ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಪುಟ್ಟಶೆಟ್ಟಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ತಾಲೂಕು ಅಧ್ಯಕ್ಷ ಹೆಚ್.ಕೆ.ಮಹದೇವು, ನಿಕಟಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ, ಬಿಇಓ ರೇವಣ್ಣ, ಕಸಾಪ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ತಾಲೂಕು ನಿಕಟಪೂರ್ವ ಅಧ್ಯಕ್ಷ ಸೋಮಶೇಖರ್, ನಟ ಕುಮಾರ್ ಅರಸೇಗೌಡ, ಮಹೇಶ್, ಕಲಾವತಿ, ಮಹದೇವಮ್ಮ, ಲೋಕೇಶ್ ಇನ್ನಿತರರಿದ್ದರು.

ಡಾ.ಯತೀಂದ್ರಗೆ ವಿಧಾನಪರಿಷತ್ ಸ್ಥಾನ ನೀಡಿ

ರಾಜ್ಯ ಆಹಾರ ನಿಗಮದ ಮಾಜಿ ನಿರ್ದೇಶಕ ತಮ್ಮಣ್ಣೇಗೌಡ ಆಗ್ರಹ



ನಂಜನಗೂಡು, ಮೇ 27– ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಸಂಘಟನೆಗೆ ಒತ್ತು ನೀಡಿ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಭಾಗದಲ್ಲಿ ಪಕ್ಷದ ಹೆಚ್ಚು ಶಾಸಕರು ಆಯ್ಕೆಯಾಗಲು ಕಾರಣರಾದ ಮಾಜಿ ಶಾಸಕ ಡಾ.ಯತೀಂದ್ರ ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡಬೇಕು ಎಂದು ರಾಜ್ಯ ಆಹಾರ ನಿಗಮದ ಮಾಜಿ ನಿರ್ದೇಶಕ ತಮ್ಮಣ್ಣೇಗೌಡ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಳೇ ಮೈಸೂರು ಭಾಗದ 5 ಜಿಲ್ಲೆಗಳಲ್ಲಿ ಕುರುಬ ಜನಾಂಗದ ಪ್ರಬಲ ನಾಯಕರ ಅವಶ್ಯಕತೆ ಇತ್ತು. ಮುಂಬರುವ ದಿನಗಳಲ್ಲಿ ಆ ಸ್ಥಾನವನ್ನು ಯತೀಂದ್ರ ತುಂಬುವ ಮೂಲಕ ಪ್ರಬಲ ನಾಯಕರಾಗಿ ರೂಪುಗೊಳ್ಳಲಿದ್ದಾರೆ. ತಮ್ಮ ಸಂಘಟನಾ ಚಾತುರ್ಯದಿಂದ ಎಲ್ಲಾ ಜನಾಂಗದವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಲು ಶ್ರಮಿಸಿದ್ದಾರೆ. ಜೊತೆಗೆ ಹಿಂದುಳಿದ ಜನಾಂಗದ ಪ್ರಮುಖ ನಾಯಕರಾಗಿ ಯಾವುದೇ ಆಕ್ಷೇಪಗಳಿಲ್ಲದೆ ಕಾಂಗ್ರೆಸ್ ಪಕ್ಷ ಸಂಘಟಿಸಿ ನಿಷ್ಕಳಂಕ ನಾಯಕನಾಗಿ ಗುರುತಿಸಿಕೊಂಡಿದ್ದಾರೆ. ಆದ್ದರಿಂದ ಡಾ.ಯತೀಂದ್ರ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಹೆಚ್.ಸಿ.ಮಹದೇವಪ್ಪ, ವೆಂಕಟೇಶ್ ಅವರನ್ನು ಈ ಮೂಲಕ ಒತ್ತಾಯಿಸುತ್ತೇನೆ ಎಂದರು. ಈ ವೇಳೆ ಕುರಿಹುಂಡಿ ಗ್ರಾಪಂ ಮಾಜಿ ಉಪಾಧ್ಯಕ್ಷ ಕೆ.ಆನಂದ್, ಮುಖಂಡರಾದ ಸುರೇಶ್, ಸೋಮಶೇಖರ್, ಪ್ರಕಾಶ್, ಜವರೇಗೌಡ ಇದ್ದರು.

ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ

ಜಿಪಂ ಹಾಗೂ ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯೆ ಶಶಿಕಲಾ ನಾಗರಾಜು ಮನವಿ



ಕಾಂಗ್ರೆಸ್ ಪಕ್ಷದ ನಿವೃತ್ತ ಶಿಕ್ಷಕರ ಪೂರ್ವಭಾವಿ ಸಭೆಯಲ್ಲಿ ಜಿಪಂ ಮಾಜಿ ಸದಸ್ಯೆ ಶಶಿಕಲಾ ನಾಗರಾಜ್ ಮಾತನಾಡಿದರು.

ತಿ.ನರಸೀಪುರ, ಮೇ 27– ನಿವೃತ್ತ ಶಿಕ್ಷಕರ ಪರವಾಗಿ ಕೆಲಸ ಮಾಡಲು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡುವಂತೆ ಜಿಪಂ ಹಾಗೂ ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯೆ ಶಶಿಕಲಾ ನಾಗರಾಜು ಮನವಿ ಮಾಡಿದರು.

ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ನಡೆದ ನಿವೃತ್ತ ಶಿಕ್ಷಕರ ಸಂಘದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ನಿವೃತ್ತ ಶಿಕ್ಷಕರ ಪರವಾಗಿ ಕೆಲಸ ಮಾಡಲು ಸಿದ್ಧವಾಗಿದೆ. ಶಿಕ್ಷಕರ ಪರವಾಗಿ ಈಗಾಗಲೇ ಮರಿತಿಬ್ಬೇಗೌಡರು ಹಲವು ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಮತ್ತೊಂದು ಅವಧಿಗೆ ಅವರಿಗೆ ಅವಕಾಶ ಮಾಡಿಕೊಡುವ ಮೂಲಕ ಸಿದ್ದರಾಮಯ್ಯ ತಮರು ಕ್ಷೇತ್ರದಲ್ಲಿ ಮತ ವಿಭಜನೆ ಆಗದಂತೆ ನೋಡಿಕೊಳ್ಳಬೇಕು. 2006ರ ನಂತರ ಶಿಕ್ಷಕರ ಕೆಲಸಕ್ಕೆ ನೇಮಕಗೊಂಡಿರುವವರಿಗೆ ಪಿಂಚಣಿ ನೀಡಲಾಗುತ್ತಿಲ್ಲ. ಈ ಬಾರಿ ವಿಧಾನ ಪರಿಷತ್‌ನಲ್ಲಿ ನಮ್ಮ ಅಭ್ಯರ್ಥಿ ಜಯಗಳಿಸಿದಲ್ಲಿ ಪಿಂಚಣಿ ವ್ಯವಸ್ಥೆಯಿಂದ ಹೊರಗುಳಿದಿರುವ ಶಿಕ್ಷಕರಿಗೆ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಿ ಅವರ ಬದುಕನ್ನು ಹಸನುಗೊಳಿಸಲಾಗುತ್ತದೆ ಎಂದರು.

ವರುಣ ಕ್ಷೇತ್ರದಿಂದ ಆಯ್ಕೆಯಾದ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ. ಹಾಗೆಯೇ ಕ್ಷೇತ್ರದಿಂದ ಆಯ್ಕೆಯಾದ ಮಹದೇವಪ್ಪ ಸಚಿವರಾಗಿದ್ದಾರೆ. ಹಾಗಾಗಿ ಶಿಕ್ಷಕರ ಬೇಡಿಕೆ ಈಡೇರಿಕೆ ಕಷ್ಟವೇನಲ್ಲ. ಆದರೆ ನಿಮ್ಮ ಪರ ದನಿ ಎತ್ತಲು ವಿಧಾನ ಪರಿಷತ್‌ನಲ್ಲಿ ಗೆಲುವಿನ ಶಕ್ತಿ ಬೇಕಿದೆ. ಮರಿತಿಬ್ಬೇಗೌಡರನ್ನು ಗೆಲ್ಲಿಸಿಕೊಟ್ಟರೆ ನಾನು ನಿಮ್ಮ ಬೇಡಿಕೆ ಈಡೇರಿಕೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ನಾನು ಸುಮ್ಮನೆ ಮಾತು ಕೊಡುವುದಿಲ್ಲ. ಕೊಟ್ಟರೆ ಈಡೇರಿಸುವ ತನಕ ವಿಶ್ರಮಿಸುವುದಿಲ್ಲ. ಹಾಗಾಗಿ ನಿವೃತ್ತ ಶಿಕ್ಷಕರು ಪ್ರಸಕ್ತ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕೆಂದು ಮನವಿ ಮಾಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಸುಬ್ಬಯ್ಯ ಮಾತನಾಡಿ, ಶಿಕ್ಷಕರ ಶ್ರೇಯೋಭಿವೃದ್ಧಿ, ಹೋರಾಟ ಹಾಗೂ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಶಿಕ್ಷಕರ ಪರ ನಿರಂತರವಾಗಿ ಹೋರಾಟ ಮಾಡುತ್ತಾ ಬಂದಿರುವ ಮರಿತಿಬ್ಬೇಗೌಡರು ಮತ್ತೊಂದು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಯಾಗಬೇಕಿದೆ. ಶಿಕ್ಷಣ ರಂಗವನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಪರಿಭಾವಿಸಿರುವ ಮರಿತಿಬ್ಬೇಗೌಡರು ಮೈಸೂರು ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಶೈಕ್ಷಣಿಕ ರಂಗದ ಪ್ರಗತಿಗಾಗಿ ದುಡಿಯುತ್ತಿದ್ದಾರೆ. ಹಾಗಾಗಿ ಮತ್ತೊಂದು ಅವಧಿಗೆ ಅವಕಾಶ ಸಿಕ್ಕಲ್ಲಿ ನೆನೆಗುದಿಗೆ ಬಿದ್ದಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಲು ಮುಂದಾಗಲಿದ್ದಾರೆ. ವಿಧಾನ ಪರಿಷತ್ ಉಪ ಸಭಾಪತಿಯಾಗಿ ಸೇವೆ ಸಲ್ಲಿಸಿ, ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ 4ನೇ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿರುವ ಇವರಿಗೆ ಮತ್ತೊಂದು ಅವಧಿಗೆ ಅವಕಾಶ ಕಲ್ಪಿಸಿಕೊಡಲು ತಾಲೂಕಿನ 490 ಶಿಕ್ಷಕರು ಮೊದಲ ಪ್ರಾಶಸ್ತ್ಯದ ಮತ ನೀಡಲು ನಿವೃತ್ತ ಶಿಕ್ಷಕರು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಮೈಸೂರು ಜಿಲ್ಲಾ ಶಿಕ್ಷಕ ಸಂಘದ ಅಧ್ಯಕ್ಷ ಜವರೇಗೌಡ, ಕಬಿನಿ ಮಹಾಮಂಡಳಿ ಅಧ್ಯಕ್ಷ ಮಹದೇವಪ್ಪ, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಪುಟ್ಟಬುದ್ಧಿ, ಉಪಾಧ್ಯಕ್ಷ ಎಸ್.ಬಸವರಾಜು, ಪ್ರಧಾನ ಕಾರ್ಯದರ್ಶಿ ಬಿ.ಎಂ.ರಾಮು, ಖಜಾಂಚಿ ದಿಲೀಪ್, ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಲಿಂಗರಾಜು, ನಿರ್ದೇಶಕರಾದ ಬಸವರಾಜು, ವೆಂಕಟರಾಮು, ನಾಗೇಂದ್ರ ಪ್ರಭು, ಕುಮಾರ್, ಜಯಪ್ಪ ಮತ್ತು ವರುಣ ವ್ಯಾಪ್ತಿಯ ಅಧ್ಯಕ್ಷರಾದ ಬಸವಣ್ಣ ಗುರುಮಲ್ಲಯ್ಯ, ಮಾಜಿ ಮುಡಾ ಸದಸ್ಯ ಶಿವಕುಮಾರ್ ಮತ್ತು ಎಲ್ಲಾ ಶಿಕ್ಷಕ ವೃಂದದವರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟರ್ಬೋ (ಮ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮ್ಯಾಟ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ)	4 ಪ್ರದರ್ಶನಗಳು
ಸಂಗಂ	
3ನೇ ಕೃಷ್ಣಪ್ಪ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತ್ರಿಭುಜ (ಕ)	ಬೆಳಗಿನ ಪ್ರದರ್ಶನ
ಕೃಷ್ಣ ನೀ ಬೇಗನೆ ಬಾರೋ (ಕ)	3 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, 3ನೇ ಕೃಷ್ಣಪ್ಪ (ಕ): ಮ.1.10ಕ್ಕೆ.
ಸ್ಕ್ರೀನ್ 2	ರಾಮನ ಅವತಾರ (ಕ): ಬೆ.10.30ಕ್ಕೆ, ಬಯ್ಯಾ ಜಿ (ಹಿಂ): ಮ.1.35ಕ್ಕೆ, ಸಂ.4.25ಕ್ಕೆ, ಥಾಲವನ್ (ಮ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ಪಿಟಿ ಸರ್ (ತ): ಮ.1.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಟರ್ಬೋ (ಮ): ಬೆ.10.10ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.1.50ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಪರಿಚಿತ ವಾಹನ ಡಿಕ್ಕಿ: ಪಾದಚಾರಿ ಸ್ಥಳದಲ್ಲೇ ಸಾವು

ಹುಣಸೂರು, ಮೇ 27– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಹೊರವಲಯದ ಹಾಳಗೆರೆ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಕೃಷ್ಣೇಗೌಡ(60) ಸಾವನ್ನಪ್ಪಿದವರು. ಈತ ಸಂತೆ ರಸ್ತೆ ಬದಿ ನಡೆದುಕೊಂಡು ಮನೆಗೆ ಹೋಗುತ್ತಿದ್ದ ವೇಳೆ ಪಿರಿಯಾಪಟ್ಟಣ ಕಡೆಯಿಂದ ಬಂದ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡ ಕೃಷ್ಣೇಗೌಡ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದು ನೇತ್ರ ಶಸ್ತ್ರಚಿಕಿತ್ಸಾ ಉಚಿತ ಶಿಬಿರ

ತಿ.ನರಸೀಪುರ, ಮೇ 27– ಶ್ರೀಕಂಠೇಶ್ವರ ಫ್ಯೂಯಲ್ಸ್, ಶ್ರೀಕಂಠೇಶ್ವರ ಅಕ್ಕಿ ಗಿರಣಿ ಮತ್ತು ಶಂಕರ ಕಣ್ಣಿನ ಆಸ್ಪತ್ರೆ ಬೆಂಗಳೂರು, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ ಮೈಸೂರು, ತಾಲೂಕು ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ತಿ.ನರಸೀಪುರ ತಾ.ಆಡಳಿತ ವೈದ್ಯಾಧಿಕಾರಿಗಳು, ನೇತ್ರಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ಪಿ.ಮಹದೇವಮ್ಮನವರ ಸ್ಮರಣಾರ್ಥ ಬೃಹತ್ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ ಮೇ 28ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಲಿದೆ.

ಶಸ್ತ್ರ ಚಿಕಿತ್ಸೆಗೆ ಒಳಪಡುವವರು 2 ಆಧಾರ್ ಕಾರ್ಡ್ ಜೆರಾಕ್ಸ್, 2 ರೇಷನ್ ಕಾರ್ಡ್ ಜೆರಾಕ್ಸ್ ಅಥವಾ ಚುನಾವಣೆ ಗುರುತಿನ ಚೀಟಿ ಜೆರಾಕ್ಸ್, 2 ಕಲರ್ ಫೋಟೋ ಮತ್ತು ಫೋನ್ ನಂಬರ್ ತಪ್ಪದೇ ತರಬೇಕು.

ಶಿಬಿರದಲ್ಲಿ ಚಿಕ್ಕ ಮಕ್ಕಳು ಸೇರಿದಂತೆ ದೊಡ್ಡವರಿಗೆ ಕಣ್ಣಿಗೆ ಸಂಬಂಧಿಸಿದಂತೆ ಉಚಿತ ಚಿಕಿತ್ಸೆ ನೀಡಲಾಗುವುದು. ಶಸ್ತ್ರ ಚಿಕಿತ್ಸೆ ಅಗತ್ಯವಿದ್ದವರಿಗೆ ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡಲಾಗುವುದು. ನೇತ್ರ ತಜ್ಞರ ಸಲಹೆಯಂತೆ ಉಚಿತ ಲೆನ್ಸ್ ಅಳವಡಿಸಲಾಗುತ್ತದೆ. ಊಟ, ಸಾರಿಗೆ ವ್ಯವಸ್ಥೆ ಎಲ್ಲವೂ ಉಚಿತವಾಗಿರುತ್ತದೆ ಎಂದು ನೇತ್ರ ಪರೀಕ್ಷಕ ಆರ್.ಉಮೇಶ್ ಕುಮಾರ್ ತಿಳಿಸಿದ್ದಾರೆ.

ವಿದ್ವಾನ್ ಮೈಸೂರು ವಾಸುದೇವಾಚಾರ್ಯರ ಸ್ಮರಣಾರ್ಥ ಸಂಗೀತೋತ್ಸವ ಸಮಾರೋಪ

ಶ್ರೀಯುತರ ಸಾಧನೆ ಯುವ ಸಮೂಹಕ್ಕೆ ಮಾದರಿ: ವಿದ್ವಾನ್ ಶೃಂಗೇರಿ ನಾಗರಾಜ



ವಿದ್ವಾನ್ ಮೈಸೂರು ವಾಸುದೇವಾಚಾರ್ಯ ಸ್ಮರಣಾರ್ಥ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ವಿದುಷಿ ಪುಷ್ಪಾ ಶ್ರೀನಿವಾಸ್ ಅವರಿಗೆ 'ಕರ್ನಾಟಕ ಸಂಗೀತಾಚಾರ್ಯ' ಪ್ರಶಸ್ತಿ, ವಿದ್ವಾನ್ ಎಚ್.ಕೆ.ನರಸಿಂಹಮೂರ್ತಿ ಅವರಿಗೆ 'ಶ್ರೇಷ್ಠ ಜೀವಮಾನ ಸಾಧನೆ ಪ್ರಶಸ್ತಿ' ವಿದ್ವಾನ್ ಶೃಂಗೇರಿ ನಾಗರಾಜ್ ಅವರಿಗೆ ' ಶ್ರೀವಾಸುದೇವಾಚಾರ್ಯ ಸಂಸ್ಮರಣ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು, ಮೇ 27(ಎಸ್‌ಪಿಎನ್)– ವಿದ್ವಾನ್ ಮೈಸೂರು ವಾಸುದೇವಾಚಾರ್ಯ ಅವರ ಸಂಗೀತ ಕ್ಷೇತ್ರದ ಸಾಧನೆಯನ್ನು ಇಂದಿನ ಯುವ ಸಮೂಹ ತಿಳಿದು ಕೊಳ್ಳಬೇಕು ಎಂದು ವಿದ್ವಾನ್ ಶೃಂಗೇರಿ ನಾಗರಾಜ್ ಆಗ್ರಹಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಒಕ್ಕೂಟ ಟ್ರಸ್ಟ್ ವತಿಯಿಂದ ವಿದ್ವಾನ್ ಮೈಸೂರು ವಾಸುದೇವಾಚಾರ್ಯ ಸ್ಮರಣಾರ್ಥ ಏರ್ಪಡಿಸಿದ್ದ ಮೂರು ದಿನಗಳ ಸಂಗೀತೋತ್ಸವ ಕಾರ್ಯಕ್ರಮದ ಸಮಾರೋಪದಲ್ಲಿ ಅವರ ಹೆಸರಿನ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದರು.

ವಾಸುದೇವಾಚಾರ್ಯರು ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. ಅದರಲ್ಲೂ ಕರ್ನಾಟಕ ಸಂಗೀತದಲ್ಲಿ ಸಾಧನೆ ಮಾಡಿದ್ದಾರೆ. ಅಲ್ಲದೆ, ದೇಶದ ವಿವಿಧ ವೇದಿಕೆಗಳಲ್ಲಿ ಕರ್ನಾಟಕ ಸಂಗೀತವನ್ನು ಪ್ರಚುರಪಡಿಸುವಲ್ಲಿ ಇವರ ಸಾಧನೆ ಅಮೋಘ. ಅಲ್ಲದೆ, ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ಆಳ್ವಿಕೆಯಲ್ಲಿ ಆಸ್ಥಾನ ವಿದ್ವಾಂಸರಾಗಿ ಸೇವೆ ಸಲ್ಲಿಸಿದ್ದಾರೆ ಎಂದರು.

ವಾಸುದೇವಾಚಾರ್ಯರು ಸುಮಾರು 200ಕ್ಕೂ ಹೆಚ್ಚು ಸಂಗೀತ ಪ್ರಕಾರಗಳನ್ನು ರಚನೆ ಮಾಡಿದ್ದಾರೆ. ಆಚಾರ್ಯರು, ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಸಂಗೀತ ಗುರುಗಳಾಗಿದ್ದರು. ಅಲ್ಲದೆ ಒಡೆಯರ್ ಅವರು ರಚಿಸುತ್ತಿದ್ದ ಸಂಗೀತ ರಚನೆಯನ್ನು ಒಮ್ಮೆ ವಾಸುದೇವಾಚಾರ್ಯರ ಬಳಿ ತೋರಿಸಿ, ಬದಲಾವಣೆಗೆ ಸಲಹೆಗಳನ್ನು ಕೇಳುತ್ತಿದ್ದರು ಎಂದರು.

ಆಚಾರ್ಯರು, ಕರ್ನಾಟಕ ಸಂಗೀತ ವಾಗ್ಗೇಯಕಾರರ ಪಂಕ್ತಿಯಲ್ಲಿ ಶಾಶ್ವತ ಸ್ಥಾನವನ್ನು ಸಂಪಾದಿಸಿದ್ದಾರೆ. ಅಲ್ಲದೆ, ಆಚಾರ್ಯರ ಗಾಯನದ ಹಿರಿಮೆಯನ್ನು ಡಿವಿಜಿ ಅವರು, ಆನಂದಿಸಿ ಕೊಂಡಾಡಿದ್ದಾರೆ. ಅಲ್ಲದೆ, ವಾಸುದೇವಾಚಾರ್ಯರ ಸಂಗೀತ ಕ್ಷೇತ್ರದಲ್ಲಿನ ಸಾಧನೆ ಇಂದಿನ ಯುವ ಸಂಗೀತಗಾರರಿಗೆ ಮಾದರಿ ಎಂದರಲ್ಲದೆ, ಅವರ ಹೆಸರಿನಲ್ಲಿ ಪ್ರಶಸ್ತಿ ಸ್ವೀಕರಿಸಿರುವುದು ಅತ್ಯಂತ ಸಂತೋಷ ಸಂಗತಿ ಹಾಗೂ ಆಚಾರ್ಯರೇ, ನನಗೆ ಆಶೀರ್ವಾದ ಮಾಡಿದ ಅನುಭವ ನನಗಾಗುತ್ತಿದೆ ಎಂದರು.

ಮೂವರು ಸಾಧಕರಿಗೆ ಸನ್ಮಾನ: ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ವಿದುಷಿ ಪುಷ್ಪಾ ಶ್ರೀನಿವಾಸ್ ಅವರಿಗೆ 'ಕರ್ನಾಟಕ ಸಂಗೀತಾಚಾರ್ಯ' ಪ್ರಶಸ್ತಿ, ವಿದ್ವಾನ್ ಎಚ್.ಕೆ.ನರಸಿಂಹಮೂರ್ತಿ ಅವರಿಗೆ 'ಶ್ರೇಷ್ಠ ಜೀವಮಾನ ಸಾಧನೆ ಪ್ರಶಸ್ತಿ' ವಿದ್ವಾನ್ ಶೃಂಗೇರಿ ನಾಗರಾಜ್ ಅವರಿಗೆ ' ಶ್ರೀವಾಸುದೇವಾಚಾರ್ಯ ಸಂಸ್ಮರಣ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ವೇದಿಕೆಯಲ್ಲಿ ಪ್ರೊ.ರಾ.ವಿಶ್ವೇಶ್ವರನ್, ಡಾ.ರಮಾ ಬೆಣ್ಣೂರು, ಎ.ಆರ್.ರಘುರಾಂ, ಭ್ರಮರ ಟ್ರಸ್ಟ್ ಸಂಸ್ಥಾಪಕಿ ಮಾಧುರಿ ತಾತಾಚಾರ್, ನಾಗಮಣಿ ಶ್ರೀನಾಥ್, ವಸಂತ ಮಾಧವಿ, ಸುಮಾಸುಧೀಂದ್ರ ರಮಾ, ಜ್ಯೋತ್ಸ್ನಾ ಶ್ರೀಕಾಂತ ಸೇರಿದಂತೆ ಇತರರಿದ್ದರು.

ಇದಕ್ಕೂ ಮುನ್ನ ವಿದ್ವಾನ್ ವಾಸುದೇವಾಚಾರ್ಯರ ಕೃತಿಗಳನ್ನಾಧರಿಸಿದ ವಿದುಷಿ ಮೈಸೂರು ರಾಜಲಕ್ಷ್ಮೀ ವೀಣಾವಾದನ ನಡೆಸಿಕೊಟ್ಟರು. ಅಲ್ಲದೆ, ವಿದುಷಿ ಆರ್.ಎನ್.ಶ್ರೀಲತಾ, ರಾ.ಸ.ನಂದಕುಮಾರ್ ನೇತೃತ್ವದಲ್ಲಿ ವಿದುಷಿ ದೀಪಾರಾವ್, ಎಸ್.ಚೈತ್ರಿಕ, ಕೆ.ಶ್ರೀದೇವಿದಾಸ್, ಸಿ.ಎಸ್.ಶ್ರೇಯಾ, ತನ್ಮಯೀ ಕಿಶೋರ್, ತನುಶ್ರೀ, ಎಸ್.ಚಿನ್ಮಯಿ, ನಿರಂಜನಿಮ ಆರ್.ಭಾರ್ಗವ ಅವರಿಂದ ಗಾಯಕರ ತಂಡ ಗೋಷ್ಠಿ ಗಾಯನ ನಡೆಸಿಕೊಟ್ಟರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇದ್ದ ವೇದಿಕೆ ಕುಸಿತ



ಪಾಲಿಗಂಜ್ (ಬಿಹಾರ): ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿದ್ದ ವೇದಿಕೆ ಕುಸಿದು ಬಿದ್ದ ಪರಿಣಾಮ ಸ್ಥಳದಲ್ಲಿ ಆತಂಕದ ಪರಿಸ್ಥಿತಿ ನಿರ್ಮಾಣವಾಗಿದೆ.

ಪಾಟಲಿಪುತ್ರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರ ಪುತ್ರಿ ಮಿಸಾ ಭಾರತಿ ಪರ ಮತಯಾಚನೆ ಮಾಡಲು ರಾಹುಲ್ ಗಾಂಧಿ ಪಾಟ್ನಾಕ್ಕೆ ಬಂದಿದ್ದರು. ಪಾಲಿಗಂಜ್ ಪ್ರದೇಶದಲ್ಲಿ ಆಯೋಜಿಸಿದ್ದ ಚುನಾವಣಾ ಸಮಾವೇಶದಲ್ಲಿ ರಾಹುಲ್ ಗಾಂಧಿ ಭಾಗವಹಿಸಿದ್ದರು. ಅವರು ವೇದಿಕೆ ಮೇಲೆ ಬರುತ್ತಿದ್ದಂತೆಯೇ ವೇದಿಕೆಯ ಒಂದು ಭಾಗ ಏಕಾಏಕಿ ಕುಸಿದಿದೆ. ಕೂಡಲೇ ಎಚ್ಚೆತ್ತ ಭಾರತಿ ಅವರು ರಾಹುಲ್ ಕೈಯ್ಯನ್ನು ಹಿಡಿದುಕೊಂಡು ಪಕ್ಕಕ್ಕೆ ಕರೆದುಕೊಂಡು ಹೋಗಿದ್ದಾರೆ. ಜತೆಗೆ ಭದ್ರತಾ ಸಿಬ್ಬಂದಿಯು ರಾಹುಲ್ ನೆರವಿಗೆ ಧಾವಿಸುತ್ತಿರುವ ದೃಶ್ಯ ವಿಡಿಯೊದಲ್ಲಿ ಸೆರೆಯಾಗಿದೆ.

ಸಿಎಂ ಪುತ್ರನ ಸಾವಿನ ಬಗ್ಗೆ ತನಿಖೆ ನಡೆಯಿತೇ?



ಕೋಲಾರ: ಪ್ರಜ್ವಲ್ ರೇವಣ್ಣ ಅವರನ್ನು ದೇವೇಗೌಡರೇ ವಿದೇಶಕ್ಕೆ ಕಳುಹಿಸಿದ್ದಾರೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದು, ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಅವರ ಪುತ್ರ ಅಲ್ಲೆಲ್ಲೋ ಹೋಗಿ ಮೃತ ಪಟ್ಟಿದ್ದರ ಬಗ್ಗೆ ತನಿಖೆ ನಡೆಸಿದರೆ ಆ ಬಗ್ಗೆ ನಾವೇನು ಒತ್ತಾಯಿಸಿದ್ದೇವೆಯೇ. ಆತ ಹೋಗಿದ್ದೆಲ್ಲಿಗೆ, ಯಾವ ಕಾರ್ಯಕ್ರಮ. ಆತನನ್ನು ಕರೆದುಕೊಂಡು ಹೋದವರು ಸಾಧುಗಳೇ ಎಂದು ಜೆಡಿಎಸ್ ರಾಜ್ಯ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಯೊಬ್ಬರು ಸಚಿವರ ಹೆಸರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುಮಾರು 187 ಕೋಟಿ ದುರ್ಬಳಕೆಯಾಗಿದ್ದು, ಡೆತ್‌ನೋಟ್‌ನಲ್ಲಿ ಸಚಿವರ ಮೌಖಿಕ ಆದೇಶದ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಇದು ಸರ್ಕಾರದ ಭ್ರಷ್ಟಾಚಾರಕ್ಕೆ ಸಾಕ್ಷಿ ಎಂದು ವಾಗ್ದಾಳಿ ನಡೆಸಿದರು.

ದುಡ್ಡು ಹೊಡೆಯುವ ಉದ್ದೇಶದಿಂದ ಸೆಕ್ಯೂರಿಟಿ ಏಜೆನ್ಸಿ ಮೂಲಕ ಬಿಬಿಎಂಪಿ ಶಾಲೆಗಳಿಗೆ ಶಿಕ್ಷಕರನ್ನು ನಿಯೋಜಿಸಲು ರಾಜ್ಯ ಸರ್ಕಾರ ಹೊರಟಿದೆ. ಹೀಗಾದರೆ, ಸರ್ಕಾರ ಏಕಿರಬೇಕು. ಶಿಕ್ಷಣ ಸಚಿವರ ಅಗತ್ಯವೇನಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡುವ ಬಗ್ಗೆ ಯೋಚಿಸದೆ ಅದರಲ್ಲೂ ಎಷ್ಟು ಹಣ ದೋಚಬಹುದು ಎಂಬುದರ ಬಗ್ಗೆ ಚಿಂತಿಸುತ್ತಿದೆ ಎಂದು ಹರಿಹಾಯ್ದರು.

ಚನ್ನಗಿರಿಯಲ್ಲಿನ ಲಾಕಪ್ ಡೆತ್ ಪ್ರಕರಣ ಮುಚ್ಚಿ ಹಾಕಲು ಸರ್ಕಾರ ಹೊರಟಿದೆ. ಪತಿಯು ಮಟ್ಕಾ ದಂಧೆಯ ಚಟುವಟಿಕೆಗಳಿಗೆ ಪ್ರತಿ ತಿಂಗಳು ಪೊಲೀಸ್ ಇಲಾಖೆಗೆ 4.5 ಲಕ್ಷ ಹಫ್ತಾ ನೀಡುತ್ತಿದ್ದರು, ಈ ಬಾರಿ ನೀಡದ ಕಾರಣ ಈ ಕೃತ್ಯ ನಡೆದಿರುವ ವಿಚಾರವನ್ನು ಪತ್ನಿಯೇ ಹೇಳಿಕೊಂಡಿದ್ದಾರೆ. ವಿರೋಧ ಪಕ್ಷಗಳು ಗಾಳಿಯಲ್ಲಿ ಗುಂಡು ಹಾರಿಸುತ್ತಿವೆ ಎಂಬುದಾಗಿ ಗೃಹ ಸಚಿವರು ಲಘುವಾದ ಹೇಳಿಕೆ ನೀಡಿದ್ದಾರೆ ಅಂಗೈ ಹುಣ್ಣಿಗೆ ಕನ್ನಡಿ ಬೇಕೇ ಎಂದು ಪ್ರಶ್ನಿಸಿದರು.

ಜೂನ್ 4ರಂದು ಲೋಕಸಭೆ ಚುನಾವಣಾ ಫಲಿತಾಂಶ ಬಂದ ನಂತರ ರಾಜ್ಯ ಸರ್ಕಾರದ ವೈಫಲ್ಯದ ವಿರುದ್ಧ ಹೋರಾಟ ರೂಪಿಸುತ್ತೇವೆ. ಈ ಸಂಬಂಧ ಮೈತ್ರಿ ಪಕ್ಷ ಬಿಜೆಪಿ ಜೊತೆ ಚರ್ಚಿಸುತ್ತೇವೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರ ತನ್ನ ಜವಾಬ್ದಾರಿ ನಿರ್ವಹಣೆಯಲ್ಲಿ ಸಂಪೂರ್ಣ ವೈಫಲ್ಯ ಕಂಡಿದೆ. ಅಭಿವೃದ್ಧಿ ಕುಂಠಿತಗೊಂಡಿದ್ದು, ಸಾಲದ ಹೊರೆ ಹೇರುತ್ತಿದೆ. ಸರ್ಕಾರದ ರಚನೆಯ ಆರಂಭದಲ್ಲೇ ವರ್ಗಾವಣೆ ದಂಧೆ ಯಥೇಚ್ಛವಾಗಿ ನಡೆಯಿತು. ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡಿದ್ದು, ಆಡಳಿತ ಯಂತ್ರ ಕುಸಿದೆ. ರಾಜ್ಯದಲ್ಲಿ ನಡೆದಿರುವ ಕಾನೂನುಬಾಹಿರ ಕೃತ್ಯಗಳೇ ಅದಕ್ಕೆ ಸಾಕ್ಷಿ ಎಂದು ಟೀಕಿಸಿದರು. ಮಳೆ ಪ್ರಾರಂಭವಾಗಿದ್ದು, ಬಿತ್ತನೆ ಬೀಜದ ಬೆಲೆಯನ್ನು ಶೇ 70ರಷ್ಟು ಏರಿಸಿದೆ. ಹಲವು ಕಡೆ ಗೊಬ್ಬರದ ಕೊರತೆ ಇದೆ. ಕಾಂಗ್ರೆಸ್‌ನ ಒಂದು ವರ್ಷ ಆಡಳಿತ ರಾಜ್ಯವನ್ನು 5 ವರ್ಷ ಹಿಂದಕ್ಕೆ ಕೊಂಡೊಯ್ದಿದೆ ಎಂದು ಟೀಕಿಸಿದರು.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿ ಭೇಟಿ



ಬೆಂಗಳೂರು, ಮೇ 27– ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಹೈಕಮಾಂಡ್ ಜೊತೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಮೇ 28) ದೆಹಲಿಗೆ ತೆರಳಲಿದ್ದಾರೆ.

ಮುಖ್ಯಮಂತ್ರಿಗಳು ನಾಳೆ ದೆಹಲಿಯ ಕರ್ನಾಟಕ ಭವನದಲ್ಲಿ ವಾಸ್ತವ್ಯ ಹೂಡಲಿದ್ದು, ಬೆಂಗಳೂರಿಗೆ ಯಾವಾಗ ಹಿಂತಿರುಗುತ್ತಾರೆ ಎಂಬ ಬಗ್ಗೆ ಅಧಿಕೃತ ಮಾಹಿತಿ ಇಲ್ಲ. ಮುಖ್ಯಮಂತ್ರಿಗಳ ಪ್ರವಾಸದ ಬಗ್ಗೆ ಅವರ ವಿಶೇಷ ಕರ್ತವ್ಯಾಧಿಕಾರಿ ಕೆ.ಚಿರಂಜೀವಿ ಅವರು ತಿಳಿಸಿದ್ದು, ನಾಳೆ ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಮುಖ್ಯಮಂತ್ರಿಗಳು ಮಧ್ಯಾಹ್ನ 1.30ಕ್ಕೆ ನವದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪುವರು. ನಂತರ ನವದೆಹಲಿಯ ಅಕ್ಬರ್ ರಸ್ತೆಯಲ್ಲಿರುವ ಎಐಸಿಸಿ ಕಚೇರಿಯಲ್ಲಿ ನಡೆಯಲಿರುವ ಸಭೆಯಲ್ಲಿ ಭಾಗವಹಿಸಿದ ನಂತರ ಅವರು ಕರ್ನಾಟಕ ಭವನದಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಮುಖ್ಯಮಂತ್ರಿಗಳೊಂದಿಗೆ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮತ್ತು ಭದ್ರತಾ ಅಧಿಕಾರಿ ದೆಹಲಿಗೆ ತೆರಳಲಿದ್ದು, ಇದು ಸರ್ಕಾರದ ಅಧಿಕೃತ ಕಾರ್ಯಕ್ರಮವಲ್ಲ ಎಂದು ಚಿರಂಜೀವಿ ತಿಳಿಸಿದ್ದಾರೆ.

ಅನಿಯಮಿತ ಕರೆಂಟ್ ಕಟ್‌ಗೆ ಆಕ್ಷೇಪ

ಮೈಸೂರು,ಮೇ 27(ಪಿಎಂ)– ಇಂದಿಗೆ ವಿದ್ಯುತ್ ನಮ್ಮ ಬದುಕಿಗೆ ಅತ್ಯಾವಶ್ಯ. ಮೊಬೈಲ್ ಚಾರ್ಜ್ ಮಾಡುವುದರಿಂದ ಹಿಡಿದು ನಮ್ಮ ಭಾಗಶಃ ಚಟುವಟಿಕೆಗಳಿಗೆ ವಿದ್ಯುತ್ ಅತ್ಯಗತ್ಯ. ಹೀಗಿರುವಾಗ ಇಡೀ ದಿನ ವಿದ್ಯುತ್ ಇಲ್ಲವಾದರೆ ಎಲ್ಲವೂ ಅಯೋಮಯ.



ಭಾಮಿ ವಿ.ಶೆಣೈ


ತಡೆರಹಿತ ವಿದ್ಯುತ್ ಪೂರೈಕೆ ನಿಗಮದ ಧ್ಯೇಯವೆಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ಘೋಷಿಸಿಕೊಂಡಿದೆ (ತನ್ನ ವೆಬ್‌ಸೈಟ್‌ನಲ್ಲಿ). ಇಂತಹ ಸನ್ನಿವೇಶದಲ್ಲಿ ಸತತ 8 ಗಂಟೆಗೂ ಹೆಚ್ಚು ಕಾಲ ಕರೆಂಟ್ ತೆಗೆಯುವ ನಿಗಮದ ಕಾರ್ಯವೈಖರಿಗೆ ಹಲವು ನಾಗರಿಕರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಿರ್ವಹಣಾ ಕಾರ್ಯನಿಮಿತ್ತ ಹೀಗೆ ನಿರಂತರ ವಿದ್ಯುತ್ ತೆಗೆಯುವ ಬದಲು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು. ಆ ರೀತಿಯಲ್ಲಿ ಉನ್ನತೀಕರಣಗೊಳ್ಳಲು ಅವಕಾಶವಿದೆ. ಆದರೆ ರಾಜ್ಯ ಸರ್ಕಾರದ ಗ್ಯಾರಂಟಿಗಳ ಕಾರಣ ಸದರಿ ನಿಗಮವೂ ಸೇರಿದಂತೆ ಸರ್ಕಾರದ ಎಲ್ಲಾ ಇಲಾಖೆ–ಸಂಸ್ಥೆಗಳ ಉನ್ನತೀಕರಣಕ್ಕೆ ತಡೆ ಬಿದ್ದಿದೆ ಎಂಬುದು ಈ ನಾಗರಿಕರ ಆರೋಪ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ.ಶೆಣೈ, ಇಂದಿನ ಆಧುನಿಕ ಕಾಲಘಟ್ಟದಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಉನ್ನತೀಕರಿಸಲು ಅವಕಾಶ ಇದ್ದೇ ಇದೆ. ಆದರೆ ಅದಕ್ಕೆ ಪೂರಕವಾಗಿ ಆರ್ಥಿಕ ಸಂಪನ್ಮೂಲ ವಿನಿಯೋಗಿಸುವುದು ಮುಖ್ಯ. ದುರಂತವೆಂದರೆ ಅದೇ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಆಧುನಿಕ ಯುಗದಲ್ಲಿ ವಿದ್ಯುತ್ ತೆಗೆಯುವುದು ಸೂಕ್ತವಲ್ಲ. ಏಕೆಂದರೆ ನಮ್ಮ ಎಲ್ಲಾ ಕೆಲಸ ಕಾರ್ಯಗಳು ಈ ದಿನಗಳಲ್ಲಿ ವಿದ್ಯುತ್ ಮೇಲೆಯೇ ಅವಲಂಬಿತವಾಗಿವೆ. ಮೇ 25ರಂದು ನಿರ್ವಹಣಾ ಕೆಲಸದ ನಿಮಿತ್ತ ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಯಾದವಗಿರಿ ಸೇರಿದಂತೆ ಮೈಸೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಪತ್ರಿಕಾ ಪ್ರಕಟಣೆ ನೀಡಿದ್ದರು. ಅಂತೆಯೇ ವಿದ್ಯುತ್ ತೆಗೆಯ ಲಾಯಿತು. ಆದರೆ, ಸಂಜೆ 6 ಗಂಟೆ ಯಾದರೂ ವಿದ್ಯುತ್ ಬರಲಿಲ್ಲ. ನಿಗಮದವರನ್ನು ಸಂಪರ್ಕಿಸಿದಾಗ, 15 ನಿಮಿಷದಲ್ಲಿ ಕರೆಂಟ್ ಬರುತ್ತದೆ ಎಂದು ಹೇಳಿದರು. ಆದರೆ ಬಂದಿದ್ದು ಮಾತ್ರ 6.40ಕ್ಕೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದು ಯಾವುದೇ ತುರ್ತು ಸನ್ನಿವೇಶವಲ್ಲ. ಹಾಗಾಗಿ ಪ್ರಕಟಣೆ ನೀಡಿದಂತೆ ನಿಗದಿತ ಸಮಯಕ್ಕೆ ಕರೆಂಟ್ ಕೊಟ್ಟು ಮಾರನೇ ದಿನ ಕಾರ್ಯಾಚರಣೆ ಮುಂದುವರೆಸಲು ಅವಕಾಶವಿತ್ತು. ಜೊತೆಗೆ ಪರ್ಯಾಯ ವ್ಯವಸ್ಥೆಯನ್ನು ಹೊಂದಿರುವುದು ಮುಖ್ಯ. ಆ ಮೂಲಕ ತಡೆರಹಿತ ವಿದ್ಯುತ್ ಪೂರೈಸಬಹುದು. ಆದರೆ ಇಂತಹ ಪರ್ಯಾಯ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಸರ್ಕಾರ ಹಣ ನೀಡುತ್ತಿಲ್ಲ. ಐದು ಗ್ಯಾರಂಟಿಗಳೇ ಈ ಸನ್ನಿವೇಶಕ್ಕೆ ಕಾರಣ ಎಂದು ಪ್ರತಿಪಾದಿಸಿದರು. ಸಾಮಾನ್ಯ ಜನರು ಮಾತ್ರವಲ್ಲದೆ, ಕೈಗಾರಿಕೆಗಳು, ಆಸ್ಪತ್ರೆ ಸೇರಿದಂತೆ ವಿವಿಧ ಕಚೇರಿ ಕೆಲಸ ಕಾರ್ಯಗಳಿಗೂ ವಿದ್ಯುತ್ ಬೇಕು. ಆದರೆ ಸತತ ಹಲವು ಗಂಟೆಗಳ ಕಾಲ ವಿದ್ಯುತ್ ತೆಗೆದರೆ ಎಷ್ಟೋ ಜನಕ್ಕೆ ತೊಂದರೆ ಉಂಟಾಗಲಿದೆ. ಎಲ್ಲರೂ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ. ಇನ್ನೂ ಅಭಿವೃದ್ಧಿ ಆಗದ ದೇಶಗಳಲ್ಲೇ ಈ ರೀತಿ ವಿದ್ಯುತ್ ಪೂರೈಕೆಯಲ್ಲಿ ಕಣ್ಣಾಮುಚ್ಚಾಲೆ ಆಡುತ್ತಿಲ್ಲ ಎಂದರು.



ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಬೆಂಗಳೂರು ಸಿಟಿ–560037, ಯಮಲೂರು ಮುಖ್ಯ ರಸ್ತೆ, ದಿವ್ಯಶ್ರೀ ವಿಲಾಸ್, ಡಿಗ್ರಿ ಈಸ್ಟ್, ಮನೆ ನಂ.DE09, 77 ರಲ್ಲಿ ವಾಸವಾಗಿರುವ ಶ್ರೀನಿವಾಸ್ ರವರ ಮಗನಾದ ಶ್ರೀ ಎಸ್.ಯಶ್ವಂತ್ ರವರು ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮೇಗಲಾಪುರ ಗ್ರಾಮದಲ್ಲಿ ವಾಸವಾಗಿರುವ ಪಾಪಣ್ಣರವರ ಮಗ ದಕ್ಷಿಣ ಮೂರ್ತಿ ಮತ್ತು ಶ್ರೀಮತಿ ಸುಧಾ ರವರುಗಳಿಂದ ಷೆಡ್ಯೂಲ್ ಸ್ವತ್ತನ್ನು ನೋಂದಾಯಿತ ಶುದ್ಧ ಕ್ರಯಪತ್ರದ ಮೂಲಕ ಪಡೆದುಕೊಳ್ಳಲು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಈ ಬಗ್ಗೆ ಬೇರೆ ಯಾರಿಗಾದರೂ ಹಕ್ಕು, ಹಿತಾಸಕ್ತಿ, ಭಾಗಾಂಶ, ವಗೈರೆಗಳು ಇದ್ದಲ್ಲಿ ಅಂತಹವರುಗಳು ಈ ದಿನದಿಂದ 05 ದಿನದೊಳಗಾಗಿ ಈ ಕೆಳಗೆ ನಮೂದಿಸಿರುವ ವಕೀಲರ ಕಛೇರಿಗೆ, ಕಛೇರಿ ಸಮಯದಲ್ಲಿ ಹಾಜರಾಗಿ ದಾಖಲಾತಿಗಳೊಡನೆ ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಸಾಬೀತುಪಡಿಸ ತಕ್ಕದ್ದು. ಇಲ್ಲದೇ ಹೋದ ಪಕ್ಷದಲ್ಲಿ ಯಾವುದೇ ತಂಟೆ ತಕರಾರುಗಳಿರುವುದಿಲ್ಲವೆಂದು ಭಾವಿಸಿ, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಶುದ್ಧ ಕ್ರಯಪತ್ರವನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳುತ್ತಾರೆ. ನಂತರ ಯಾವುದೇ ತಕರಾರುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಲ್ಲ ಎಂದು ತಿಳಿಯುವುದು.

ಷೆಡ್ಯೂಲ್: ಮೈಸೂರು ತಾಲ್ಲೂಕು. ಇಲವಾಲ ಹೋಬಳಿ, ಮೇಗಲಾಪುರ ಗ್ರಾಮದಲ್ಲಿರುವ ಸರ್ವೆ ನಂ. 47/2ರ ವಿಸ್ತೀರ್ಣ 1 ಎಕರೆ 08.08 ಗುಂಟೆ ಹಾಗೂ ಸರ್ವೆ ನಂ.45/2 ರಲ್ಲಿನ 0–30 ಗುಂಟೆ ಸ್ವತ್ತು ಒಟ್ಟು 1 ಎಕರೆ 38.08 ಗುಂಟೆ ಪೂರ್ತಾ ಸ್ವತ್ತು ಮತ್ತು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ.45/6 & 45/3ರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ.47/1 ರ ಜಮೀನು.ಉತ್ತರಕ್ಕೆ : ಸರ್ವೆ ನಂ.48/2 & 45/3ರ ಜಮೀನು, ದಕ್ಷಿಣಕ್ಕೆ : ರಸ್ತೆ ಮತ್ತು ಸರ್ವೆ ನಂ.46/1 ರ ಜಮೀನು.

ಸಹಿ/– ಕೆ.ಟಿ.ಸುರೇಶ, ಬಿ.ಎ.ಬಿ.ಎಡ್. ಎಲ್‌ಎಲ್‌ಬಿ.
ನಂ.1206/ಎ, ಸಿ.ಹೆಚ್.31/1ಎ, 2ನೇ ಮಹಡಿ, ನ್ಯೂ ಕಾಂತರಾಜ ಅರಸು ರಸ್ತೆ, ಬಲ್ಲಾಳ್ ಸರ್ಕಲ್ ಹತ್ತಿರ, ಶ್ರೀರಾಮಮಂದಿರ ಎದುರು, ಮೈಸೂರು–570005.
ದಿನಾಂಕ: 28.05.2024 ಮೊ: 9448787351

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಬೆಂಗಳೂರು ಸಿಟಿ–560037, ಯಮಲೂರು ಮುಖ್ಯ ರಸ್ತೆ, ದಿವ್ಯಶ್ರೀ ವಿಲಾಸ್, ಡಿಗ್ರಿ ಈಸ್ಟ್, ಮನೆ ನಂ.DE09, 77 ರಲ್ಲಿ ವಾಸವಾಗಿರುವ ಶ್ರೀನಿವಾಸ್ ರವರ ಮಗನಾದ ಶ್ರೀ ಎಸ್.ಯಶ್ವಂತ್ ರವರು ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮೇಗಲಾಪುರ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಎಂ.ಎಸ್.ಮಹದೇವಪ್ಪರವರ ಮಗ ವೀರ ಮಹೇಶ.ಎಂ.ಎಂ ರವರಿಂದ ಷೆಡ್ಯೂಲ್ ಸ್ವತ್ತನ್ನು ನೋಂದಾಯಿತ ಶುದ್ಧ ಕ್ರಯಪತ್ರದ ಮೂಲಕ ಪಡೆದುಕೊಳ್ಳಲು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಈ ಬಗ್ಗೆ ಬೇರೆ ಯಾರಿಗಾದರೂ ಹಕ್ಕು, ಹಿತಾಸಕ್ತಿ, ಭಾಗಾಂಶ, ವಗೈರೆಗಳು ಇದ್ದಲ್ಲಿ ಅಂತಹವರುಗಳು ಈ ದಿನದಿಂದ 05 ದಿನದೊಳಗಾಗಿ ಈ ಕೆಳಗೆ ನಮೂದಿಸಿರುವ ವಕೀಲರ ಕಛೇರಿಗೆ, ಕಛೇರಿ ಸಮಯದಲ್ಲಿ ಹಾಜರಾಗಿ ದಾಖಲಾತಿಗಳೊಡನೆ ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಸಾಬೀತುಪಡಿಸತಕ್ಕದ್ದು. ಇಲ್ಲದೇ ಹೋದ ಪಕ್ಷದಲ್ಲಿ ಯಾವುದೇ ತಂಟೆ ತಕರಾರುಗಳಿರುವುದಿಲ್ಲವೆಂದು ಭಾವಿಸಿ, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಶುದ್ಧ ಕ್ರಯಪತ್ರವನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳುತ್ತಾರೆ. ನಂತರ ಯಾವುದೇ ತಕರಾರುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಲ್ಲ ಎಂದು ತಿಳಿಯುವುದು.

ಷೆಡ್ಯೂಲ್: ಮೈಸೂರು ತಾಲ್ಲೂಕು. ಇಲವಾಲ ಹೋಬಳಿ, ಮೇಗಲಾಪುರ ಗ್ರಾಮದಲ್ಲಿರುವ ಸರ್ವೆ ನಂ. 47/1ರ ವಿಸ್ತೀರ್ಣ 1 ಎಕರೆ 08.08 ಗುಂಟೆ ಪೂರ್ತಾ ಸ್ವತ್ತು ಮತ್ತು ಇದಕ್ಕೆ ಚಕ್ಕುಬಂದಿ:
ಪೂರ್ವಕ್ಕೆ : ಸರ್ವೆ ನಂ.47/2 ರ ಜಮೀನು.
ಪಶ್ಚಿಮಕ್ಕೆ : ಸರ್ವೆ ನಂ.51 ರ ಜಮೀನು.
ಉತ್ತರಕ್ಕೆ : ಸರ್ವೆ ನಂ.48/2 ರ ಜಮೀನು.
ದಕ್ಷಿಣಕ್ಕೆ : ಸರ್ವೆ ನಂ.46/1 ರ ಜಮೀನು.

ಸಹಿ/– ಕೆ.ಟಿ.ಸುರೇಶ, ಬಿ.ಎ.ಬಿ.ಎಡ್. ಎಲ್‌ಎಲ್‌ಬಿ.
ನಂ.1206/ಎ, ಸಿ.ಹೆಚ್.31/1ಎ, 2ನೇ ಮಹಡಿ, ನ್ಯೂ ಕಾಂತರಾಜ ಅರಸು ರಸ್ತೆ, ಬಲ್ಲಾಳ್ ಸರ್ಕಲ್ ಹತ್ತಿರ, ಶ್ರೀರಾಮಮಂದಿರ ಎದುರು, ಮೈಸೂರು–570005.
ದಿನಾಂಕ: 28.05.2024 ಮೊ: 9448787351

ಸಾರ್ವಜನಿಕ ಪ್ರಕಟಣೆ

ಆದಾಗಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಬೆಂಗಳೂರು ಉತ್ತರ–560084, ಸೆಂಟ್ ಥಾಮಸ್ ಟೌನ್, ಹಚ್ಚಿನ್ಸ್ ಮೇನ್ ರೋಡ್, ಮನೆ ನಂ.03 ರಲ್ಲಿ ವಾಸವಾಗಿರುವ ಲೇಟ್.–ಎಸ್.ಅರುಣ್ ಕುಮಾರ್ ಮತ್ತು ಡಾ.ಜ್ಯೋತಿ.–ಎಂ.ಪಿ ರವರ ಮಗನಾದ ಸುಮಾರು 26 ವರ್ಷ ವಯಸ್ಸಿನ ಶ್ರೀ ರವಿಕಿರಣ್.ಎ (ಆಧಾರ್ ನಂ.3508 8667 8045) ರವರಿಂದ ಕ್ರಯಕ್ಕೆ ಕೊಂಡುಕೊಳ್ಳಲು ಇಚ್ಛಿಸಿ ಕ್ರಯದ ವ್ಯವಹಾರವನ್ನು ಮಾಡಲು ನಿಶ್ಚಯಿಸಿರುತ್ತಾರೆ. ಆದ್ದರಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂದಪಟ್ಟಂತೆ ಯಾರಿಗಾದರೂ ಯಾವುದೇ ರೀತಿಯ ಕಾನೂನು ಬದ್ಧ ಹಕ್ಕು–ವಗೈರೆ, ಭಾಗಾಂಶ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ದಿನದಿಂದ 07 ದಿನದ ಒಳಗಾಗಿ ಸಂಬಂದಪಟ್ಟ ದಾಖಾಲಾತಿಗಳೊಂದಿಗೆ ಈ ಕೆಳಕಂಡ ವಕೀಲರನ್ನು ಸಂಪರ್ಕಿಸಿ ತಕರಾರನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಕ್ರಯದ ವ್ಯವಹಾರವನ್ನು ಮುಂದುವರೆಸುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಬೋಗಾದಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಲಿ. ಮೈಸೂರು ರವರು ನಿರ್ಮಿಸಿ ಅಭಿವೃದ್ಧಿಪಡಿಸಿರುವ ಎಸ್.ಬಿ.ಎಂ. ಬಡಾವಣೆ, ಡಿ. ಬ್ಲಾಕ್, ನಿವೇಶನ ಸಂಖ್ಯೆ.219 (ಎರಡುನೂರ ಹತ್ತೊಂಭತ್ತು) ನೇ ನಂಬರ್ **ಸ್ವತ್ತಿಗೆ ಚೆಕ್ಕುಬಂದಿ**: ಪೂರ್ವಕ್ಕೆ: 218ನೇ ನಂಬರ್ ಸ್ವತ್ತು, ಪಶ್ಚಿಮಕ್ಕೆ : 220 ನೇ ನಂಬರ್ ಸ್ವತ್ತು
ಉತ್ತರಕ್ಕೆ :ಲೇಔಟ್ ಬಾರ್ಡ್‌ರ್, ದಕ್ಷಿಣಕ್ಕೆ : ರಸ್ತೆ, ಈ ಮಧ್ಯದಲ್ಲಿರುವ ಪೂರ್ವ ಪಶ್ಚಿಮ 15.00 ಮೀಟರ್ ಉತ್ತರ ದಕ್ಷಿಣ 24.00 ಮೀಟರ್ ಒಟ್ಟು 360 ಚದರ ಮೀಟರ್‌ಗಳುಳ್ಳ ಪೂರ್ತಾ ಕಾಂಪೌಂಡ್ ಒಳಗೊಂಡ ನಿವೇಶನ ಈ ದಾನಪತ್ರಕ್ಕೆ ಒಳಪಟ್ಟ ಸ್ವತ್ತಾಗಿರುತ್ತದೆ.

Sd/- M.G.Siddaraju BBM., LLB
Advocate En,No.KAR 2787/03, # 2773/1, Ch-21/2, roopa complex, 1st floor, 2 cross, Railway gate road, K.G.koppalu, Mysore.
Mob: 7899099995

PUBLIC NOTICE

Notice is given to the general public at large that my client is negotiating and intending to purchase the schedule property from its present owner **Mr. Vasanth Kumar H.K** Son of Kantharaju resident of # 649, Hunsur Main Road, Hinkal, VTC, Vijayanagara 2nd Stage, Mysuru in whose favour Punjab National Bank has issued a registered Sale Certificate dated 01-10-2022 duly registered as Document No.MYN-1-07004-2022-23 stored in CD No.MYND 1356 duly registered before the office of the Sub-registrar Mysuru North, Mysuru. Any individuals, banks, financial institutions, agreement holders etc having any objections for my client entering into any transaction with respect to the schedule property is hereby required to communicate their objections in writing to my office with documentary evidence within **07 days** from the date of this publication. In the absence of any authenticated objections/claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that piece and parcel of the Site No.24 in Sy.No. 11/2 Hinkal Village, Kasaba Hobli, Mysuru Taluk, measuring East to West 9 meters, North to South: (7+5)/2 meters, Area 54 square meters or 581.04 square feet, bounded on the -
East By : Property No.26
West By : Road
North By: Private Property
South By: Property No.25

Sd/- Dinesh Solanki, B.Com, LL.M., Advocate
1197, 12/2, KRB Road, Chamarajapuram, Mysuru.
Mobile : 93434-30011
Email: advdineshsolanki@gmail.com
Date :25.05.2024, Place : Mysore

